ನವ ಮಾನವ ಮಾಸಿಕ

ಆಗಸ್ಟ್, ೨೦೧೨ (ವಾರ್ಷಿಕ ವಿಶೇಷ ಸಂಚಿಕೆ)



ನೆಹ್ರೂ ಅವರ ಆಧುನಿಕ ಭಾರತದ ಭವ್ಯ ದೇಗುಲಗಳ ತಳಗೆ...

ಒಂದು 'ಅಭಿವೃದ್ಧಿ'ಯ ಕಥೆಯ ಕಥೆ

ಕಡಿದಾಳು ಶಾಮಣ್ಣ
ರಾಜೇಂದ್ರ ಚೆನ್ನಿ
ಕೆ.ಸತ್ಯನಾರಾಯಣ
ಎಂ.ಬಿ.ನಟರಾಜ್
ಸವಿತಾ ನಾಗಭೂಷಣ
ಮಲ್ಲಿಕಾ ಬಸವರಾಜು
ಕೆ. ವೆಂಕಟರಾಜು
ಕೆ.ಪಿ.ನಟರಾಜ
ಸುಬ್ಬು ಹೊಲೆಯಾರ, ಅರೀಫ್ ರಾಜಾ
ಜ.ನ.ತೇಜಶ್ರೀ, ಪವಿತ್ರಾ ಪ್ರಿಯಭಾಷಿಣಿ
ಹಾಗೂ ಇನ್ನಿತರರ ಕಥೆ, ಕವನ, ನೆನಪು,
ಅನುಭವ ಕಥನ ಹಾಗೂ ಲೇಖನಗಳು

ಬೆಲೆ: ರೂ.ಮೂವತ್ತು

ಚರಕ ಆಸ್ಪತ್ರೆ

ನಂ. 5, ಹೊಸ ಬಡಾವಣೆ ಪೊಲೀಸ್ ಸ್ಟೇಷನ್ ಮುಂಭಾಗ,
ಶಂಕರಪುರಂ, ಬಿ.ಹೆಚ್. ರಸ್ತೆ, ತುಮಕೂರು.
ಫೋನ್ : 0816-2255545, 9480262688

CHARAKA HOSPITAL

No.5, Opp. NEPS, 2nd Main,
Shankara Puram, Tumkur.
Ph. : 0816-2255545, 9480262688

"ನವ ಮಾನವ ಮಾಸಿಕ" ಪತ್ರಿಕೆಯು ಒಂದು ವರ್ಷ ಪೂರೈಸಿದ್ದಕ್ಕೆ ಅಭಿನಂದನೆಗಳು ಮತ್ತು ಶುಭಾಶಯಗಳು. ಪತ್ರಿಕೆಯು ನಿರಂತರವಾಗಿ ಬರಲಿ ಎಂದು ಆಶಿಸುವೆವು.

Speciality Services

Obstetrics & Gynaecology	Paediatrics Surgery
Paediatrics	Urology
Oncosurgery	Orthopaedics
General Surgery	ENT & Dental
General Medicine	Dermatology





ದಿ: 02.10.2010 ರಂದು ಶ್ರೀ ಕೆ. ಎಂ. ಶಂಕರಪ್ಪ, ಸಾಲುಮರದ ತಿಮ್ಮಕ್ಕ ಮತ್ತು ಪ್ರೊ. ರವಿವರ್ಮ ಕುಮಾರ್‌ರವರು ಚರಕ ಆಸ್ಪತ್ರೆಯನ್ನು ಉದ್ಘಾಟಿಸಿದ ಸಂದರ್ಭ

ಜಿ. ಮಲ್ಲಿಕಾ ಬಸವರಾಜು
ಆಡಳಿತಾಧಿಕಾರಿ
ಚರಕ ಆಸ್ಪತ್ರೆ
ತುಮಕೂರು

ಡಾ. ಬಸವರಾಜು,
ಎಂ.ಬಿ.ಬಿ.ಎಸ್., ಡಿ.ಜಿ.ಒ.,
ಪಿ.ಜಿ.ಡಿ.ಹೆಚ್.ಹೆಚ್.ಎಂ.
ಚರಕ ಆಸ್ಪತ್ರೆ, ತುಮಕೂರು

ಖಾಸಗಿ ಪ್ರಸಾರಕ್ಕಾಗಿ

ನವ ಮಾನವ ಮಾಸಿಕ

ಆಗಸ್ಟ್, ೨೦೧೨(ವಾರ್ಷಿಕ ವಿಶೇಷ ಸಂಚಿಕೆ) ಪುಟ: ೩೬ ಚಂದಾ: ನೀವು ಕೊಟ್ಟಷ್ಟು
ಸಂಪಾದಕ: ಡಿ.ಎಸ್.ನಾಗಭೂಷಣ
ವಿಳಾಸ: ಎಚ್.ಐ.ಜಿ–೫, 'ಸುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ– ೫೭೭ ೨೦೪
ದೂ: ೦೮೧೮೨–೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com


ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಪತ್ರಿಕೆಯ ಪ್ರಥಮ ವಾರ್ಷಿಕ ವಿಶೇಷಾಂಕವನ್ನು ಈ ಮೂಲಕ ನಿಮ್ಮ ಕೈಗಿಡುತ್ತಿದ್ದೇವೆ. ನಾವು ಪತ್ರಿಕೆ ಶುರು ಮಾಡಿ ಒಂದು ವರ್ಷವಾಗಿ ಹೋಯಿತೇ ಎಂದು ಆಶ್ಚರ್ಯ ಪಡುತ್ತಿರುವ ಈ ಕ್ಷಣ ಧನ್ಯತಾ ಭಾವದ ಕ್ಷಣವೂ ಆಗಿದೆ. ಬಹುಶಃ ನನಗೊಬ್ಬನಿಗೇ ಅಲ್ಲ. ಈ ಪತ್ರಿಕೆಯನ್ನು ಓದಿ, ತಿದ್ದಿ ರೂಪಿಸುತ್ತಿರುವ ಗೆಳೆಯರಿಗೆ; ಪ್ರತಿ ಸಂಚಿಕೆಗೂ, ಕೇಳಿದ ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿರುವ ಲೇಖಕ ಮಿತ್ರರಿಗೆ ಸಹ. ಎಲ್ಲರಿಗಿಂತ ಹೆಚ್ಚಾಗಿ, ಇದು ತಮ್ಮದೇ ಪತ್ರಿಕೆಯೆಂಬ ಆಪ್ತ ಭಾವದಲ್ಲಿ ಪತ್ರಿಕೆಗೆ ಗಣನೀಯ ಸಂಖ್ಯೆಯಲ್ಲಿ ತಮ್ಮ ಗೆಳೆಯರನ್ನು ಚಂದಾದಾರನ್ನಾಗಿ ಮಾಡಿಕೊಟ್ಟು ಪತ್ರಿಕೆಗೆ ಒಂದು ಸುಭದ್ರ ತಳಹದಿ ಒದಗಿಸಿದ ದೂರದೂರುಗಳ ಹತ್ತಾರು ಮಿತ್ರರಿಗೆ ಕೂಡ. ಇವರೊಂದಿಗೆ ಇದೇ ಸಂದರ್ಭದಲ್ಲಿ ನೆನೆಯಬೇಕಾದವರು, ಈ ಪುಟ್ಟ ವಿಶೇಷ ಸಂಚಿಕೆಗಾಗಿ ತಮ್ಮ ಶಕ್ತ್ಯಾನುಸಾರ ಹಣದ ಸಹಾಯ ಮತ್ತು ಜಾಹೀರಾತುಗಳನ್ನು ಒದಗಿಸಿದ ಪತ್ರಿಕೆಯ ಹಿತೈಷಿಗಳು ಮತ್ತು ಈ ಸಂಚಿಕೆಯ ಕಲಾವಿದರಾದ ಡಾ. ಸಿ. ರವೀಂದ್ರನಾಥ್ ಮತ್ತು ರವಿ ಪ್ರಸಾದ್ ಎಚ್. ಆರ್.

ಪತ್ರಿಕೆಯ್ಲು ಓದುಗರಲ್ಲಿ ಹೆಚ್ಚಿನವರು ಹೊಸ ತಲೆಮಾರಿನವರು. ಇದೊಂದು ಸಂತೋಷದ ಸಂಗತಿ. ಏಕೆಂದರೆ ಸಮಾಜವಾದ ಕುರಿತ ನಿಶ್ಚಿತ ಕಲ್ಪನೆಯಿಲ್ಲದ ಹೊಸ ತಲೆಮಾರಿನ ಜನರ ಮುಕ್ತ ಅಭಿಪ್ರಾಯ–ಅನಿಸಿಕೆಗಳ ಪ್ರಯೋಜನ ಪತ್ರಿಕೆಗೆ ಆಗುತ್ತಿದೆ. ನಿಜ, ಇವರಲ್ಲಿ ಕೆಲವರು, ಪತ್ರಿಕೆ ಹೆಚ್ಚು ರಾಜಕೀಯವಾಗಿದೆ ಎಂಬ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ ಪತ್ರಿಕೆ ರಾಜಕೀಯವನ್ನು ಕೇವಲ ವ್ಯಾವಹಾರಿಕ ರಾಜಕಾರಣವಾಗಿ ಅಲ್ಲ; ನಮ್ಮ ಬದುಕಿನ ಬಗ್ಗೆ ಒಂದು ಹೊಸ ಮತ್ತು ಸಮಗ್ರ ದೃಷ್ಟಿಕೋನವನ್ನು ರೂಪಿಸುವ ತತ್ವ ಜ್ಞಾನದ ಸ್ತರದಲ್ಲಿ ಪ್ರಸ್ತುತಪಡಿಸುವ ಪ್ರಯತ್ನದಲ್ಲಿ ತೊಡಗಿದೆ ಎಂಬುದನ್ನು ಗಮನಿಸಬೇಕೆಂದು ಇಂತಹರನ್ನು ಕೇಳಿಕೊಳ್ಳುವೆ.

ಇತ್ತೀಚಿನ ವರ್ಷಗಳಲ್ಲಿ ಈ ದೇಶದ ಒಟ್ಟಾರೆ ಆದಾಯ ಹೆಚ್ಚಿದಷ್ಟೂ –ಋಣ ಬಾಧ್ಯತೆಗಳು ಏನೇ ಇರಲಿ–ದೇಶ ಏಕೆ ಹೆಚ್ಚೆಚ್ಚು ಅಶಾಂತವಾಗುತ್ತಿದೆ, ಹಿಂಸಾತ್ಮಕವಾಗುತ್ತಿದೆ, ಮನುಷ್ಯ ಸ್ಪರ್ಶವನ್ನೇ ಕಳೆದುಕೊಳ್ಳುತ್ತಿದೆ, ಆತ್ಮಹತ್ಯೆಗಳ ಕಡೆ ತುಡಿಯುತ್ತಿದೆ ಎಂಬುದನ್ನು, ಇದನ್ನು ಪುಷ್ಟೀಕರಿಸುವ–ಹೆಚ್ಚು ವಿವರಣೆಯ ಅಗತ್ಯವೇ ಇಲ್ಲದಷ್ಟು ಕಣ್ಣಿಗೆ ರಾಚುವಂತಿರುವ–ಇತ್ತೀಚಿನ ಬೆಳವಣಿಗೆ ಮತ್ತು ಘಟನೆಗಳ ಆಳಕ್ಕೆ ಹೋಗಿ ಅರ್ಥ ಮಾಡಿಕೊಳ್ಳತೊಡಗಿದಾಗ, ಇವೆಲ್ಲ ಈ ದೇಶ ತನ್ನ ಚರ್ಮದಾಚೆಗೆ ಜಿಗಿಯುವ ಅಸಹಜ 'ಸಾಹಸ'ದ ಪರಿಣಾಮಗಳು ಎಂಬುದು ಗೊತ್ತಾಗುತ್ತದೆ. ಅಂದರೆ ದೇಶ ತನ್ನ ಹಳೆಯ 'ಅಸಹ್ಯಕರ' ಗುರುತನ್ನೇ, ಸಂಸ್ಕಾರವನ್ನೇ, ಸಾಮುದಾಯಿಕ ನೆನಪುಗಳನ್ನೇ, ಮೂಲ ನಂಬಿಕೆಗಳನ್ನೇ ಅಳಿಸಿಕೊಂಡು ತನ್ನನ್ನು ತಾನೇ ನಿರಾಕರಿಸಿಕೊಳ್ಳುವ ಹವಣಿಕೆಯಲ್ಲಿರುವಂತೆ ತೋರುತ್ತದೆ. ಪಶ್ಚಿಮದ ಆಧುನಿಕತೆಯ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು ಬಹುಕಾಲ ಕೀಳರಿಮೆಯಿಂದ ನರಳಿದ್ದ ಈ ದೇಶ ಈಗ 'ಹೊಸ ಆರ್ಥಿಕ ನೀತಿ'ಯ ಹೆಸರಿನಲ್ಲಿ ತಾನು 'ಅದಾ'ಗುವ ದಿಢೀರ್ ಸುವರ್ಣಾಕಾಶ ಸಿಕ್ಕಂತೆ 'ಹೊಸ ಮತಾಂತರಿ'ಯ ಆವೇಶದಲ್ಲಿ ಮೆರೆಯತೊಡಗಿದೆ; ಮೊರೆಯತೊಡಗಿದೆ. ಈ ಮೊರೆತ ಎಂತಹ ಹುಚ್ಚಿಡಿಸುವ ತಾರಕವನ್ನು ಮುಟ್ಟಿದೆಯೆಂದರೆ, ಅದು ಈವರೆಗೂ ಮುಟ್ಟದ ವಲಯಗಳನ್ನೆಲ್ಲ ಆವರಿಸಿ, ನಮ್ಮ ಬಹುಸಂಖ್ಯಾತ 'ದಲಿತ' ಮತ್ತು 'ಹಿಂದುಳಿದ' ನಾಮಾಂಕಿತ ವರ್ಗಗಳಲ್ಲೂ ತಳಮಳವನ್ನು ಸೃಷ್ಟಿಸಿವೆ; ಅವು ಹೊಸ ಹೊಸ 'ಅಸ್ಮಿತೆ'ಗಳನ್ನು ಹುಡುಕಿಕೊಂಡು ಹೊರಟಿವೆ. ಹಾಗಾಗಿ ಅವುಗಳಿಗೆ ನಮ್ಮ ಪಾರಂಪರಿಕ ಅಸ್ಮಿತೆಯ ಮೂಲಾಧಾರವಾದ ನಮ್ಮ ಭಾಷೆ ಎಂಬುದು 'ಅನ್ಯ'ವೆನಿಸಿ; ಹೊರೆಯಾಗಿ, ಸಲ್ಲದ ಬಾಧ್ಯತೆಯಾಗಿ ಕಾಣತೊಡಗಿದೆ.



ಇಂತಹ ಹೊಸ'ಕಾಣ್ಕೆ'ಗಳು ಸೃಷ್ಟಿಸುತ್ತಿರುವ ಹಿಂಸೆ ಸಾಮಾಜಿಕವಾಗಿ ಸಮಗ್ರಹೆನಿಸುವ ಹೊಸ 'ಅಸ್ಮಿತೆ'ಯೊಂದನ್ನು ರೂಪಿಸುವ ಆಶಯ ಹೊಂದಿದ್ದ ಈವರೆಗಿನ ಎಲ್ಲ ಅನುಸಂಧಾನಾತ್ಮಕ ರಾಜಕೀಯ ಪ್ರಯತ್ನಗಳನ್ನೂ ವಿಫಲಗೊಳಿಸಿದೆ. ಸಮಾಜವಾದದ ಇಂದಿನ ನಿಜವಾದ ಬಿಕ್ಕಟ್ಟು ಇಲ್ಲಿದೆ ಎಂದು ನಾನು ಭಾವಿಸಿದ್ದೇನೆ. ನಿಜ, ಈ ಪತ್ರಿಕೆ ಮುಖ್ಯವಾಗಿ ಡಾ. ರಾಮಮನೋಹರ ಲೋಹಿಯಾ ಪ್ರತಿಪಾದಿಸಿದ ಸಮಾಜವಾದಿ ವಿಚಾರಧಾರೆಯನ್ನು ತನ್ನ ಮೂಲ ನಂಬಿಕೆಯನ್ನಾಗಿರಿಸಿಕೊಂಡಿದೆ. ಆದರೆ ಲೋಹಿಯಾ ಸಾಮಾನ್ಯ ಅರ್ಥದ ಸಮಾಜವಾದಿಯಲ್ಲ; ಆತನೊಬ್ಬ ಅಲೆಮಾರಿ ಅವಧೂತರ ವಿಶಿಷ್ಟ ಭಾರತೀಯ ಪರಂಪರೆಯ ಬಳುವಳಿ ಎಂಬುದನ್ನು ಗಮನಿಸಿಯೇ ಪತ್ರಿಕೆ ಅವರ ವಿಚಾರಗಳನ್ನು ಆಳವಾಗಿ ಶೋಧಿಸುವ, ವಿಸ್ತರಿಸುವ ಪ್ರಯತ್ನ ಮಾಡುತ್ತಿದೆ ಎಂಬುದನ್ನೂ ಓದುಗರು ಗಮನಿಸುವರು ಎಂದು ಭಾವಿಸುತ್ತೇನೆ. ಇದರ ಪರಿಣಾಮವಾಗಿಯೇ, ಈ ಸಂಚಿಕೆಯಲ್ಲಿ ಕಿರಿಯ ಗೆಳಯ ಕೆ.ಪಿ. ನಟರಾಜ್ ಗುರುತಿಸಿರುವಂತೆ, ಈ ಪತ್ರಿಕೆ ತನ್ನೆಲ್ಲ ಬರಹಗಳ ಮೂಲಕ ತನ್ನ ಮಿತಿಗಳಲ್ಲೇ ಹೊಸ 'ಸೌಂದರ್ಯ ಶಾಸ್ತ್ರ'ವನ್ನು ಶೋಧಿಸುವ ನಮ್ರ ಪ್ರಯತ್ನದಲ್ಲಿ ತೊಡಗಿದೆ.

ಮನುಷ್ಯನ ಮೂಲ ತಹತಹಿಕೆ, ದಾಹ, ಗುರಿ, ತನ್ನ ಇಂದ್ರಿಯಗಳ ಮೂಲಕ ಸದಾ ಸಾಧಿಸಿಕೊಳ್ಳಲೆತ್ನಿಸುವ ಇಂದ್ರಿಯಾತೀತ ಅನುಭವದ ಪರಿಪೂರ್ಣತೆಯದೇ ಆಗಿದೆ. ಇದೇ ಸೌಂದರ್ಯಾನುಭೂತಿ. ಇದರ ಮೂಲ ಧಾತುಗಳು ಆಹಾರ, ಬಟ್ಟೆ, ವಸತಿ, ಒಡನಾಟ, ಲೈಂಗಿಕತೆಗಳೇ ಮುಂತಾದ 'ಲೌಕಿಕ' ಅಸ್ತಿತ್ವದ ಆಧಾರಗಳೇ ಆಗಿವೆ. ಆದರೆ ಇವನ್ನು ಇಂದು ಯಾವುದೇ ಮಿತಿಯಿಲ್ಲದ ಪ್ರಮಾಣ ಅಥವಾ ಗಾತ್ರದ ಪರಿಕಲ್ಪನೆಯೊಂದಿಗೆ ಪ್ರಸ್ತುತಪಡಿಸುತ್ತಿರುವುದೇ ಸೌಂದಾರ್ಯಾನುಭೂತಿಯ ಅಶ್ಲೀಲೀಕರಣಕ್ಕೂ ಕಾರಣವಾಗಿದೆ. ಇದೇ ಮೇಲೆ ಪ್ರಸ್ತಾಪಿಸಿದ ಯಾರಿಗಾದರೂ ಹುಚ್ಚಿಡಿಸುವಂತಹ ಮೊರೆತವನ್ನು ಸೃಷ್ಟಿಸಿದೆ. 'ಅಭಿವೃದ್ಧಿ' ಎಂಬ ಹಾಹಾಕಾರವನ್ನೂ ಸೃಷ್ಟಿಸಿದೆ.

ಇದು ಪಶ್ಚಿಮದ ಆಧುನಿಕತೆಯ ಕೊಡುಗೆಯಾಗಿ ಬಂದ 'ಸಮಾನತೆ' ಎಂಬ ಪರಿಕಲ್ಪನೆಯ ಪರಿಣಾಮ ಮತ್ತು ಈ 'ಸಮಾನತೆ' ಸಮಾಜವಾದದ ಕೇಂದ್ರ ತತ್ವ ಎಂಬುದು ನಿಜ. ಆದರೆ ಲೋಹಿಯಾ ಗಾಂಧೀಜಿಯಿಂದ ಪಡೆದ ಹೊಸ ಕಾಣ್ಕೆಯ ಸ್ಫೂರ್ತಿಯಲ್ಲಿ ಇಂತಹ ಸಮಾನತೆಯಲ್ಲಿನ ಅಪಾಯ ಅರಿತಿದ್ದರು. ಹಾಗಾಗಿ ಅವರು ಅದಕ್ಕೆ 'ಸಮತೋಲನ' ಎಂಬರ್ಥದಲ್ಲಿ 'ಸಮತೆ' ಎಂಬ ಹೊಸ ವ್ಯಾಖ್ಯಾನ ನೀಡಿ ಸಮಾಜವಾದಕ್ಕೆ ಒಂದು ಹೊಸ ಸೌಂದಾರ್ಯಾತ್ಮಕತೆಯನ್ನೂ ಒದಗಿಸಿದರು. ಇದೇ ಮಿತಿಗಳುಳ್ಳ ಸರಳ ಸಭ್ಯ ಬದುಕಿನ ಮೂಲಕ ಸಾಧಿಸಬಹುದಾದ ಹೊಸ ಸಮಾನತೆಯ, ಹೊಸ ಸಂದಾರ್ಯಾನುಭೂತಿಯ ಲೋಹಿಯಾ ದರ್ಶನ. ಇಲ್ಲಿ ಸಮಾನತೆ ಎಂಬುದು ಲೌಕಿಕ ಮೌಲ್ಯ ಹೇಗೋ ಹಾಗೇ ಅಧ್ಯಾತ್ಮಿಕ ಮೌಲ್ಯವೂ ಹೌದು, ಇದೇ ಅವರ ನವ ನಾಗರೀಕತೆ ಮತ್ತು ನವ ಮಾನವನ ಕನಸಿನ ತಾತ್ವಿಕ ಆಧಾರ.

ಪತ್ರಿಕೆ ಈ ಅಮೂರ್ತ ಸತ್ಯವನ್ನು ಮೂರ್ತಗೊಳಿಸಬಲ್ಲ ರಾಜಕಾರಣದ ಪರಿಶೋಧದಲ್ಲಿದೆ. ಈ ಸಂಚಿಕೆ ಇಂತಹ ವಿಶೇಷ ಪರಿಶೋಧವೊಂದರ ಪುಟ್ಟ ಪ್ರತೀಕವಷ್ಟೆ ಸಹಜವಾಗಿಯೇ 'ಅಭಿವೃದ್ಧಿ ಮೀಮಾಂಸೆ' ಈ ಸಂಚಿಕೆಯ ಕೇಂದ್ರ ಕಾಳಜಿಯಾಗಿದೆ. ಮಿಕ್ಕೆಲ್ಲ ಬರಹಗಳೂ ಇದಕ್ಕೆ ಪೂರಕವೆನ್ನಿಸುವಂತೆ ಇವೆ. ನಿಮಗೇನನ್ನಿಸುತ್ತದೋ ದಯವಿಟ್ಟು ತಿಳಿಸಿ.

–ಸಂಪಾದಕ

ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಈ ಬಾರಿ(ಜುಲೈ ಸಂಚಿಕೆ) ಸಂಪಾದಕೀಯ ತುಂಬಾ ಹಿಡಿಸಿತು. ಆದರೆ ಪ್ರತಿ ಬಾರಿಯೂ ರಾಜಕೀಯವೇ ಪ್ರಮುಖ ಸ್ಥಾನದಲ್ಲಿರುವುದರ ಬದಲು ಸಾಂಸ್ಕೃತಿಕ-ಸಾಮಾಜಿಕ ಸಂಗತಿಗಳು ಸಂಪಾದಕೀಯವನ್ನು ಅಲಂಕರಿಸುವುದು ವಾಸಿಯೇನೋ. ಪ್ರವಾಸಿ ಕಂಡ ಇಂಡಿಯಾದಂತಹ ವೈವಿಧ್ಯಮಯ ಲೇಖನಗಳಿದ್ದರೆ ವಾಸಿ.

-ಎಂ.ಆರ್. ರಾಮಶೇಷ, ಮೈಸೂರು

ಅಂಬೇಡ್ಕರ್ ವ್ಯಂಗ್ಯಚಿತ್ರ ಕುರಿತಂತೆ ನಮ್ಮ ಕವಿ ಸಿದ್ಧಲಿಂಗಯ್ಯನವರೂ ಸೇರಿದಂತೆ ಕೆಲವು ದಲಿತ ಲೇಖಕರು ಮತ್ತು ಚಿಂತಕರು ಹಾಗೂ ಇನ್ನೂ ಕೆಲವು ಸಹಮನಸ್ಕರು ಮಾಡಿರುವ ಟೀಕೆ ಮತ್ತು ವಿಮರ್ಶೆ(ನವ ಮಾನವ ಮಾಸಿಕ, ಜುಲೈ, ೨೦೧೨)ಯಲ್ಲಿ ಬರೀ ಉದ್ವೇಗವಿದೆಯೇ ಹೊರತು ಹುರುಳಿಲ್ಲ ಎನಿಸುತ್ತದೆ.

ಚಾಟಿ, ನೇಣು ಇತ್ಯಾದಿಗಳನ್ನು ರೂಪಕವಾಗಿಯೂ ಬಳಸಬಾರದೆನ್ನುವ ವಾದ ಸಾಹಿತ್ಯ-ಸಂಸ್ಕೃತಿ ನಿರೂಪಣೆಗಳ ದೃಷ್ಟಿಯಿಂದ ಹಾಸ್ಯಾಸ್ಪದವೆನ್ನಿಸುತ್ತದೆ. ವಿವಾದಿತ ವ್ಯಂಗ್ಯಚಿತ್ರವನ್ನು ನೇರ ಕಣ್ಣುಗಳಲ್ಲಿ ನೋಡಬಯಸುವವರಿಗೆ, ನೆಹರು ಹಿಡಿದ ಚಾಟಿ ಉದ್ದೇಶಿತವಾಗಿರುವುದು ಸ್ವತಃ ಚಾಟಿ ಮತ್ತು ಲಗಾಮು ಹಿಡಿದಿರುವ ಅಂಬೇಡ್ಕರ್ ಕಡೆಗಲ್ಲ, ಅವರು ಕೂತಿರುವ ಬಸವನಹುಳುವಿನತ್ತ ಎಂಬುದು ತಿಳಿಯುತ್ತದೆ.

-ಎಂ.ಎಸ್. ನಾಗರಾಜು, ಬೆಂಗಳೂರು

ಮೈಸೂರಿನಲ್ಲಿ ಸಮಾಜವಾದಿ ಚಳುವಳಿಯ ಮಹಾ ಪೋಷಕರಂತಿದ್ದ ಟಿ.ಎನ್ ನಾಗರಾಜ್ ಅವರನ್ನು ಪರಿಚಯಿಸಿದ್ದಕ್ಕಾಗಿ ವಂದನೆಗಳು.

ಆದರೆ ಬರಹದಲ್ಲಿ ಒಂದೆರಡು ತಪ್ಪು ಮಾಹಿತಿ ಇದ್ದಂತಿದೆ. ಒಂದು, ವೇದಾಂತ ಹೆಮ್ಮಿಗೆ ಎಂದೂ ನಾಗರಾಜರ ಪಡೆಯೊಂದಿಗೆ ಬೆರತವರಲ್ಲ. ಎರಡು, ಪ.ಮಲ್ಲೇಶ್ 'ಮಾನವ'ದ ಪ್ರಕಾಶಕರಾಗಿರಲಿಲ್ಲ. ಅದು ಅವರ ಮಯೂರ ಮುದ್ರಣಾಲಯದಲ್ಲಿ ಮುದ್ರಿತವಾಗುತ್ತಿತ್ತಷ್ಟೆ. ಹಾಗೂ ಅದರ ಸಂಪಾದಕ ಮಂಡಳಿಯಲ್ಲಿ ಜಿ.ಎಚ್. ನಾಯಕರು ಎಂದೂ ಇರಲಿಲ್ಲ.

-ಬಿ.ಎನ್. ಶ್ರೀರಾಮ ಮೈಸೂರು.

ಜೂನ್ ಸಂಚಿಕೆ ತಲುಪಿದೆ. ಜುಲೈ ಸಂಚಿಕೆಯನ್ನು ಎದುರು ನೋಡುತ್ತಿರುವೆ. ಮಳೆ ಇಲ್ಲದೆ ಭೂಮಿ ಬಾಯಾರಿರುವ ಇಂದಿನ ಸಂದರ್ಭದಲ್ಲಿ ರೈತರ ಸಮಸ್ಯೆ ಕುರಿತ ಎಲ್ಲ ಲೇಖನಗಳೂ ನನಗೆ ಮನನೀಯವಾಗಿ ಕಂಡವು. ಹಾಗೇ ಇಂದು ನಮ್ಮನ್ನು ಕಾಡುತ್ತಿರುವ ಜಾತಿ ಸಮಸ್ಯೆ ಕುರಿತಂತೆ ಇರುವ ಯೋಗೇಂದ್ರ ಯಾದವ್ ಅವರ ಲೇಖನವೂ ಆಸಕ್ತಿ ಹುಟ್ಟಿಸಿತು.

-ಗಿರೀಶ್. ಕೆ, ನನ್ನಿವಾಳ

ಇಂದಿನ ನಮ್ಮ ಆರ್ಥಿಕ ದುಃಸ್ಥಿತಿ, ಬೆಲೆ ಏರಿಕೆ, ಅತಿ ಪ್ರಸರಣ ಇವೆಲ್ಲ ೧೯೫೦-೭೦ರ ನೆಹ್ರೂವಿಯನ್ ಆರ್ಥಿಕ ನೀತಿಗಳ ಫಲ. ಜಾಗತೀಕರಣಕ್ಕೆ ಸಿದ್ಧತೆ ಮಾಡಿಕೊಳ್ಳದೆ ಈಗ ಅನುಭವಿಸುತ್ತಿದ್ದೇವೆ.

ಧಾರ್ಮಿಕ ಅವಮಾನ, ಸಾಂಸ್ಕೃತಿಕ ವಿಕೃತಿ ಎಂದು ಈ ಹಿಂದೆ ಹಲವರು ಕೆಲವು ವಿಚಾರಗಳನ್ನು ಆಕ್ಷೇಪಿಸಿದಾಗ ಅದನ್ನು ಮೂಲಭೂತವಾದ ಎಂದು ಜರಿದವರಲ್ಲಿ ಕೆಲವರು ಈಗ ಅಂಬೇಡ್ಕರ್ ವ್ಯಂಗ್ಯಚಿತ್ರದ ಸಂದರ್ಭದಲ್ಲಿ ಅದೇ ಮನೋಭಾವ ತೋರುತ್ತಿರುವುದು ವಿಪರ್ಯಾಸ!

-ಎಂ. ಪ್ರಭಾಕರ ಜೋಷಿ, ಮಂಗಳೂರು

ಪಠ್ಯಪುಸ್ತಕಗಳ ರಾಜಕೀಯೀಕರಣದ ಮೂಲಕ ಬೌದ್ಧಿಕ ಸ್ವಾತಂತ್ರ್ಯದ ಹರಣ ಮಾಡುತ್ತಿರುವ ರಾಜಕಾರಣಿಗಳ ಪಾಳೇಗಾರಿಕೆ ನಮ್ಮ ದೇಶವನ್ನು ಎತ್ತ ಕೊಂಡೋಯ್ಯುವುದೋ ಏನೋ!

ಅಂದಹಾಗೆ ಸವಿತಾರ 'ಪ್ರವಾಸಿ ಕಂಡ ಇಂಡಿಯಾ' ಪುಸ್ತಕವಾಗಿ ಹೊರಬರುವುದನ್ನು ಎದುರು ನೋಡುತ್ತಿದ್ದೇವೆ. ಹೊರನೋಟ, ಒಳನೋಟಗಳ ಸುಂದರ ಮಿಶ್ರಣ ಅದಾಗಿದೆ.

-ಟಿ.ಎಲ್ ರೇಖಾಂಬ, ಶಿವಮೊಗ್ಗ

ಶ್ರೀ ಡಿ.ಎಸ್. ನಾಗಭೂಷಣ ಅವರ ಬಗ್ಗೆ ಮಾತನಾಡದೆ, 'ನವ ಮಾನವ'ದ ಬಗ್ಗೆ ಮಾತನಾಡುವುದು ಕಷ್ಟ ಮತ್ತು ಸುಲಭ. ಏಕೆಂದರೆ ಸಂಪಾದಕನ ವ್ಯಕ್ತಿತ್ವದ ಪ್ರಭಾವಳಿಯಿಂದಲೇ ಬದುಕಿದ್ದು, ಅನಂತರ ಅಳಿಯುವ ಬಗೆ ಇಲ್ಲಿನದಲ್ಲ. ಆದರೆ, ಇಲ್ಲಿ ಬರುವ ಎಲ್ಲ ಬರೆಹಗಳ ಆಯ್ಕೆ ಮತ್ತು ರಚನೆಯ ಹಿಂದೆ ಅವರ ಕಾಳಜಿ ಮತ್ತು ಪರಿಶ್ರಮಗಳು ಇರುವುದೂ ಅಷ್ಟೇ ನಿಜ.

ಧೈರ್ಯ, ಪ್ರಾಮಾಣಿಕತೆ, ನಿರ್ದಿಷ್ಟ ತಾತ್ವಿಕತೆಗಳು ಮತ್ತು 'ಪಾರ್ಟಿಸಾನ್' ಆಗದ ಎಚ್ಚರಗಳು ಯಾವುದೇ ಪತ್ರಿಕೆಗೆ ಅನಿವಾರ್ಯ. 'ನವ ಮಾನವ'ದಲ್ಲಿ ಅವೆಲ್ಲವೂ ಒಟ್ಟುಗೂಡಿವೆ. ಇಲ್ಲಿನ ತಾತ್ವಿಕತೆಯ ಮೂಲಸೆಲೆಯು ಲೋಹಿಯಾ ಸಮಾಜವಾದವೇ ಆದರೂ, ಅದು ಮೈಪಡೆಯುತ್ತಿರುವುದು, ಸಮಕಾಲೀನ ವಿದ್ಯಮಾನಗಳಿಗೆ ನೀಡುವ ಪ್ರತಿಕ್ರಿಯೆಗಳ ಮೂಲಕವಾಗಿಯೇ. ಇಲ್ಲವಾದರೆ, ಈ ಪತ್ರಿಕೆಯು ಪಳೆಯುಳಿಕೆ ಆಗುತ್ತಿತ್ತು. 'ಮಾಹಿತಿ, ವರದಿ, ವಿಶ್ಲೇಷಣೆ, ವಿಮರ್ಶೆ ಮತ್ತು ಟೀಕೆ-ಟಿಪ್ಪಣಿಗಳೆಂಬ ಸಲಕರಣೆಗಳನ್ನು ಬಳಸಿಕೊಳ್ಳುವ 'ನವಮಾನವ', ಅಪ್ರಿಯ ಸತ್ಯಗಳನ್ನು ಹೇಳಲು ಹಿಂಜರಿದಿಲ್ಲ. ರಾಜಕೀಯ ಸರಿತನದ ಹೆಸರಿನಲ್ಲಿ ಸಾಮಾಜಿಕ/ಸಾಂಸ್ಕೃತಿಕ ಸತ್ಯಗಳನ್ನು ಮುಚ್ಚಿಟ್ಟಿಲ್ಲ. ಸಾಹಿತ್ಯ ಕೇಂದ್ರಿತವಾಗದೆ ಇರುವುದು ಅದರ ಒಳ್ಳೆಯ ಗುಣ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮೂಡಿಬರುವ ಹುಸಿಗಳನ್ನು ತೋರಿಸಿಕೊಡುವ ಕೆಲಸವನ್ನು ಅದು ಸತತವಾಗಿ ಮಾಡುತ್ತಿದೆ. ಈ ಹಿಂದಿನ ಸಂಚಿಕೆಯೊಂದರಲ್ಲಿ, ಶ್ರೀ ದೇವನೂರ ಮಹಾದೇವರು ಸಂಪಾದಿಸಿದ ಪ್ರಜಾವಾಣಿ ಪುರವಣಿಯ ಬಗ್ಗೆ ಹೇಳಿರುವ ಕೆಲವು ಮಾತುಗಳು, ಅದಕ್ಕೆ ಒಂದು ಉದಾಹರಣೆ.

ನಾವು ಬಯಸುವ ಸಾಮಾಜಿಕ ಪರಿವರ್ತನೆಗಳಿಗೂ ವಾಸ್ತವದಲ್ಲಿ ಆಗುತ್ತಿರುವ ಜೀವನಕ್ರಮದ ಬದಲಾವಣೆಗೂ ಇರುವ ಅಂತರವನ್ನು ಗಮನಿಸಿದಾಗ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದು 'ಐಡಿಯಲಾಜಿಕಲ್ ಪಾಲಿಟಿಕ್ಸ್' ಮತ್ತು 'ಅಜಿಟೇಶನಲ್/ಆಕ್ಟಿವಿಸ್ಟ್ ಪಾಲಿಟಿಕ್ಸ್'ಗಳ ನಡುವೆ ಇರುವ ಅಂತರ. ಇದನ್ನು ಗ್ರಹಿಸದೆ ಹೋದರೆ, ಹೋರಾಟಗಳು ನಡೆಯುತ್ತಲೇ ಇರುತ್ತವೆ. ದುರಂತಗಳು ಆಗುತ್ತಲೇ ಇರುತ್ತವೆ. 'ನವಮಾನವ' ಹಿಂಸೆಯ ಬಹುಮುಖೀ ಸಾಧ್ಯತೆಗಳು ಮತ್ತು ಅದನ್ನು ಮೀರುವ ಬಗೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಬೇಕು. 'ಕಾನೂನು' ಕೂಡ ಒಪ್ಪಿಕೊಳ್ಳುವ ರಕ್ತರಹಿತವಾದ ಹಿಂಸೆಯು, ರಕ್ತಸಹಿತವಾದ ಹಿಂಸೆಗಿಂತ ಅಪಾಯಕಾರಿಯಲ್ಲವೇ? 'ಪ್ರಜಾಪ್ರಭುತ್ವ', 'ಶಿಕ್ಷಣ' ಮುಂತಾದ ಪರಿಕಲ್ಪನೆಗಳೂ ಇದೇ ಗುಂಪಿಗೆ ಸೇರುತ್ತವೆ. ಅಂತೆಯೇ, ಈ ಪತ್ರಿಕೆಯು 'ಅದು ಸರಿ ಅಥವಾ ಇದು ಸರಿ' ಎನ್ನುವ ಬೈನರಿಗಳ ರಾಜ್ಯಭಾರಕ್ಕೆ ಅವಕಾಶ ಸಿಗದಂತೆ ಎಚ್ಚರ ವಹಿಸಬೇಕು, ಹಾಗೆಂದರೆ, ಶತ್ರುವನ್ನೂ ಗುರುತಿಸದಿರುವ ನಯವಂಚಕತನವಲ್ಲ.

ಲೋಹಿಯಾ ಅವರು ತಿಳಿಸಿಕೊಟ್ಟ ಸಮಾಜವಾದದ ಬಗೆಗಿನ ಒಲುವೆಯು ಈ ಪತ್ರಿಕೆಯನ್ನು ನಿಯಂತ್ರಿಸಿರುವುದು ಸಹಜ. ಆ ತಿಳಿವಳಿಕೆಯು ಕಾಲಕ್ರಮದಲ್ಲಿ ಬೆಳೆದುಬಂದ ಬಗೆ ಮತ್ತು ಪಡೆದುಕೊಂಡ ಹೊಸ ಆಯಾಮಗಳು ಕೂಡ 'ನವಮಾನವ'ದ ರೂಪಣದಲ್ಲಿ ಪಾತ್ರವಹಿಸಿವೆ. ಆದರೆ, ತನ್ನಂತೆಯೇ ಪ್ರಗತಿಪರವಾದರೂ ತಾತ್ವಿಕವಾಗಿ ಭಿನ್ನವಾಗಿರಬಹುದಾದ ನೆಲೆಗಳನ್ನು ಇನ್ನಷ್ಟು ಸಹಾನುಭೂತಿಯಿಂದ ನೋಡುವುದು ಅಗತ್ಯ. ಇಲ್ಲವಾದರೆ, ದುಷ್ಟರಲ್ಲಿ ಒಗ್ಗಟ್ಟು ಮತ್ತು ಪ್ರಗತಿಪರರಲ್ಲಿ ಭಿನ್ನಮತಗಳು ಜಾಸ್ತಿಯಾಗುತ್ತವೆ.

ಅಂದಹಾಗೆ, 'ನವಮಾನವ'ದ ಅಥವಾ ಅಂತಹುದೇ ನಿಯತಕಾಲಿಕಗಳ ಶೈಲಿಯ ಬಗ್ಗೆ ಒಂದು ಮಾತು. ವ್ಯಂಗ್ಯ, ಕಟಕಿ ಮತ್ತು ವಿಟ್‌ಗಳು, ನೇರವಾದ ಮಾತುಗಳಿಗಿಂತ ಹೆಚ್ಚು ಪರಿಣಾಮಕಾರಿಯಲ್ಲ. ಕೋಪ ಸರಿ, ಆಕ್ರಮಣಶೀಲತೆ ಅಲ್ಲವೇನೋ.

ಈ ದಿನಗಳಲ್ಲಿ ಇಂದೂಧರ ಹೊನ್ನಾಪುರ ಅವರ 'ಸಂವಾದ' ಮತ್ತು 'ನವಮಾನವ'ಗಳು ಮಾತ್ರವೇ ಖಚಿತವಾದ ರೂಪುರೇಷೆಗಳನ್ನು ಪಡೆದುಕೊಂಡಿರುವ ಹಾಗೂ ಗಾಂಭೀರ್ಯವನ್ನು ಕಾಪಾಡಿಕೊಂಡಿರುವ ನಿಯತಕಾಲಿಕಗಳಾಗಿವೆ. ಒಳ್ಳೆಯ ಪತ್ರಿಕೆಗಳು ನಿಂತುಹೋಗುತ್ತಿರುವ, ಕಮಿಟೆಡ್ ಆದ ಪುಸ್ತಕದ ಅಂಗಡಿಗಳು ಮುಚ್ಚಿಹೋಗುತ್ತಿರುವ ಈ ಕೆಟ್ಟ ಕಾಲದಲ್ಲಿ ಇವುಗಳನ್ನು ಉಳಿಸುವುದು, ಬೆಳೆಸುವುದು ಎಲ್ಲರ ಕರ್ತವ್ಯ.

-ಎಚ್.ಎಸ್. ರಾಘವೇಂದ್ರ ರಾವ್, ಬೆಂಗಳೂರು

'ನವ ಮಾನವ' ಪತ್ರಿಕೆಯನ್ನು ಓದುತ್ತಿರುವೆ. ಸಮಾಜವಾದ ಕುರಿತ ವಿಚಾರಗಳು, ಸಮಾಜವಾದಿಗಳ ಚಿಂತನೆಗಳು, ವರದಿಗಳನ್ನು ಪತ್ರಿಕೆಯಲ್ಲಿ ಓದುತ್ತ ಬಂದಿರುವೆ. ಈ ಸಮಾಜವಾದದ ಆಶಯಗಳು ತಾತ್ವಿಕವಾಗಿ ಸರಿಯೇ. ಈ ಹೊತ್ತಿನ ರಾಜಕೀಯ, ಸಮಾಜ ಅಭಿವೃದ್ಧಿ, ಜಾಗತೀಕರಣದ ವಿಸ್ತಾರಗಳು ನಮ್ಮನ್ನು ದಿಕ್ಕುಗೇಡಿಗಳನ್ನಾಗಿ ಮಾಡುತ್ತಿವೆ.

'ಇಲ್ಲಿರುವುದು ಸುಮ್ಮನೆ' ಅನ್ನುವ ಸಮುದಾಯವು ಎಲ್ಲವನ್ನು ಇಲ್ಲಿಯೇ ಮಾಡುತ್ತಿದೆ. 'ಮನುಷ್ಯ ಜಾತಿ ಒಂದೇ' ಎಂದು ಓದುತ್ತ ಬಂದವರೆಲ್ಲ 'ನಮ್ಮ ಜಾತಿ' ಎಂದು ಹೇಳುತ್ತ ನಿಂತಿದ್ದಾರೆ. ಕೋಟಿಗಟ್ಟಲೇ 'ನಿವ್ವಳ ಲಾಭ' ಮಾಡಿಕೊಳ್ಳುವ ವ್ಯಕ್ತಿಗಳೇ ಈಗ ಜಾಸ್ತಿಯಾಗುತ್ತಿದ್ದಾರೆ. ಇಂಥದ್ದರ ನಡುವೆ ಸಮಾಜವಾದವನ್ನು ಓದುವ, ತಿಳಿಯುವ, ದಕ್ಕಿಸಿಕೊಳ್ಳುವ ಸಮುದಾಯವನ್ನು ರಚಿಸುವ ದಾರಿ ಯಾವುದೆಂದು ಹುಡುಕಬೇಕಾಗಿದೆ.

ಈ ಹೊತ್ತಿನ ಯುವಶಕ್ತಿಯಲ್ಲಿ ಲೋಹಿಯಾ, ಗಾಂಧಿ, ಅಂಬೇಡ್ಕರ್ ಅವರ ಬರಹಗಳನ್ನು ಅವುಗಳ ತಿರುಳನ್ನು ತುಂಬುವ ಕೆಲಸ - ನಿರಂತರವಾಗಿ ನಡೆಯಬೇಕು. ಇದು ಸಾಧ್ಯವಾಗುವ ಪ್ರಯತ್ನ 'ನವ ಮಾನವ'ದಿಂದ ಆಗಲೆಂದು ಹಂಬಲಿಸುವೆ.

–ಅಮರೇಶ ನುಗಡೋಣಿ, ಹಂಪಿ

'ನವ ಮಾನವ ಮಾಸಿಕ'ದ ಹನ್ನೆರಡು ಸಂಚಿಕೆಗಳನ್ನೂ ಗಮನಿಸಿದ್ದೇನೆ. ನನಗಿಷ್ಟವಾದ ಲೇಖನಗಳನ್ನು ಓದಿದ್ದೇನೆ. ಕಾಲ ಕಾಲಕ್ಕೆ ಪ್ರತಿಕ್ರಿಯಿಸದೇ ಇರುವುದಕ್ಕೆ ಸೋಮಾರಿತನವಷ್ಟೇ ಕಾರಣ.

ಮೊದಲ ಸಂಚಿಕೆಯ 'ಸಂಪಾದಕರ ಟಿಪ್ಪಣಿ'ಯಲ್ಲಿ ಸದ್ಯ ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ, '...back to basics ಎಂಬುದೇ ಇದಕ್ಕೆ ಉತ್ತರ. ಈ ಸರಕು ಕೇಂದ್ರಿತ ಆರ್ಥಿಕತೆಗೆ ಆದಷ್ಟು ಬೇಗ ವಿದಾಯ ಹೇಳಿ ಮನುಷ್ಯ ಕೇಂದ್ರಿತ ಆರ್ಥಿಕತೆಗೆ ಮರಳುವುದೊಂದೇ ಉತ್ತರ. ಅಂದರೆ ವಿಶ್ವಾಸಾರ್ಹತೆ ಕಳೆದುಕೊಂಡಿರುವ ಹಳೆಯ ಸಮಾಜವಾದದ ಮೂಲಾಧಾರಗಳನ್ನು ಪುನಾರಚಿಸಿ ಕಾಲದ ಹೊಸ ಸವಾಲುಗಳನ್ನು ಎಧುರಿಸಲು ಸಜ್ಜಾದ ಹೊಸ ಸಮಾಜವಾದದ ಅನ್ವೇಷಣೆಯನ್ನು ನಾವಿಂದು ಮಾಡಬೇಕಿದೆ. ಅದಕ್ಕೊಂದು ಪುಟ್ಟ ವೇದಿಕೆ ಒದಗಿಸುವ ಪ್ರಯತ್ನವಾಗಿ ಈ 'ಮಾನವ'ದ ಪುನರುಜ್ಜೀವನಕ್ಕೆ ನಾವು ಕೆಲವು ಗೆಳೆಯರು ಕೈ ಹಾಕಿದ್ದೇವೆ' ಎನ್ನಲಾಗಿತ್ತು. ತನ್ನ ಈ ಆಶಯದ ದಿಕ್ಕಿನಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳನ್ನು ಗಟ್ಟಿಯಾಗಿಯೇ ಇರಿಸುವ ಪ್ರಯತ್ನವನ್ನು 'ನವ ಮಾನವ' ಮಾಡುತ್ತಾ ಬಂದಿದೆಯೆಂದು ನನಗಂತೂ ಅನಿಸಿದೆ.

–ಶ್ರೀನಿವಾಸ ಕಾರ್ಕಳ, ಮಂಗಳೂರು

ಪ್ರಕಟಣೆಯ ಒಂದು ವರ್ಷ ಪೂರೈಸುತ್ತಿರುವ 'ನವ ಮಾನವ ಮಾಸಿಕ'ಕ್ಕೆ ಶುಭ ಹಾರೈಕೆಗಳು. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಆಳವಾಗಿ ಬೇರುಬಿಟ್ಟಿರುವ ಭ್ರಷ್ಟಾಚಾರ, ನೈತಿಕ ಮೌಲ್ಯಗಳ ಕುಸಿತ, ಸಾಂಸ್ಕೃತಿಕ ವಿಷಯಗಳ ವ್ಯಾಪಾರೀಕರಣ ಹೆಚ್ಚಾಗುತ್ತಿರುವ ನಿರಾಶೆ ಮತ್ತು ಹತಾಶೆಯ ಈ ಸಂದರ್ಭದಲ್ಲಿ ಸರಳ ಹಾಗೂ ಸಭ್ಯ ಜೀವನಮಟ್ಟವನ್ನು ಪ್ರತಿಪಾದಿಸುವ ಲೋಹಿಯಾ ಚಿಂತನೆ ಅಗತ್ಯವಾಗಿತ್ತು. ಭಾರತದ ಶ್ರೇಷ್ಠ ರಾಜಕೀಯ–ಸಾಂಸ್ಕೃತಿಕ ಚಿಂತಕರಲ್ಲಿ ಪ್ರಮುಖರಾದ ಲೋಹಿಯಾ ಅವರ ವಿಚಾರಗಳನ್ನು ನವ ಮಾನವ ಪರಿಣಾಮಕಾರಿಯಾಗಿ ತಲುಪಿಸುತ್ತಿದೆ. ಇದರಲ್ಲಿರುವ ಪುಸ್ತಕ ವಿಮರ್ಶೆಗಳು, ವೈಚಾರಿಕ ಲೇಖನಗಳು, ವಾಗ್ವಾದಗಳು ಹಾಗೂ ಶ್ರೀಮತಿ ಸವಿತಾ ನಾಗಭೂಷಣರ ಪ್ರವಾಸ ಕಥನಗಳು ಉಪಯುಕ್ತವಾಗಿವೆ. ಭಾಷೆ, ಸಾಹಿತ್ಯ, ರಾಜಕಾರಣ, ಪರಿಸರ, ಶಿಕ್ಷಣ ಮುಂತಾದ ಜೀವನದ ವಿವಿಧ ಕ್ಷೇತ್ರಗಳ ಆಗುಹೋಗುಗಳ ಬಗ್ಗೆ ಪ್ರಾಮಾಣಿಕ ಕಾಳಜಿಯಿಂದ ಕೂಡಿದ ನಿಮ್ಮ ಸಂಪಾದಕೀಯ ಬರಹಗಳು ವಿಮರ್ಶಾತ್ಮಕವಾಗಿವೆ, ಪ್ರಬುದ್ಧವಾಗಿವೆ, ಸಕಾಲಿಕವಾಗಿವೆ, ನಿಮಗೆ ಅಭಿನಂದನೆಗಳು!

– ತೀ.ನಂ. ಶಂಕರನಾರಾಯಣ, ಶಿವಮೊಗ್ಗ

'ನವ ಮಾನವ ಮಾಸಿಕ' ಇಂದು ಸಮಾಜಕ್ಕೆ ಬಹಳ ಅವಶ್ಯವಾದ ಪತ್ರಿಕೆಯಾಗಿದೆ. ಇಂದಿನ ಕಂಪ್ಯೂಟರ್ ಆಧಾರಿತ ಯುಗದಲ್ಲಿ ಓದುವ ಹವ್ಯಾಸವನ್ನೂ, ಸಮಾಜವಾದವನ್ನೂ ಮರೆಯುತ್ತಿರುವ ಯುವಜನತೆಗೆ ಇಂತಹ ಪತ್ರಿಕೆ ಹೊಸ ವಿಚಾರಗಳನ್ನು ತಿಳಿಯಲು ಪ್ರಚೋದನೆ ನೀಡಬಲ್ಲುದಾಗಿದೆ. ಪ್ರತಿ ಜಿಲ್ಲೆಯಲ್ಲೂ ಈ ಪತ್ರಿಕೆಯ ಪ್ರಭಾವ ಹಬ್ಬಿ ಇಂದು ಅನಿವಾರ್ಯವಾಗಿರುವ ಸಮಜವಾದದ ಪುನರುಜ್ಜೀವನ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

–ನಾಗರಾಜ ಗುರಿಕಾರ, ಧಾರವಾಡ

ಒಂದು ವರ್ಷದಿಂದ 'ನವ ಮಾನವ'ನನ್ನು ಓದುತ್ತಾ ಬಂದಿರುವೆ. ದೈವ, ವಿಧಿ, ಅದೃಷ್ಟಗಳು ಸೋಲುವಲ್ಲಿ ಮನುಷ್ಯ ಪ್ರಯತ್ನ ಗೆಲ್ಲಬೇಕೆಂಬ ಅದಮ್ಯ ಅಕಾಂಕ್ಷೆ ನಿಮ್ಮದು. ನಮ್ಮ ಸಾಮಾಜಿಕ, ನೈತಿಕ ಪ್ರಜ್ಞೆ ಸಾಯುತ್ತಿರುವಾಗ ಹೇಗಾದರೂ ಮಾಡಿ ಅವನ್ನು ಜೀವಂತವಾಗಿಡಬೇಕೆಂಬ ದಿಕ್ಕಿನಲ್ಲಿ ಪ್ರಯತ್ನ, ಹೋರಾಟ ನಿಮ್ಮ ಪತ್ರಿಕೆಯದು. ಈ ದೃಷ್ಟಿಯಿಂದ ಮುಂದಿನ ಜನಾಂಗಕ್ಕೆ ನವ ಮಾನವ ನೀಲ ನಕ್ಷೆ ಆಗುವುದರಲ್ಲಿ ಅನುಮಾನವಿಲ್ಲ. ಇದರ ಪರಿಣಾಮವಾಗಿ ಸದ್ಯದ ವನ ಮಾನವರ ಮಧ್ಯದಿಂದ ಹತ್ತಾರು ನವ ಮಾನವರು ತಯಾರಾದರೆ ಅದು ತನ್ನ ಗುರಿಯನ್ನು ಸಾಧಿಸಿದಂತೆಯೇ.

ಆದರೆ ಹಲವೊಮ್ಮೆ ನಮ್ಮ ಸಮಾಜದ ಕೆನೆ ಪದರವನ್ನಷ್ಟೇ ಗಮನದಲ್ಲಿಟ್ಟುಕೊಂಡು ಪತ್ರಿಕೆ ರೂಪುಗೊಳ್ಳುತ್ತಿದೆಯೇನೋ ಎನಿಸುತ್ತದೆ.

ನವ ಮಾನವ ನೂರು ಹಬ್ಬಗಳನ್ನು ಕಾಣಲಿ ಎಂದು ಹಾರೈಸುವೆ.

–ಜ್ಞಾನೇಂದ್ರ ಪ್ರಭು, ಶಿವಮೊಗ್ಗ

ಸಮಾಜವಾದದ ಉನ್ನತ ವಿಚಾರಧಾರೆಯೊಂದಿಗೆ ಹೊರಹೊಮ್ಮುತ್ತಿರುವ 'ನವ ಮಾನವ ಮಾಸಿಕ'ವನ್ನು ಒಂದು ವರ್ಷದ ಕಾಲ ಯಶಸ್ವಿಯಾಗಿ ಸಂಪಾದಿಸಿ ನೀಡಿದ ನಿಮಗೆ ಅಭಿನಂದನೆಗಳು. ಪತ್ರಿಕೆ ಹೆಚ್ಚಿನ ಚಲನಶೀಲತೆಯೊಂದಿಗೆ ಇನ್ನೂ ಹೆಚ್ಚು ಕಾಲ ಮುಂದುವರೆಯಲಿ.

–ಎಸ್. ಬಿ.ಗೌಡರ, ಗೋಕಾಕ

ಸಮಾಜವಾದಿ ಚಿಂತನೆಗೇ ಮೀಸಲಾದ ಪತ್ರಿಕೆಯೊಂದು ಕನ್ನಡದಲ್ಲಿ ಇರಲಿಲ್ಲ. ನಿಮ್ಮ ಪತ್ರಿಕೆ ಆ ಕೊರತೆಯನ್ನು ಸಮರ್ಥವಾಗಿ ತುಂಬುತ್ತಿದೆ. ಆದರೆ ಬಹುಮುಖ ಆಸಕ್ತಿಯೇ ಸಮಾಜವಾದಿಯೊಬ್ಬನ ಕುರುಹಲ್ಲವೇ? ನಿಮ್ಮ ಪತ್ರಿಕೆ ಈಗ ಸಮಾಜವಾದಕ್ಕೆ ಈ ಮೊದಲೇ ತೆತ್ತುಕೊಂಡವರನ್ನು ಆಕರ್ಷಿಸುವ ಮಟ್ಟಿಗೆ, ಇತರರನ್ನು ಸೆಳೆಯುವುದಿಲ್ಲ, ಅಲ್ಲವೇ? ಹಾಗಾಗಿ, ಈ ಪುಟಗಳಿಗೆ ಇನ್ನಷ್ಟು ಲವಲವಿಕೆ ತುಂಬಿ, ವೈವಿಧ್ಯಮಯವಾಗಿ ರೂಪಿಸಿಬಹುದಾಗಿದೆ. ಒಂದಷ್ಟು ಜೋಕ್ ಪ್ರಕಟಿಸಿದರೂ ತಾನೇ ತಪ್ಪೇನು?

–ಎನ್.ಎಸ್. ಶಂಕರ್, ಬೆಂಗಳೂರು

ನವ ಮಾನವ ಮಾಸಿಕ'ದ ಬರಹಗಳಿಗೆ ಓದುಗರಿಂದ ಬರುವ ಪ್ರತಿಸ್ಪಂದನವೇ ಆ ಪತ್ರಿಕೆಯ ಚೈತನ್ಯವಾಗಿದೆ. ಚಾಮರಾಜನಗರದಿಂದ ಕಪ್ಪುಕಲ್ಲಿನ ಗಣಿಗಾರಿಕೆ ಬಗ್ಗೆ ೧೬೮೦ ಕೋಟಿಯ ಹಗರಣವನ್ನು ಪತ್ರಿಕೆಯಲ್ಲಿ (ಅಕ್ಟೋಬರ್, ೨೦೧೧) ಬಯಲು ಮಾಡಲಾಯಿತು. ಈ ಲೇಖನಕ್ಕೆ ಸಮಾನ ಮನಸ್ಕ ಗೆಳೆಯರಿಂದ ಒಂದು ಪ್ರತಿಸ್ಪಂದನ ಸೃಷ್ಟಿಯಾಯಿತು.

ಜನಶ್ರೀ ವಾಹಿನಿಯ ಮಹಂತೇಶ್ ಎನ್ನುವವರು ಈ ಲೇಖನನ್ನು ಗಮನಿಸಿ ನಮ್ಮ ಊರಿಗೆ ಬಂದು ಈ ಹಗರಣದ ಬಗ್ಗೆ ತಮ್ಮ ವಾಹಿನಿಯಲ್ಲಿ ಒಂದು ಸಮಗ್ರ ತನಿಖಾ ವರದಿಯನ್ನೇ ಪ್ರಸಾರ ಮಾಡಿದರು. ಇದರಿಂದ ಸುದ್ದಿ ಹರಡಿ, ರಾಷ್ಟ್ರೀಯ ಪತ್ರಿಕೆಯಾದ ತೆಹಲ್ಕಾದ ಇಮ್ರಾನ್ ಎನ್ನುವ ವರದಿಗಾರ ಬಂದು ಈ ಹಗರಣದ ವಿವರಗಳನ್ನು ತಮ್ಮ ಪತ್ರಿಕೆಯ ಮೂಲಕ ಬೆಳಕಿಗೆ ತಂದರು. ನಂತರ 'ಟೈಮ್ಸ್ ನೌ'ನ ವರದಿಗಾರ್ತಿಯೂ ಇಲ್ಲಿನ ಗಣಿಗಾರಿಕೆಯ ಸ್ಥಳಗಳಿಗೆ ಭೇಟಿ ನೀಡಿ ವರದಿ ಮಾಡಿದರು. ಇದೆಲ್ಲದರ ಪರಿಣಾಮವಾಗಿ ಈ ಹೋರಾಟದ ನೇತೃತ್ವ ವಹಿಸಿದ್ದ ಪರಿಸರ ಕಾರ್ಯಕರ್ತ ಪುಣಜನೂರು ದೊರೆಸ್ವಾಮಿಯವರನ್ನು ಬೆಂಬಲಿಸಿ ಬಹಳಷ್ಟು ಜನ ಹೋರಾಟದ ಭಾಗವಾಗಿ ನಮ್ಮ ಜೊತೆ ಸೇರಿಕೊಂಡರು. ಈ ಸುತ್ತಲಿನ ಮಲೆಯೂರು, ಕಾಡಗಳ್ಳಿಯ ಅಕ್ರಮ ಗಣಿಗಾರಿಕೆ ಬಗ್ಗೆ ಅಲ್ಲಿನ ಜನ ಸಂಘಟಿತರಾಗಿ ದೊರೆಸ್ವಾಮಿಯವರ ಬೆಂಬಲ ಅಪೇಕ್ಷಿಸಿದರು.

ಇದೆಲ್ಲಾ ನವಮಾನವದ ಸಮಾಜವಾದಿ ತತ್ವಚಿಂತನೆಗೆ ಸಿಕ್ಕ ಸಂಘಟಿತ ಬಲ. ಪತ್ರಿಕೆಗೆ ಗಣಿಗಾರಿಕೆ ವಿರೋಧಿ ಹೋರಾಟಗಾರರಿಂದ ಪ್ರೀತಿಯ ವಂದನೆಗಳು.

–ಅಪೂರ್ವ ಡಿ'ಸಿಲ್ವ, ಚಾಮರಾಜನಗರ

ಹೊಸ 'ಸೌಂದರ್ಯಶಾಸ್ತ್ರ'ದ ಶೋಧದಲ್ಲಿ 'ನವ ಮಾನವ ಮಾಸಿಕ'



ಕಳೆದ ಆಗಸ್ಟ್‌ನಲ್ಲಿ ಮೈಸೂರಿನಲ್ಲಿ ನಡೆದ 'ನವ ಮಾನವ ಮಾಸಿಕ'ದ ಬಿಡುಗಡೆ ಸಮಾರಂಭದಲ್ಲಿ ಪತ್ರಿಕೆಯ ಸಂಪಾದಕರಾದ ಡಿ.ಎಸ್. ನಾಗಭೂಷಣ ಅವರು ಮಾತನಾಡುತ್ತ "ಹೆಚ್ಚು ಹೆಚ್ಚನ್ನು ಆಧರಿಸಿದ ಸೌಂದರ್ಯಶಾಸ್ತ್ರಕ್ಕಿಂತ ಆದಷ್ಟೂ ಕಮ್ಮಿ ಕಮ್ಮಿಯನ್ನು ಆಧರಿಸಿದ ಸೌಂದರ್ಯಶಾಸ್ತ್ರವನ್ನು ಕಟ್ಟುವುದಕ್ಕೆ 'ನವಮಾನವ' ಒಂದು ಪುಟ್ಟ ವೇದಿಕೆ" ಎಂದಿದ್ದರು. ಈ 'ಕಮ್ಮಿ ಕಮ್ಮಿ'ಯನ್ನು ಆಧರಿಸಿದ ಸೌಂದರ್ಯಶಾಸ್ತ್ರದ ಕಲ್ಪನೆಗೆ ಸಮಾಜವಾದ ಎನ್ನುವುದು ಇನ್ನೊಂದು ಹೆಸರು. ಬುದ್ಧ ಹೇಳುವ 'ಧಮ್ಮ'ದಲ್ಲಿರುವ 'ಪ್ರಜ್ಞೆ' ಮತ್ತು 'ಶೀಲ'ಕ್ಕೆ ಇದು ಸಂವಾದಿ ಕೂಡಾ.

ಈ ಸೌಂದರ್ಯಶಾಸ್ತ್ರವನ್ನೇ ರಚನಾತ್ಮಕವಾಗಿ ಶೋಧಿಸುತ್ತ, ಮೂರ್ತದಲ್ಲಿ ಪ್ರತಿಪಾದಿಸುತ್ತ 'ನವ ಮಾನವ' ಕಳೆದೊಂದು ವರ್ಷದುದ್ದಕ್ಕೂ ಕನ್ನಡನಾಡಿನ ಸಾಂಸ್ಕೃತಿಕ ಕ್ಷೇತ್ರವನ್ನು ಸಂವೇದನಾಶೀಲವಾಗಿಡಲು ಯತ್ನಿಸಿದೆ. ಒಂದು ವರ್ಷದ ಈ ಕೂಸನ್ನು ಹೆತ್ತು ಸಲಹಿದ ಹೆಮ್ಮೆ 'ಪತ್ರಿಕೆ'ಯ ಸಂಪಾದಕ, ಲೇಖಕ ಮತ್ತು ಓದುಗ ಬಳಗದ್ದಾದರೆ; ಇನ್ನೊಂದರ್ಥದಲ್ಲಿ ಇದು, ದಶಕಗಳ ಕಣ್ಮರೆಯ ನಂತರ ಮತ್ತೆ ಅವತರಿಸಿರುವ ಸಮಾಜವಾದದ ಅದಮ್ಯ 'ಚೈತನ್ಯ'. ಹೀಗಾಗಿ ಎಲ್ಲರ ಪಾಲಿಗೆ ಇದೊಂದು ಸಾಂಸ್ಕೃತಿಕ ಹೊಣೆಗಾರಿಕೆ ಕೂಡಾ.

ಅಚ್ಚು ಮತ್ತು ವಿದ್ಯುನ್ಮಾನ ಮಾಧ್ಯಮಗಳು ದಿನನಿತ್ಯ ಚೆಲ್ಲುವ ಸುದ್ದಿ ಮತ್ತು ವಿಶ್ಲೇಷಣೆಗಳ ಗದ್ದಲದ ನಡುವೆ ಮಾನವ ಚೇತನಕ್ಕೆ ಯಾವುದು ಹಿತ, ಯಾವುದು ಹಾನಿಕರ ಎಂಬ ವಿವೇಚನೆಯನ್ನು ಸದಾ ಕಾಪಾಡಿಕೊಂಡು ಪರ್ಯಾಯಗಳನ್ನು ಆಲೋಚಿಸಿ ಮಂಡಿಸುವ ಕಷ್ಟಕರ ಹೊಣೆಯನ್ನು ಧರಿಸುತ್ತಾ ಸಾಗಿ ಬಂದಿರುವ 'ನವ ಮಾನವ'ದ ಹದಿನಾರು ಪುಟಗಳ ಸಂಕ್ಷಿಪ್ತಾಕೃತಿಯೇ ಇಲ್ಲಿನ ಬರಹಗಾರರನ್ನು ನೈತಿಕ, ತಾತ್ವಿಕ ಮತ್ತು ತಾಂತ್ರಿಕ ಸಂಕಲನಕಾರನಾಗಿ (editing) ಕಾಡಿವೆ ಅಥವಾ ಕಾಪಾಡಿವೆ!

ಕಳೆದ ಒಂದು ವರ್ಷದ ಸಂಚಿಕೆಗಳನ್ನು ಮತ್ತೊಮ್ಮೆ ಓದುತ್ತ ಹೋದಂತೆಲ್ಲಾ ಪತ್ರಿಕೆಯ ಸಂಪಾದಕರು ಆರಂಭದಲ್ಲಿ ಘೋಷಿಸಿದ ಅಥವಾ ಆಶಿಸಿದ ಸಮಾಜವಾದಿ 'ಸೌಂದರ್ಯಶಾಸ್ತ್ರ'ದ ಕಲ್ಪನೆ ಹೇಗೆ ತನ್ನ ಅಮೂರ್ತದ ಸೆರೆಯನ್ನು ಬಿಡಿಸಿಕೊಂಡು ಖಚಿತ ಆಕಾರ ಪಡೆಯುತ್ತ ನಡೆದಿದೆ ಎಂಬುದು ಮನವರಿಕೆಯಾಗುತ್ತದೆ. ಈ 'ಸೃಜನಶೀಲ ಆಧಾರ'ಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು: ೧. ಎಂ.ಎಫ್. ಹುಸೇನರ ಸಂದರ್ಶನ ೨. 'ನಮ್ಮ ಸಮಾಜವಾದಿಗಳು' ಅಂಕಣದಲ್ಲಿನ ಬರೆದ ಅಬ್ಬಿಗೇರಿ ವಿರೂಪಾಕ್ಷಪ್ಪ ಮತ್ತು ಜಿ. ಸದಾಶಿವರಾಯರ ಅದ್ಭುತ ವ್ಯಕ್ತಿಚಿತ್ರಗಳು ೩. ಅಣುಸ್ಥಾವರ ವಿರೋಧಿ ಬರಹಗಳ ಸಂಚಿಕೆ ೪. ಕಣ್ಣಿನ ಶಸ್ತ್ರಚಿಕಿತ್ಸಕರಿಗೆ ಡಿ.ಎಸ್. ನಾಗಭೂಷಣ ಅವರು ಬರೆದ ಪತ್ರ. ೫. ಮಂಜುಳಾ ಎಂ. ರಾಜು ಅವರು ಮಾಡಿದ ಎಸ್.ಆರ್. ಹಿರೇಮಠ್ ಸಂದರ್ಶನ. ೬. ಜಾತಿ ವ್ಯವಸ್ಥೆ, ಭಾಷೆ ಮತ್ತು ಶಿಕ್ಷಣ ಮಾಧ್ಯಮ ಕುರಿತ ವಿಶೇಷ ಸಂಚಿಕೆಗಳು. ೭. ಅಂಬೇಡ್ಕರ್–ಗಾಂಧೀಜಿ, ಲೋಹಿಯಾ ಕುರಿತ ವಿಶೇಷ ಸಂಚಿಕೆಗಳು ೮. ಕೆಲವು ಪುಸ್ತಕಾವಲೋಕನಗಳು ಹಾಗೂ ಮುಖ್ಯವಾಗಿ ಶಿವಸುಂದರ್ ಅವರ ಲೇಖನಕ್ಕೆ ಡಿ.ಎಸ್. ನಾಗಭೂಷಣ ಅವರು ಬರೆದ ಪ್ರತಿಕ್ರಿಯೆಯಲ್ಲಿ ಮೂಡಿದ ಸಮಾಜವಾದದ ಚಿತ್ರ ಇತ್ಯಾದಿ.

ಇವೆಲ್ಲವೂ 'ಪತ್ರಿಕೆ'ಯ ಘೋಷಿತ ಆಶಯವನ್ನು ತಮ್ಮ ಸೃಜನಶೀಲ ರಚನಾತ್ಮಕತೆಯಲ್ಲಿ ಪೂರೈಸಿವೆ. ಇವುಗಳೆಲ್ಲವುಗಳ ಮೂಲಕ 'ಸಮಾಜವಾದ'ವೆಂಬ ಅಮೂರ್ತದ ಪಂಜರದಲ್ಲಿದ್ದ ತತ್ವದ ಹಕ್ಕಿ ತನ್ನ ಸೆರೆಯಿಂದ ಬಿಡಿಸಿಕೊಂಡು ವಿಶಾಲ ನಭದತ್ತ ಹಾರಲು ಸಾಧ್ಯವಾಗಿದೆ. ಉದಾಹರಣೆಗೆ ಎಂ.ಎಫ್. ಹುಸೇನರು ತಮ್ಮ ಸಂದರ್ಶನದಲ್ಲಿ ಆಡಿರುವ ಒಂದು ಮಾತು: "ಜಗತ್ತಿನ ಅತ್ಯಂತ ಸಂಕೀರ್ಣ ರೂಪಗಳಲ್ಲೊಂದಾದ ನಟರಾಜ, ಸಾವಿರಾರು ವರ್ಷಗಳ ಕಾಲ ವಿಕಾಸಗೊಳ್ಳುತ್ತಾ ಸೃಷ್ಟಿಯಾದ ಮೂರ್ತಿ. ಅದು ಸರಿ ಸುಮಾರಾಗಿ ಐನ್‌ಸ್ಟೀನ್‌ನ ಸಮೀಕರಣದಂತೆ ಈ ವಿಶ್ವದ ಮತ್ತು ಭೌತವಾಸ್ತವದ ಗುಣಸ್ವರೂಪವನ್ನು ಕುರಿತ ಆಳವಾದ ತಾತ್ವಿಕ ಚಿಂತನೆ ಹಾಗೂ ಗಣನೀಯ ಲೆಕ್ಕಾಚಾರಗಳ ಪರಿಣಾಮವೇ ಸರಿ."

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಲವು ಮೌಲಿಕ ಅಂಶಗಳನ್ನು ಸೂಸುವ ಈ ಅಮೂಲ್ಯ ಸಂದರ್ಶನವನ್ನು ಅಚ್ಚು ಮಾಡುವ ಮೂಲಕ 'ಪತ್ರಿಕೆ' ಗಳಿಸಿಕೊಳ್ಳುವ ಅದೇ.... ಸಮಾಜವಾದಿ ಸೌಂದರ್ಯ!

ಡಿ.ಎಸ್.ನಾಗಭೂಷಣ ಅವರು ಕಡೆದಿರುವ ಹಿರಿಯ ಸಮಾಜವಾದಿಗಳಾದ ದಿ. ಅಬ್ಬಿಗೇರಿ ವಿರೂಪಾಕ್ಷಪ್ಪನವರ ಅನನ್ಯ ವ್ಯಕ್ತಿ ಚಿತ್ರ ವಿವಿಧ 'ಕಾಲಕೋಶ'ಗಳನ್ನು ಸಂಯೋಜಿಸುವ ಮೂಲಕ ಅದ್ಭುತ ಎನ್ನುವಂತಿದೆ. ಸಮಾಜವಾದದ ಸಂಕೀರ್ಣ ಸೌಂದರ್ಯಶಾಸ್ತ್ರವೆಲ್ಲವೂ ಒಟ್ಟೈಸಿದ ಚಿತ್ರವಿದಾಗಿದೆ.




ಕರ್ನಾಟಕದಲ್ಲಿ ಭೂಸುಧಾರಣೆ ಜಾರಿಗೆ ಬರುವುದಕ್ಕೂ ಹಿಂದೆಯೇ ತಮ್ಮ 300 ಎಕರೆ ಆಸ್ತಿಯನ್ನು ಗೇಣಿದಾರರಿಗೆ ನೀಡಿದ ಹಿರಿಯ ಸಮಾಜವಾದಿ ಚೇತನ, ಜಿ. ಸದಾಶಿವರಾಯರನ್ನು ಕುರಿತು ಜೆ.ಕೆ. ರಮೇಶ್ ನೀಡಿರುವ ಜೀವನಚಿತ್ರಣ ಓದುಗರನ್ನು ಅಲ್ಲಾಡಿಸಿಬಿಡುತ್ತದೆ. ಗೋಪಾಲಗೌಡರನ್ನು ಒಳಗೊಂಡು ಕರ್ನಾಟಕದ ಸಮಾಜವಾದಿಗಳ ಮೊದಲ ತಲೆಮಾರನ್ನು ಪ್ರಭಾವಿಸಿದ ಸದಾಶಿವರಾಯರ ನೆನಪು 'ಪತ್ರಿಕೆ'ಯ ಘನತೆಯನ್ನು ಹೆಚ್ಚಿಸಿದೆ.

'ಪತ್ರಿಕೆ'ಯ 'ಸಮಾಜವಾದಿ ಆಗ್ರಹ'ವನ್ನು ಹಾಗೂ ಕಳವಳವನ್ನು ದಾಖಲಿಸುವ ಕೂಡಂಕುಳಂ ಅಣುಸ್ಥಾವರ ವಿರೋಧಿ ಹೋರಾಟಕ್ಕೆ ಬೆಂಬಲ ಸೂಚಿಸುವ 'ಬರಹ ಗುಚ್ಛ' ತನ್ನ ಸಮಗ್ರತೆ ಮತ್ತು ಸ್ವಯಂಪೂರ್ಣತೆಯಿಂದ ಗಮನ ಸೆಳೆಯುತ್ತದೆ. ಅಷ್ಟೇ ಅಲ್ಲದೆ ನಿರ್ಣಾಯಕ 'ಸಂಚಲನ'ವನ್ನು ಉಂಟುಮಾಡುವಷ್ಟು ಪ್ರಭಾವಶಾಲಿಯಾಗಿದೆ. ಈ ಚಿಕ್ಕ ಗಾತ್ರದ 'ಪತ್ರಿಕೆ' ಈ ಬಗೆಯಲ್ಲಿ ಪ್ರತಿಯೊಂದು ಲೇಖನ, ಚರ್ಚೆಯಲ್ಲೂ ಸಾಧಿಸುವ completeness, ಆವೃತತೆ ಅಚ್ಚರಿ ತರುತ್ತದೆ.


ಆದರೆ, ಹಜಾರೆ ಹೋರಾಟವನ್ನು ಬೆಂಬಲಿಸುವ 'ಪತ್ರಿಕೆ'ಯ ಮತ್ತು ಸಂಪಾದಕರ ನಿಲುವಿಗೆ ಕಾಲವೇ ಉತ್ತರ ಹೇಳಬೇಕಾಗಿದೆ. ಜೊತೆಗೆ ಸಮಾಜವಾದಿ ಅಧ್ಯಯನ ಶಿಬಿರಗಳ ವರದಿಗಳು ಪತ್ರಿಕೆಯ ಅಮೂಲ್ಯ ಜಾಗವನ್ನು ಕಬಳಿಸಿಬಿಡುತ್ತವೆ. ಜೊತೆಗೆ ಅವು ಶುಷ್ಕವೂ ಆಗಿರುತ್ತವೆ.

ಕೆಲವರು ಈಗಿರುವಂತೆ 'ಪತ್ರಿಕೆ'ಯ 'ಸಾಹಿತ್ಯೇತರ' ರೂಪವನ್ನು ಆಕ್ಷೇಪಿಸುವುದುಂಟು. ಈ ಕೆಲವರಿಗೆ (ತಮ್ಮ) ಕಥೆ, ಕವನ, ವಿಮರ್ಶೆಗಳ ಪ್ರಕಟಣೆಯ 'ಬಯಕೆ'ಯಾಗಿದೆಯೇನೊ. ಆದರೆ ಈ ಪುಟ್ಟ ಪತ್ರಿಕೆ ಅಸಾಧಾರಣವನ್ನು ಧಾರಣ ಮಾಡುತ್ತ ಈ ರೂಪದಲ್ಲೇ ಲೌಕಿಕವಾಗಿ ಉಪಯುಕ್ತವಾಗಿದೆ. ಈ ಕಾರಣದಿಂದಲೇ 'ಪತ್ರಿಕೆ'ಗೆ ಒಂದು ಆಧ್ಯಾತ್ಮಿಕ ಸೌಂದರ್ಯ ಬಂದಿದೆ.

–ಕೆ.ಪಿ. ನಟರಾಜ


ಪ್ರವಾಸಿ(ಸವಿತಾ) ಕಂಡ ಇಂಡಿಯಾ : ದಾರಿಯೇ ದೈವ... ವೈಷ್ಣೋದೇವಿ




ನಾವು ಜಮ್ಮು ತಲುಪಿ ಕಟ್ರಾದ ಛತ್ರದಲ್ಲಿ ವೈಷ್ಣೋದೇವಿ ಯಾತ್ರೆಗೆ ಸಿದ್ಧರಾಗುತ್ತಿದ್ದೆವು. 'ಹೆಲಿಕಾಪ್ಟರ್ ಡೋಲಿ, ಕುದುರೆ, ಕಾಲ್ನಡಿಗೆ... ವೈಷ್ಣೋ ದೇವಿಯ ದರ್ಶನಕ್ಕೆ ಯಾವುದನ್ನು ಆಯ್ದುಕೊಳ್ಳುವಿರಿ? ನಿಮ್ಮ ನಿಮ್ಮಲ್ಲೇ ಚರ್ಚಿಸಿ ಒಮ್ಮತಕ್ಕೆ ಬನ್ನಿ' ಎಂದು ಟೂರ್ ಮ್ಯಾನೇಜರ್ ಹೇಳಿದ. ವೈಷ್ಣೋದೇವಿ ಭಾರತದ ಸುಪ್ರಸಿದ್ಧ ಶಕ್ತಿದೇವತಾ ಕೇಂದ್ರಗಳಲ್ಲೊಂದಾಗಿದ್ದು, ಅದು ತ್ರಿಕೂಟ ಪರ್ವತದ ತುದಿಯಲ್ಲಿದ್ದು, ಅದನ್ನೇರುವುದೇ ಒಂದು ಸಾಹಸ ಎಂದು ಕೇಳಿದ್ದೆನಾದ್ದರಿಂದ, ನಾನು ಕಾಲ್ನಡಿಗೆ ಆಯ್ದುಕೊಂಡೆ.

ಇಪ್ಪತ್ತು ವರ್ಷಗಳ ಹಿಂದೆ ಹಿಮಾಲಯದ ಕೇದಾರಕ್ಕೆ ಹದಿನಾಲ್ಕು ಕಿ. ಮೀ. ಕಾಲ್ನಡಿಗೆಯಲ್ಲೇ ಕ್ರಮಿಸಿದ್ದರಿಂದ ನಡೆದೇ ವೈಷ್ಣೋದೇವಿಯನ್ನು ಮುಟ್ಟುವ ಹಂಬಲ ಇತ್ತಾದರೂ, ಈ ಮಧ್ಯ ವಯಸ್ಸಿನಲ್ಲಿ ೧೩ ಕಿ.ಮೀ ನಡೆಯಲು ಸಾಧ್ಯವೇ ಎಂಬ ಅಳುಕು ಇದ್ದೇ ಇತ್ತು. 'ನಾನಂತೂ ನಡೆದೇ ಹೋಗುವುದು!' ಅಂತ ರೈತಾಪಿ ಜನರ ಜೊತೆ ಸೇರಿದಾಗ ಕಷ್ಟ ಆಗುತ್ತೆ; ಯೋಚನೆ ಮಾಡಿ ಎಂದು ಟೂರ್ ಮ್ಯಾನೇಜರ್ ಎಚ್ಚರಿಸಲು ಮರೆಯಲಿಲ್ಲ.

ನಾವೆಲ್ಲ ಬೆಳಗಿನ ಉಪಾಹಾರ ಮುಗಿಸಿ ಹತ್ತು ಘಂಟೆಗೆ ಹುರುಪಿನಿಂದ ನಡಿಗೆ ಶುರು ಮಾಡಿದೆವು. ದಾರಿಯುದ್ದಕ್ಕೂ ಸಾಲು ಸಾಲು ಪರ್ವತ ಶ್ರೇಣಿಗಳು, ಚಲಿಸುವ ಮೋಡಗಳು, ಕಣಿವೆಗಳ ಇಳಿಜಾರುಗಳ ತುಂಬಾ ಛತ್ರಿಗಳಂತೆ ಹರಡಿಕೊಂಡ ಹಸಿರು ರಾಶಿ, ನಸು ಬೆಚ್ಚಗಿನ ಸೂರ್ಯರಶ್ಮಿ, ಮಧ್ಯೆ ಮಧ್ಯೆ ತುಂತುರು ಮಳೆ, ಕಾಮನ ಬಿಲ್ಲು, ಆಗಾಗ್ಗೆ ಬೀಸಿ ಮುದಗೊಳಿಸುವ ತಂಗಾಳಿ, 'ಜೈ ಮಾತಾ ದೀ!' ಎಂಬ ಜಯಘೋಷ ನಮಗರಿವಿಲ್ಲದಂತೆಯೇ ನಮ್ಮ ಕಾಲುಗಳಿಗೆ ಕಸುವು ತುಂಬಿದ್ದವು. ಮುದುಕರು, ಮಕ್ಕಳು. ಸಾಧು-ಸಂತರಿಂದ ಹಿಡಿದು ಸಾಮಾನ್ಯ ಭಕ್ತರು ದೇವಿಯೆಡೆಗೆ ಇರುವೆಯೋಪಾದಿಯಲ್ಲಿ ಸಾಗುತ್ತಿದ್ದು ದೂರದವರೆಗೆ ಕಾಣುತ್ತಿತ್ತು.

ಬಲು ಉತ್ಸಾಹದಿಂದ ನಮ್ಮ ನಡಿಗೆಯನ್ನು ಆರಂಭಿಸಿದೆವಾದರೂ, ಏರು ಪರ್ವತವಾದ್ದರಿಂದ ಮೂರು ಕಿ.ಮಿ. ನಡೆಯುವಷ್ಟರಲ್ಲೇ ಸುಸ್ತಾಗಿ ಇನ್ನುಳಿದ ಹಾದಿ ಹೇಗಪ್ಪಾ ಸವೆಸುವುದು ಎನಿಸತೊಡಗಿತು. ಏದುಸಿರು ಬಿಡುತ್ತಾ 'ದೇವಿ! ದೇವಿ!' ಎಂದು ಚೀರುತ್ತಾ, ಒಂದೊಂದು ಹೆಜ್ಜೆಯನ್ನೂ ಪ್ರಯಾಸದಿಂದ ಕೀಳುತ್ತಾ ದಾರಿ ಮಧ್ಯೆಯಿದ್ದ ತಂಗುದಾಣಗಳಲ್ಲಿ ಕೆಲ ನಿಮಿಷ ಕೂತು, ಮಲಗಿ, 'ಯಾಕಪ್ಪಾ ಈ ನಡಿಗೆಯ ಪರೀಕ್ಷೆ!' ಎಂದು ಕೇಳಿಕೊಳ್ಳುತ್ತಾ, ಕೊನೆ ಕೊನೆಗೆ ಕೆಲವರು ತೆವಳಿಕೊಂಡು ಮುನ್ನಡೆದೆವು. ಇಷ್ಟೂ ಆಗದವರು ಅರ್ಧ ದಾರಿಯಲ್ಲಿ ಸಿಕ್ಕ ಕುದುರೆಗಳನ್ನು ಏರಿ ಸಾಗಿದರೆ, ಕೆಲವರು ಕೇಳಿದಷ್ಟು ಬೆಲೆ ನೀಡಿ ಡೋಲಿಗಳನ್ನು ಆಶ್ರಯಿಸಿದರು.

ಹೀಗೆ ನಾವು ಅಂತೂ ಇಂತೂ ರಾತ್ರಿ ಎಂಟು ಗಂಟೆಗೆ ವೈಷ್ಣೋ ದೇವಿಯ ಮಹದ್ವಾರ ತಲುಪಿದೆವು. ಅಲ್ಲಿ ಮತ್ತೆ ಸರತಿಯ ಸಾಲಿನಲ್ಲಿ ಒಂದು ತಾಸು ನಿಂತು ಹಿಮಪರ್ವತದ ಜಲಧಾರೆಯಲ್ಲಿ ನಮ್ಮ ಕಾಲು ತೋಯಿಸಿಕೊಂಡು ದೇವಿಯ ತಾಣ ತಲುಪಿದಾಗ ನಮಗೆ ಆಶ್ಚರ್ಯ ಕಾದಿತ್ತು. ಗರ್ಭಗುಡಿಯೆಂದರೆ ಮತ್ತೇನೂ ಅಲ್ಲ. ಪ್ರಾಕೃತಿಕವಾಗಿ ರೂಪುಗೊಂಡ ಹಿಮಗುಹೆಗಳು. ಕೊರಕಲು ಕಿಂಡಿಯೊಳಗೆ ದೇವಿ



ವಿರಾಜಮಾನಳಾಗಿದ್ದಳು. ದುಂಡನೆಯ ದಿವಿ ಹಲಸಿನ ಗಾತ್ರದ ಮೂರು ಕಲ್ಲುಗಳೇ ದೇವಿಯರು! ನಾವು ಮೂಕವಿಸ್ಮಿತರಾಗಿ ಆ ಕಲ್ಲುಗಳಿಗೇ ನಮಿಸಿದೆವು. ಇದನ್ನು ನೋಡಲು ಇಷ್ಟು ಕಷ್ಟಪಟ್ಟು ಇಲ್ಲಿಗೆ ಬರಬೇಕೇ! ಎಂದು ನನಗಂತೂ ಅನಿಸಿತು.



ಅದಾಗಲೇ ರಾತ್ರಿ ಒಂಭತ್ತು ಘಂಟೆಯಾದ್ದರಿಂದ ಹಸಿವೆಯಿಂದ ಹಾದಿ ಬದಿಯ ಹೋಟೆಲಿಗೆ ಎಡ ತಾಕಿದೆವು ಊಟದಲ್ಲಿ ಸಾಸಿವೆ ಎಣ್ಣೆ ಬಳಸಿದ್ದುದರಿಂದ ಒಂದು ತುತ್ತೂ ಗಂಟಲಿಗೆ ಇಳಿಯದೆ, ಕೊನೆಗೆ ಬಾಳೆ ಹಣ್ಣು ಖರೀದಿಸಿ ತಿಂದು ಹೊಟ್ಟೆ ತುಂಬಿಸಿಕೊಂಡೆವು. ಈಗ ಪರ್ವತದ ಕೆಳಗಿನ ನಮ್ಮ ಬಿಡಾರಕ್ಕೆ ವಾಪಸಾಗುವುದು ಹೇಗೆ ಎಂಬ ಚಿಂತೆ ಆರಂಭವಾಯಿತು. ಕಾಲುಗಳು ಬಾತಿದ್ದುದರಿಂದ ಒಂದು ಹೆಜ್ಜೆಯೂ ಮುಂದಿಡಲಾರದವರಾಗಿ ಸತ್ತೆನೋ ಕೆಟ್ಟೆನೋ ಎಂದು ಹಲವರು ಬೆಟ್ಟದ ಮೇಲಣ ಯಾತ್ರಿ ನಿವಾಸಗಳನ್ನು ಆಶ್ರಯಿಸಿದರು. ಕೆಲವರು ಕುದುರೆ ಹತ್ತಿದರು. ನಮ್ಮ ಅಸಹಾಯಕತೆಯ ಲಾಭ ಪಡೆಯಲು ಕುದುರೆಯ ಮಾಲೀಕರು ಮನಸೋಇಚ್ಛೆ ಬೆಲೆ ಹೇಳಿದಾಗ ಆರಂಭವಾದ ಚೌಕಾಶಿಯಿಂದ ನಾನು ರೋಸಿ ಹೋಗಿ ನನ್ನ ಪಾಡಿಗೆ ನಾನು ಕಾಲ್ನಡಿಗೆಯಲ್ಲಿ ಪರ್ವತ ಇಳಿಯತೊಡಗಿದೆ.

ಹಾಸನದ ಕಡೆಯ ಇಬ್ಬರು ರೈತಾಪಿ ಮಹಿಳೆಯರು ನನ್ನ ಬೆನ್ನ ಹಿಂದೆಯೇ ಇದ್ದುದರಿಂದ ಧೈರ್ಯದಿಂದ ಹೆಜ್ಜೆ ಹಾಕಿದೆನಾದರೂ, ಸ್ವಲ್ಪ ಹೊತ್ತಿಗೇ ಬಲವಾದ ಗಾಳಿ ಬೀಸಿ ಗುಡುಗು-ಮಿಂಚು ಶುರುವಾಗಿ ಪಟ ಪಟ ಮಳೆಯೂ ಸುರಿಯ ತೊಡಗಿದಾಗ ನಿಜವಾಗಿಯೂ ಭೀತಳಾದೆನು. ಬೆಳಗ್ಗಿನಿಂದ ನಡೆದೂ ನಡೆದೂ ಸುಸ್ತಾದ್ದರಿಂದ ರೈತಾಪಿ ಮಹಿಳೆಯರ ಸಮ ನಡೆಯಲಾರದೆ ನಾನು ಕೊಂಚ ಹಿಂದೆ ಬಿದ್ದೆ. ನಾಲ್ವರು ಪುರುಷ ರೈತರು ಬೀಸುಗಾಲು ಹಾಕುತ್ತಾ ಅದಾಗಲೇ ಎಷ್ಟೋ ಮುಂದೆ ಹೋಗಿದ್ದರು. ಒಬ್ಬಳೇ ಒಂಟಿಯಾಗಿ ಕಗ್ಗತ್ತಲಿನಲ್ಲಿ ಅತಿ ಪ್ರಯಾಸದಿಂದ ಹೆಜ್ಜೆ ಇಡುವ ಹೊತ್ತಿನಲ್ಲಿ ಆಗಸ ಮಿಂಚಿದಂತೆಲ್ಲ ಏನೋ ಒಂದು ರೀತಿ ರೋಮಾಂಚನವಾಗುತ್ತಿತ್ತೆಂಬುದೂ ನಿಜವೇ. ಆಗ ಗುಡುಗು-ಮಿಂಚು-ಮಳೆ-ಗಾಳಿ ಈ ಪ್ರಕೃತಿ ಇವಳೇ ಅಲ್ಲವೇ ವೈಷ್ಣೋದೇವಿ ಎಂದು ಹೊಳೆದಂತಾಗಿ ಅಪಾರ ಚೈತನ್ಯ ಒದಗಿ ಬಂದು 'ದೇವಿ ಈ ರೀತಿಯಾಗಿ ದರುಶನ ನೀಡಿದಳಲ್ಲ!' ಎಂದು ಪರಮ ಸಂತೋಷದಿಂದ ನಿರಾಳವಾಗಿ ಅಂಜಿಕೆಯಿಲ್ಲದೆ ಒಂದೊಂದೇ ಹೆಜ್ಜೆ ಇಡುತ್ತಾ ಇಳಿಯತೊಡಗಿದೆನು.

ಸ್ವಲ್ಪ ದೂರ ಕ್ರಮಿಸಿದಂತೆ ರಾತ್ರಿಯ ಹೊತ್ತು ದೇವಿಯ ದರ್ಶನ ಪಡೆಯಲು ಬೆಟ್ಟ ಹತ್ತಲು ತೊಡಗಿದ್ದ ಭಕ್ತರ ಗುಂಪು ಎದುರಾಯಿತು. ಅಪರಾತ್ರಿಯಲ್ಲಿ ಒಬ್ಬಂಟಿಗಳಾಗಿ ಬೆಟ್ಟ ಇಳಿಯುತ್ತಿದ್ದ ನನ್ನನ್ನು ಕಂಡು 'ಜೈ ಮಾತಾ ದೀ! ಎಂದು ಕೂಗಿ ಹುರಿದುಂಬಿಸಿದರಷ್ಟೆ. ಇದೀಗ ನನ್ನ ಸಹಯಾತ್ರಿ ರೈತಾಪಿ ಮಹಿಳೆಯರು ದಾರಿ ಬದಿಯ ತಂಗುದಾಣದಲ್ಲಿ ಕಾಲು ಚಾಚಿ ಕೂತು ವಿಶ್ರಮಿಸಿಕೊಳ್ಳುತ್ತಿರುವುದು ಕಂಡು ಬಂತು. ನಾನವರಿಗೆ ಕೈಬೀಸಿ ಅಲ್ಲೇ ಸನಿಹದಲ್ಲಿದ್ದ ಟೀ ಅಂಗಡಿಯ ಬೆಂಚಿನ ಮೇಲೆ ಕೂತುಕೊಂಡೆ. ಇನ್ನು ಅರ್ಧ ಕಿ. ಮೀ. ನಡೆದರೆ ಬೆಟ್ಟದ ಬುಡದ ನಮ್ಮ ಛತ್ರ ತಲುಪಬಹುದಿತ್ತು. ಆದರೆ ನಾನು ಎಷ್ಟು ಸೋತಿದ್ದೆನೆಂದರೆ 'ಒಂದು ಲೋಟ ಟೀ' ಎಂದು ಕೇಳುವಷ್ಟೂ ಚೈತನ್ಯವಿರಲಿಲ್ಲ. ಜೋಲು ಮೋರೆ ಹಾಕಿಕೊಂಡು ಕುದಿಯುತ್ತಿದ್ದ ಚಹಾ ನೋಡುತ್ತಿದ್ದ ನನ್ನ ಸ್ಥಿತಿಯನ್ನು ಅಂಗಡಿಯಾತ ಅರ್ಥ ಮಾಡಿಕೊಂಡವನಂತೆ ಬಿಸಿ ಬಿಸಿಯಾಗಿ ರುಚಿ ರುಚಿಯಾಗಿದ್ದ ಚಹಾ ನೀಡಿದ. ತೃಪ್ತಿಯಿಂದ ಕುಡಿದು ಸಾವರಿಸಿಕೊಂಡು ಆ ಇಬ್ಬರು ಮಹಿಳೆಯರಿಗೂ ಚಹಾ ನೀಡಿ ಎಂದು ಅಂಗಡಿಯವನನ್ನು ಕೋರಿದೆ.

ಆಗ ಬೆಳಗಿನ ಝಾವ ನಾಲ್ಕೂವರೆ ಘಂಟೆ. ಸುತ್ತಲೂ ಬೆಳಗಿನ ರೋಮಾಂಚನ ಆರಂಭವಾಗಿತ್ತು. ಮೆಲ್ಲಗೆ ಟಕ್ ಟಕ್ ಟಕ್ ಸದ್ದು ಕೇಳತೊಡಗಿತು. ಓಹ್! ಅದು ಕುದುರೆಯ ನಡಿಗೆಯ ಸದ್ದು. ನಮ್ಮ ಸಹಯಾತ್ರಿಕರು ಒಬ್ಬೊಬ್ಬರೇ ಕುದುರೆಯ ಮೇಲೆ ಕುಳಿತು ಬರುತ್ತಿದ್ದುದು ಮಸುಕಾಗಿ ಕಾಣತೊಡಗಿತು.

-ಸವಿತಾ ನಾಗಭೂಷಣ

(ಈ ಲೇಖನ ಮಾಲೆ ಇಲ್ಲಿಗೆ ಮುಗಿಯಿತು)

ನಮ್ಮ ಸಮಜವಾದಿಗಳು : ಶಾಂತವೇರಿ : ಕೆಲವು ನೆನಪುಗಳು


–ಕಡಿದಾಳು ಶಾಮಣ್ಣ



ಶಾಂತವೇರಿ ಗೋಪಾಲ ಗೌಡರ ಬಗ್ಗೆ ನಾನು ಬಾಲ್ಯದಿಂದಲೇ ಹಲವಾರು ಕಥೆಗಳನ್ನು ಕೇಳಿದ್ದೆ. ಅವರು ನಮ್ಮೂರಿನ ಪಕ್ಕದ ಆರಗದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದೂ, ನಂತರ ತೀರ್ಥಹಳ್ಳಿ 'ಸರ್ಕಾರಿ ಪ್ರೌಢ' ಶಾಲೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದೂ, ಬಿಡುಗಡೆಯ ನಂತರ ಆರಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದುಕೊಂಡು ಹರಿಜನರಿಗೆ ರಾತ್ರಿ ಶಾಲೆ ನಡೆಸಿದ್ದು, ಶಿವಮೊಗ್ಗದಲ್ಲಿ ಹರಿಜನರ ದೇವಾಲಯ ಪ್ರವೇಶಕ್ಕಾಗಿ ಹೋರಾಟ, ಸ್ವಾತಂತ್ರ್ಯಾನಂತರ ಸಹ್ಯಾದ್ರಿ ಕಾಲೇಜಿನಲ್ಲಿ ಇಂಟರ್‌ಮೀಡೀಯೇಟ್ ವ್ಯಾಸಂಗಕ್ಕಾಗಿ ಒಕ್ಕಲಿಗರ ವಿದ್ಯಾರ್ಥಿ ನಿಲಯವನ್ನು ಆಶ್ರಯಿಸಿ, ಅಲ್ಲಿಯ ವಾರ್ಡನ್ ಆಗಿ ಅದನ್ನು ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನಾಗಿ ಪರಿವರ್ತಿಸಲು ಯತ್ನಿಸಿದ ಕಾರಣದಿಂದಾಗಿ ಆಡಳಿತ ಮಂಡಳಿಯಿಂದ ಹೊರಹಾಕಲ್ಪಟ್ಟಿದ್ದು, ನಂತರ ಕಾಗೋಡು ಸತ್ಯಾಗ್ರಹ ರೂಪಿಸಿ ಭೂಮಾಲೀಕರ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿದ್ದು– ಈ ಎಲ್ಲವೂ ಹಿರಿಯರ ಮೂಲಕ ನಮ್ಮ ಕಿವಿಗಳಿಗೆ ಬಿದ್ದು, ಭೂಮಾಲೀಕರ ಮನೆತನಕ್ಕೆ ಸೇರಿದ್ದ ನಮ್ಮಲ್ಲಿ ವಿಚಿತ್ರ ರೋಮಾಂಚನವನ್ನು ಹುಟ್ಟಿಸುತ್ತಿದ್ದವು.

ಗೋಪಾಲಗೌಡರನ್ನು ದೂರದಿಂದ ಹಲವು ಬಾರಿ ನೋಡಿದ್ದೆನಾದರೂ, ಅವರೊಂದಿಗೆ ಮೊದಲ ವೈಯುಕ್ತಿಕ ಸಾಮೀಪ್ಯ ದೊರೆತದ್ದು ಅವರು ಶಾಸಕರಾದ ಮೇಲೇ. ವಿದಾರ್ಥಿಯಾಗಿದ್ದ ನಾನು ರಜಾ ದಿನಗಳಲ್ಲಿ ಮೇಗರವಳ್ಳಿಯಿಂದ ಕಡಿದಾಳಿಗೆ ಹೋಗುವಾಗ ತೀರ್ಥಹಳ್ಳಿ ಪ್ರವಾಸಿ ಮಂದಿರದಲ್ಲಿ ಶಾಂತವೇರಿಯವರು ಉಳಿದುಕೊಂಡಿದ್ದಾರೆ ಎಂದು ತಿಳಿದಿತ್ತು. ಎಂ.ಎಲ್.ಎ. ಆಗಿದ್ದವರನ್ನು ನೋಡಲು ಭಯ, ಭಕ್ತಿಯಿಂದ ಮೆಟ್ಟಿಲುಗಳನ್ನು ಹತ್ತಿ ಅವರಿದ್ದ (ತುಂಗಾನದಿಗೆ ಎದುರಿಗಿದ್ದ ಕೊಠಡಿ ಮತ್ತು ಉದ್ದನೆಯ ಜಗಲಿ) ಕಡೆ ಹೋಗುವಾಗ ಗೋಪಾಲಗೌಡ್ರು ಏನೋ ಹಾಡು ಹೇಳಿಕೊಂಡು ತಿರುಗಾಡುತ್ತಿದ್ದರು. ಆಗ ಅವರು ಬೇಂದ್ರೆಯವರ "ನಾನು ಬಡವ ಆಕೆ ಬಡವಿ ಒಲವೆ ನಮ್ಮ ಬದುಕು" ಎಂಬ ಪದ್ಯವನ್ನು ಹೇಳಿಕೊಂಡು ಶತಪಥ ತಿರುಗಾಡುತ್ತಿದ್ದರು. ನಾನೊಂದು ಕಂಬದ ಮರೆಯಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದೆ. ಅಂದೇ ನನಗೆ ಅವರು ಸಂಗೀತ ಪ್ರಿಯರೆಂದು ತಿಳಿದದ್ದು. ನಾನವರಿಗೆ ಕಾಣಿಸಿಕೊಂಡಾಗ "ಏನೋ ಶಾಮಣ್ಣ ನಿನಗೂ ಸಂಗೀತ ಇಷ್ಟವೇನಯ್ಯ!" ಎನ್ನುತ್ತಾ ಹತ್ತಿರ ಬಂದು ಮಾತನಾಡಿಸಿದರು. ಅಲ್ಲೊಂದು "ಇಲ್ಲೊಂದು ಪದ ಬರುತ್ತೆ ಸಾರ್" ಎಂದೆ. ಹೇಳು, ಹೆದರಬಾರದು ಎಂದರು. ನನ್ನ ಹಿಂದಿ ಪಂಡಿತ್ ವೆಂಕಟಶಾಮ ರಾವ್ ಹೇಳಿಕೊಟ್ಟ ಬೇಂದ್ರೆಯವರ "ಬೆಳಗು" ಪದ್ಯವನ್ನು ಹೇಳಿದೆ. ಖುಷಿಪಟ್ಟರು. ನಂತರ "ಏನ್ ಬಂದಿದ್ದು" ಎಂದು ಕೇಳಿದಾಗ 'ಮೇಗರವಳ್ಳಿಯಿಂದ ಊರಿಗೆ ಹೊರಟಿದ್ದೆ. ಇಲ್ಲಿ ನೀವಿರುವುದನ್ನು ಮೂಡುವಳ್ಳಿ ಅಣ್ಣಯ್ಯ ಹೆಗ್ಗಡೆಯವರು ನನಗೆ ಹೇಳಿದ್ದರು. ಹಾಗಾಗಿ ಬಂದೆ" ಎಂದು ಹೇಳಿ ಹೊರಟೆ.


"ತಡಿಯೋ ಕಾಫಿ, ತಿಂಡಿ ತರಲು ಕೃಷ್ಣಪ್ಪಯ್ಯನವರ ಹೋಟೆಲಿಗೆ ಗುತ್ಯಮ್ಮ ಹೋಗಿದ್ದಾರೆ, ತಿಂಡಿ ತಿಂದು ಹೋಗು ಎಂದರು. ಸ್ವಲ್ಪ ಹೊತ್ತಿಗೆ ತಾಯಿ–ಮಗ ಕೃಷ್ಣಪ್ಪಯ್ಯನವರ ಹೋಟೆಲ್ಲಿನ ದೋಸೆ, ಕಾಫಿ ತಂದಿದ್ದನ್ನು ನನಗೂ ಹಂಚುತ್ತಾ "ಇವರೆಲ್ಲ ಹರಿಜನರು ನಿನಗೇನಾದ್ರೂ ಮಡಿ, ಮೈಲಿಗೆ ಉಂಟಾ ಹ್ಯಾಂಗೆ" ಎಂದು ತಮಾಷೆ ಮಾಡಿದರು. "ಇವರ ಮನೆಗೆ ಸುಮಾರು ಸಾರಿ ಹೋಗಿದೀನಿ. ಇವರ ಸಹೋದರರಾದ ರಾಮಣ್ಣ ಮತ್ತು ನಾರಾಯಣ, ನನ್ನ ತಮ್ಮ ಗೋಪಾಲನ ಕ್ಲಾಸ್‌ಮೇಟ್ಸ್ ಆಗಿದ್ದರು. ಜೊತೆಗೆ ರಾಮಣ್ಣ ತೀರ್ಥಹಳ್ಳಿ ತಾಲ್ಲೂಕು ಹರಿಜನ. ಮುಖಂಡರು. ಆರಗದ ಮಿಣಕಮ್ಮ ನನಗೆ ತುಂಬಾ ಚೆನ್ನಾಗಿ ಗೊತ್ತು. ಅವರ ಮನೆಗಳಿಗೆ ಹೋಗಿ ಊಟ ಮಾಡಿದ್ದೇನೆ. ಜೊತೆಗೆ ಇವರ ಮಕ್ಕಳಿಗೆ ನಾವು ಕೆಲವರು ಸೇರಿ ಮಂತ್ರ ಮಾಂಗಲ್ಯ ಮದುವೆ ಮಾಡಿಸಿದ್ದೇವೆ ಎಂದು ಹೇಳಿ ಅವರು ತರಿಸಿದ ತಿಂಡಿ ತಿಂದು, ನಮಸ್ಕಾರ ಹೇಳಿಹೊರಟೆ.



ಇನ್ನು ತೀರ್ಥಹಳ್ಳಿಯ ಕಾರು ಡ್ರೈವರ್ ನರಸಿಂಹಣ್ಣನವರನ್ನು ಈ ಸಮಯದಲ್ಲಿ ನೆನಪು ಮಾಡದೆ ಇರಲು ಸಾಧ್ಯವೇ ಇಲ್ಲ. ಚುನಾಣೆ ಎಂದರೆ ಶಾಂತವೇರಿಯವರನ್ನು ಪ್ರಚಾರ ಸಭೆಗಳಿಗೆ ಕರೆದುಕೊಂಡು ಹೋಗುವ ಜವಾಬ್ದಾರಿ ಅವರದ್ದೇ. ಪೈಜಾಮ, ಶರ್ಟು, ಕೆಂಪು ಟೋಪಿ, ಕೆಂಪು ಟವೆಲ್ಲು ಹೆಗಲ ಮೇಲೆ ಇರಲೇಬೇಕಿತ್ತು. ಕರಪತ್ರದಂತೆ ಗೌಡರನ್ನು ಸಕಾಲಕ್ಕೆ ಸಭೆಗಳಿಗೆ ಕರೆದುಕೊಂಡು ಹೋಗಿ ಭಾಷಣ ಮಾಡಿಸುವುದು, ಅವರ ಬಿಳಿಯ ಜುಬ್ಬ, ಪಂಚೆ ಮಡಿಯಾಗಿ ದೋಬಿಯಿಂದ ಒಗೆಸಿ ಖಡಕ್ ಇಸ್ತ್ರಿ ಮಾಡಿಸಿ ಪ್ರತಿದಿನವೂ ಒದಗಿಸುವುದೂ ಡ್ರೈವರ್ ನರಸಿಂಹಣ್ಣನವರದೇ ಕೆಲ್ಸ. ಸಮಾಜವಾದಿ ಡ್ರೈವರ್ ನರಸಿಂಹಣ್ಣ ಎಂದೇ ಎಲ್ಲರೂ ಅವರನ್ನು ಕರೆಯುತ್ತಿದ್ದುದು. ಸೋಷಲಿಸ್ಟ್ ಪಾರ್ಟಿಯ ಚುನಾವಣಾ ಪ್ರಣಾಳಿಕೆಯನ್ನು ಅರ್ಥಮಾಡಿಕೊಂಡು ಸಭಿಕರಿಗೆ ಆಡುಮಾತಿನಲ್ಲಿ ಅರ್ಥ ಮಾಡಿಸುವ ಕೆಲ್ಸವನ್ನೂ ಮಾಡುತ್ತಿದ್ದ ನರಸಿಂಹಣ್ಣನವರನ್ನು ನಾವು ಯಾರೂ ಮರೆಯುವಂತಿಲ್ಲ, ಮರೆಯುವುದೂ ಇಲ್ಲ. ಒಂದು ಸಭೆಯಲ್ಲಿ ಶಾಂತವೇರಿಯವರು ತುಂಬಾ ಹೊತ್ತು ಭಾಷಣ ಮಾಡಿ ಎರಡು ಮಹಾಯುದ್ಧಗಳ ಪರಿಣಾಮಗಳನ್ನು ವಿವರಿಸಿ, ಸಾಕಷ್ಟು ತಡವಾಗಿ ಮುಂದಿನ ಊರಿಗೆ ಪ್ರಚಾರ ಭಾಷಣಕ್ಕೆ ಹೋಗುತ್ತಿರುವಾಗ ಈ ನರಸಿಂಹಣ್ಣ ನಿಧಾನಕ್ಕೆ "ಗೌಡ್ರೇ ನಾ ಮಾತಾಡಿದರೆ ಬೈತೀರಿ, ಹೇಳು ಅಂದ್ರೆ ಹೇಳ್ತೀನಿ" ಎಂದ್ರು. ಗೌಡ್ರು "ನರಸಿಂಹ ನೀನೇನು ಬುದ್ದಿಯಲ್ಲಿ ಕಡಿಮೆಯಾ ಹೇಳು!" ಎಂದಾಗ, "ನಾವೀಗ ಬಂದದ್ದು ಓಟು ಕೇಳಲಿಕ್ಕೆ. ಅದು ಕೇಳದೆ, ಯಾವುದೋ ಮಹಾಯುದ್ಧದ ಪುರಾಣವನ್ನೆಲ್ಲಾ ಮುಂದಿನ ಸಭೆಗೆ ತಡವಾಗುತ್ತಿದ್ದರೂ ಇಲ್ಲಿ ಹೇಳುತ್ತಿದ್ದಿರಲ್ಲ, ಅದೆಲ್ಲ ಚುನಾವಣೆ ಕಾವಿನಲ್ಲಿ ಜನರ ತಲೆಗೆ ಹೋಗುತ್ತದಾ? ಅಷ್ಟೆ ನನ್ನ ತಕರಾರು" ಎಂದು ಮೌನವಾದ.

ಅದಕ್ಕೆ ಗೌಡ್ರ ಉತ್ತರವೇನಿತ್ತೆಂದ್ರೆ, "ನೋಡು ನರಸಿಂಹ, ನಮ್ಮ ಹಳ್ಳಿಯವರಿಗೆ ಇವನ್ನೆಲ್ಲ ಯಾರು ಹೇಳ್ತಾರೆ? ಕೇವಲ ಓಟು ಕೇಳಿ ಮುಗಿಸುವುದಕ್ಕೆ ನನಗೆ ಸಾಧ್ಯವಾಗೋದಿಲ್ಲ. ನಮ್ಮ ಜನ ಸೇರಿದಾಗ ಅವರ ತಲೆಗೆ ಅನೇಕ ವಿಚಾರಗಳನ್ನು ಹೇಳಲೇಬೇಕೆಂದು ಅನ್ನಿಸ್ತದೆ. ವಿಚಾರ ತಿಳಿದುಕೊಳ್ಳದೆ, ಅವರು ಬುದ್ದಿವಂತರಾಗೋದು ಯಾವಾಗ ಮಾರಾಯಾ?" ಶಾಂತವೇರಿಯವರು ಚುನಾವಣೆಯಲ್ಲಿ ಬಹುಮತದಿಂದ ಗೆದ್ದಾಗ ನರಸಿಂಹಣ್ಣನನ್ನು ಕೇಳುತ್ತಿದ್ದರು, "ಏನು ನರಸಿಂಹ, ನಾನು ಚುನಾವಣಾ ಭಾಷಣದಲ್ಲಿ ಹೇಳಿದ ವಿಚಾರಗಳೆಲ್ಲ ಅನವಶ್ಯಕವಾಯ್ತಾ?" ಎಂದು. ಡ್ರೈವರ್ ನರಸಿಂಹಣ್ಣ ಶಾಂತವೇರಿಯವರು ಗೆದ್ದ ಸಂತೋಷದಲ್ಲಿ ನಕ್ಕು ಸುಮ್ಮನಾಗುತ್ತಿದ್ದರು.

೧೯೭೦ರಿಂದ ಈಚೆಗೆ ಶಾಂತವೇರಿಯುವರ ಆರೋಗ್ಯ ಕೈಕೊಡಲು ಶುರುವಾಯ್ತು. ಆದರೂ ಹೋಗಲೇಬೇಕಾದ ಸಭೆ ಸಮಾರಂಭಗಳಿಗೆ ಹೋಗುತ್ತಿದ್ದರು. ಮನೆಯ ಎಲ್ಲಾ ಜವಾಬ್ದಾರಿಯನ್ನು ಶ್ರೀಮತಿ ಸೋನಕ್ಕನವರು ನೋಡಿಕೊಂಡು ಹೋಗುತ್ತಿದ್ದರು. ಅವರು ಶಾಲೆಯಲ್ಲಿ ಟೀಚರ್ ಆಗಿದ್ದರಿಂದ ಅದು ಅವರಿಗೆ ಹೆಚ್ಚಿನ ಜವಾಬ್ದಾರಿಯಾಗಿತ್ತು. ಒಂದು ಭಾನುವಾರದ ದಿನ ನಾನೊಬ್ಬನೇ ಬೆಂಗಳೂರಿಗೆ ನಮ್ಮ ನೃಪತುಂಗ ಪ್ರೆಸ್ಸಿನ ಕೆಲ್ಸಕ್ಕೆಂದು ಹೋದವನು ಗೌಡ್ರನ್ನು ಕಂಡು ಬರೋಣವೆಂದು ಅವರ ಮನೆಗೆ ಹೋಗಿದ್ದೆ. ಹೋದಾಗ ಅವರ ಪುಟ್ಟ ಮಕ್ಕಳ ನೆನಪಾಗಿ ಚಾಕಲೇಟು ಬಿಸ್ಕತ್ತು ತೆಗೆದುಕೊಂಡು



ಹೋಗಿದ್ದೆ. ಅವರ ಮನೆ ತಲುಪಿದವನೆ ಗೌಡ್ರ ಮಗಳು ಇಳಾಗೀತ ಮತ್ತು ಮಗ ರಾಮ್ ಮನೋಹರ ಇವರನ್ನು ಕರೆದು ಕೊಡಲು ಹೋದೆ. ದಿಂಬಿಗೆ ಒರಗಿಕೊಂಡು ಪೇಪರ್ ಓದುತ್ತಿದ್ದ ಗೌಡರು ತಕ್ಷಣ ನನ್ನನ್ನು ಕರೆದು ಏನದು ಎಂದು ಕೇಳಿದರು. ನಾನು ಮಕ್ಕಳಿಗೆಂದು ಏನೋ ತಿಂಡಿ ತಂದಿದ್ದೆ ಎಂದಾಗ, "ನೀನು ಯಾವಾಗಲೂ ಹೀಗೆ ಮಾಡ್ತೀಯಾ. ಇದು ಸರಿಯಲ್ಲ ಯಾಕೆಂದ್ರೆ ಮನೆಗೆ ಯಾರು ಬಂದ್ರೂ ಈ ಮಕ್ಕಳು ಬಂದವರ ಕೈಬಾಯಿ ನೋಡೋ ಅಭ್ಯಾಸವಾಗುತ್ತದೆ. ದೊಡ್ಡವರಾದ ಮೇಲೂ, ನೌಕರಿ ಸಿಕ್ಕ ಮೇಲೂ ಈ ಅಭ್ಯಾಸ ಮುಂದುವರಿಯುತ್ತೆ. ನಾ ಹೇಳಿದ್ದು ಅರ್ಥ ಮಾಡಿಕೋ" ಎಂದು ಹೇಳುತ್ತಾ ನನಗೆ ಯಾರೂ ಹೇಳಿಕೊಡದ ಪಾಠವನ್ನು ಸೂಕ್ಷ್ಮವಾಗಿ ಹೇಳಿಕೊಟ್ಟಿದ್ದನ್ನು ನನ್ನ ಜೀವನದ ಉದ್ದಕ್ಕೂ ನೆನಪಿಸಿಕೊಳ್ಳುತ್ತೇನೆ.

ನಂತರ ಗೌಡ್ರು "ಏನು ಬಂದಿದ್ದಿ, ನಿಮ್ಮ ನೃಪತುಂಗ ಮುದ್ರಣಾಲಯ ಹೇಗಿದೆ? ತೇಜಸ್ವಿ 'ಸಮಾಜವಾದಿ ಯುವಜನ ಸಭಾ'ದಲ್ಲಿದ್ದಾನಾ? ನಿನ್ನ ಸಂಗೀತಾಭ್ಯಾಸ ಹೇಗಿದೆ? ಅದು ಸರಿ, ಹಿಂದಿನ ಸಾರಿ ಬಂದಾಗ ಎಂ.ಎ. ಗೆ ಸೇರಿದ್ದು ಹೇಳಿದ್ದು ನೆನಪಿದೆ. ಅದೇನಾಯ್ತು?" ಎಲ್ಲ ಕೇಳಿದರು. ಕೋಣಂದೂರು ಲಿಂಗಪ್ಪ 'ಶಾಸನಸಭೆಯಲ್ಲಿ ಶಾಂತವೇರಿ' ಪುಸ್ತಕದ ಕೆಲಸ ಮಾಡುತ್ತಿರುವುದನ್ನೂ ಹೇಳಿದೆ. ಸೋನಕ್ಕನವರು ಕೊಟ್ಟ ಕಾಫಿ ಕುಡಿದು ಬರ್ತೀನೆಂದು ಎಲ್ಲರಿಗೂ ಹೇಳಿ ಹೊರಡುವಾಗ 'ಬರ್ತಾ ಇರು, ತಿಂಡಿ ಪಟ್ನ ತರಬೇಡ' ಎಂದು ಶಾಂತವೇರಿಯವರು ಮುಗುಳ್ನಕ್ಕರು. ಇಳಾಗೀತ,' ರಾಮ್‌ಮನೋಹರ್ ಹಾಗೇ ಸ್ಟೂಲ್ ಮೇಲಿದ್ದ ಪ್ಯಾಕಿನಲ್ಲಿದ್ದ ಚಾಕಲೇಟ್, ಬಿಸ್ಕತ್ತು ಕಡೆಗೆ ಕಿರುಗಣ್ಣಿನಿಂದ ನೋಡುತ್ತಿದ್ದ ದೃಶ್ಯ ನಾನೆಂದೂ ಮರೆಯಲಾರೆ. ಮನುಷ್ಯ ಭ್ರಷ್ಟನಾಗೋದಕ್ಕೆ ಸಣ್ಣ ವಿಚಾರಗಳೇ ಸಾಕೆಂದು ಎಚ್ಚರಿಸಿದ ಆ ಘಟನೆ ಈಗಲೂ ನನ್ನ ನೆನಪಿನಲ್ಲಿದೆ.

ಹಾಗೆ ಅವರ ಆರೋಗ್ಯ ಸರಿಯಾಗಿ ಸುಧಾರಿಸಲೇ ಇಲ್ಲ. ತೀರ್ಥಹಳ್ಳಿಯ ಕಾಫಿ ವರ್ಕ್ಸ್ ಮಾಲೀಕರಾದ ರಾಘವರಾವ್ ಜವ್ರಳಿಯವರು ಶಾಂತವೇರಿಯವರ ಆರೋಗ್ಯವನ್ನು ಹೇಗಾದರೂ ಉತ್ತಮಪಡಿಸಲು ತಮ್ಮ ಪಾರ್ಟ್‌ನರ್ ಶ್ರೀ ನಾಗೇಂದ್ರನಾಥ್‌ರವರಿಗೆ ಹೇಳಿ ಅವರ ಮನೆಯಲ್ಲಿ ಗೌಡರನ್ನು ಉಳಿಸಿಕೊಂಡು ಮಲೆಯಾಳಿ ಪಂಡಿತರಿಂದ ಔಷಧಿ ಬೆರೆಸಿದ ತೈಲದಿಂದ ಮೈ ಉಜ್ಜಿಸಿಕೊಳ್ಳುವ ಅಭ್ಯಂಜನ ಚಿಕಿತ್ಸೆ ಮಾಡಿಸಿದರು. ಆಗ ನಾನು ಬಹಳ ಸಾರಿ ಹೋಗಿ ಮಾತನಾಡಿಸಿಕೊಂಡು ಬರುತ್ತಿದ್ದೆ. ಈ ಚಿಕಿತ್ಸೆಯಿಂದ ಶಾಂತವೇರಿಯವರ ಆರೋಗ್ಯ ಸ್ವಲ್ಪ ಸುಧಾರಿಸಿತ್ತು. ಆ ಸಮಯದಲ್ಲಿ ಎಂದೂ ಕಡಿದಾಳಿನ ನಮ್ಮನೆಯಲ್ಲಿ ಶಾಂತವೇರಿಯುವರು ಬಂದು ಊಟ ಮಾಡಿದ್ದಿಲ್ಲವೆಂಬುದು ನೆನಪಿಗೆ ಬಂದು ನಾನವರನ್ನು ನಮ್ಮನೆಗೆ ಊಟಕ್ಕೆ ಕರೆದೆ. ಗೌಡ್ರು 'ನಿಮ್ಮ ಮನೆಗಳಿಗೆ ನಾನು ಬಂದೇ ಇಲ್ಲ ಅಲ್ವಾ? ಆಯ್ತು ನಡಿ. ಆದ್ರೆ ನಾನು ಪೂರ್ಣ ಸಸ್ಯಾಹಾರಿ' ಎಂದು ಹೇಳಿ ಬರಲು ಒಪ್ಪಿದರು. ನಾನು ನಮ್ಮ ತಂದೆಯವರ "ಮಾರಿಸ್-ಲ" ಕಾರಿನಲ್ಲಿ ಕಡಿದಾಳಿಗೆ ಕರೆದೊಯ್ಯುತ್ತಿದ್ದಾಗ ಶಾಂತವೇರಿಯವರು 'ಈ ಕಾರಿಗೆ ಎಷ್ಟು ಬೆಲೆ?' ಎಂದು ಕೇಳಿದರು. ಯಾಕೆ ಸಾರ್ ಎಂದು ಕೇಳಿದಾಗ ಅವರೆಂದರು, 'ಪ್ರತಿ ಸಾರಿ ಯಾರದ್ದಾರೂ ವಾಹನ ಬೇಡುವ ಬದಲು ನಮ್ಮದೇ ಒಂದು ಸಣ್ಣ ವಾಹನವಿದ್ದರೆ ಅನುಕೂಲವಿತ್ತು.' ಅದರೆ ತಕ್ಷಣ ಏನೋ ಯೋಚಿಸಿ "ಇರುವ ಗೋಟಾಳಿಯೇ ಹೆಚ್ಚಾಗಿರುವಾಗ ಕಾರಿಂದು ಬೇರೆ. ಕಾರುಪಾರು ಏನೂ ಬೇಡ ಮಾರಾಯ. ಬೇಕೆಂದಾಗ ಕಾರಿರುವ ನೀವೆಲ್ಲ ಇದ್ದೀರಲ್ಲ...ಏನಂತೀಯ" ಎಂದು ಮುಗುಳುನಕ್ಕರು.

ಊಟ ಮುಗಿಸಿ ವಾಪಸ್ ಬರುವಾಗ 'ಕಳೆದ ವರ್ಷ ಸಮಾಜವಾದಿ ಯುವಜನ ಸಭಾದಿಂದ ಸೊರಬದ ಸಭೆಯಲ್ಲಿ ಈ ದೇಶದಲ್ಲಿ ಒಬ್ಬನಿಗೆ ಒಂದೇ ಉದ್ಯೋಗದ ಹಕ್ಕಿರಬೇಕೆಂದು ನೀನು, ತೇಜಸ್ವಿ, ಲಿಂಗಪ್ಪ, ನಂಜುಂಡಸ್ವಾಮಿ ಮುಂತಾದವರೆಲ್ಲ ವಾದಿಸಿ ನಮ್ಮ ದೇಶದ ಸಂವಿಧಾನವನ್ನೂ ಈ ವಿಚಾರದಲ್ಲಿ ತಿದ್ದುಪಡಿ ಮಾಡಲೇಬೇಕೆಂದು ವಾದ ಮಾಡಿದ್ದಿರಲ್ಲ. ಇವತ್ತು ಊಟ ಮಾಡುವಾಗ ನಿಮ್ಮ ತಂದೆ ಕಡಿದಾಳು ರಾಮಪ್ಪ ಗೌಡರು ನಿನಗೆಂದು ಶಿವಮೊಗ್ಗದ ಹತ್ತಿರ ಸ್ವಲ್ಪ ನೀರಾವರಿ ಜಮೀನು ಖರೀದಿ ಮಾಡಿದ್ದೇವೆಂದು ಹೇಳಿದರು. ನೀನೀಗ ಜಮೀನು ಮಾಡುತ್ತೀಯೋ ಅಥವಾ ತೀರ್ಥಹಳ್ಳಿ ಕಾಲೇಜಿನಲ್ಲಿ ಸೋಷಿಯಾಲಜಿ ಲೆಕ್ಚರರ್ ಆಗಿ ಕೆಲಸ ಮಾಡುತ್ತೀಯೋ?' ಎಂದು ಮಾತಿಗರಂಭಿಸಿ, 'ಈ ವಿಚಾರಗಳು ನಿನ್ನ ಗಮನದಲ್ಲಿರಲಿ ಎಂದು ಕೇಳಿದೆ. ಏಕೆಂದ್ರೆ ನಾವೇ ಹೇಳಿಕೊಂಡ ಆದರ್ಶಗಳು ನಾಳೆ ನಮಗೇ ತೊಡಕಾಗಬಾರದಲ್ಲವಾ? ಈಗ ನೀನು ತಾಲ್ಲೂಕು ಬೋರ್ಡ್ ಹೈಸ್ಕೂಲ್ ಟೀಚರ್ ಬೇರೆ ಆಗಿದ್ದೀಯ~' ಎಂದು ಮಾತು ಕೊನೆಗಾಣಿಸಿದರು


. ಗೌಡರು ತಮ್ಮನ್ನು ತೀರ್ಥಹಳ್ಳಿಯ ನಾಗೇಂದ್ರನಾಥ್ ಮನೆಗೆ ಬಿಡುವ ಬದಲು ಪ್ರವಾಸಿ ಮಂದಿರಕ್ಕೆ ಬಿಡಲು ಹೇಳಿದರು. ಆ ಮೇಲೆ ನಾಗೇಂದ್ರನಾಥ್ ಮನೆಗೆ ಹೋಗುವುದಾಗಿ ಹೇಳಿದರು. ನಾನು ಹಾಗೇ ಮಾಡಿದೆ. ಅವರು ಹೇಳಿದ ಮಾತುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ ಕಾರಿನಲ್ಲಿ ವಾಪಸ್ ನಾನು ಮನೆಗೆ ಬಂದೆ. ಗೌಡರು ಹೇಳಿದ ಮಾತುಗಳು ಮನದಲ್ಲಿ ಕೊರೆಯುತ್ತಿತ್ತು. ಸೊರಬದ ಸಮಾಜವಾದಿ ಯುವಜನ ಸಭೆಯಲ್ಲಿ ತೀರ್ಮಾನವಾದದ್ದೇ ಸರಿ ಎಂದು ವ್ಯವಸಾಯ ಒಂದನ್ನೇ ಮುಂದುವರಿಸಿದೆ. ಉಳಿದುದೆಲ್ಲವಕ್ಕೂ ರಾಜೀನಾಮೆ ಕೊಟ್ಟೆ.

ಕೋಣಂದೂರು ಲಿಂಗಪ್ಪನವರ ಸಂಪಾದಕತ್ವದಲ್ಲಿ ಸಿದ್ಧವಾದ 'ಶಾಸನ ಸಭೆಯಲ್ಲಿ ಶಾಂತವೇರಿ' ಕೃತಿಯನ್ನು ಸಮಾಜವಾದಿ ಯುವಜನ ಸಭಾದ ವತಿಯಿಂದ ತೀರ್ಥಹಳ್ಳಿಯಲ್ಲಿ ಬಿಡುಗಡೆ ಮಾಡಲು ನಾವು ಸಿದ್ಧತೆ ನಡೆಸಿದ್ದು, ಆ ಸಂದರ್ಭದಲ್ಲಿ ಶಾಂತವೇರಿಯವರು ಗೆಳೆಯರೊಂದಿಗೆ ತೀರ್ಥಹಳ್ಳಿಗೆ ಬಂದು ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡಿದ್ದರು. ಅದೇ ಸಂದರ್ಭದಲ್ಲಿ ಅಲ್ಲಿ ಏರ್ಪಾಡಾಗಿದ್ದ ಅಧ್ಯಯನ ಶಿಬಿರದ ಸಭೆಯೊಂದರಲ್ಲಿ ಎಂ.ಡಿ.ನಂಜುಂಡಸ್ವಾಮಿಯವರು ಸಂಘಟನೆಗೆ ಸಿದ್ಧಾಂತವೆ ನಾಯಕನೇ ಹೊರತು ಯಾವ ವ್ಯಕ್ತಿಯೂ ಅಲ್ಲ ಎಂದದ್ದನ್ನು ಮೂಡುವಳ್ಳಿ ಮಹಾಬಲ ಹೆಗ್ಡೆಯವರು ಶಾಂತವೇರಿಯವರಿಗೆ ತಪ್ಪು ತಪ್ಪಾಗಿ ವರದಿ ಮಾಡಿದ್ದರಿಂದ ಅವರು ಸಿಟ್ಟಾಗಿ, ತಾನು ನಾನು ನಾಯಕನೂ ಅಲ್ಲ, ಸಭೆಗೆ ಬರುವುದೂ ಇಲ್ಲವೆಂದು ಘೋಷಿಸಿದರು. ಇದರಿಂದ ಗಾಬರಿಯಾದ ನಾವು ಅಪರಾತ್ರಿಯಲ್ಲಿ ತೇಜಸ್ವಿ ಜೀಪಿನಲ್ಲಿ ಹೋಗಿ ಅಂದಿನ ಸಭೆಯ ಅಧ್ಯಕ್ಷರಾಗಿದ್ದ ಸದಾಶಿವರಾವ್ ಅವರನ್ನು ಕರೆತಂದು ಅವರಿಂದ ಶಾಂತವೇರಿಯುವರಿಗೆ ಸಮಾಧಾನ ಹೇಳಿಸಿ ಪುಸ್ತಕ ಬಿಡುಗಡೆ ಮಾಡಲು ಒಪ್ಪಿಸಿದ್ದಾಯ್ತು. ಅದೇ ಶಾಂತವೇರಿಯವರ ತೀರ್ಥಹಳ್ಳಿಯ ಕಡೆಯ ಭೇಟಿ.

೧೯೭೧ರ ನವೆಂಬರ್ ೨೪ರಂದು ಶಾಂತವೇರಿಯುವರು ಅನಾರೋಗ್ಯದಿಂದ ವಿಕ್ಟೋರಿಯಾ ಅಸ್ಪತ್ರೆ ಸೇರಿದರು. ಬಂದಗದ್ದೆ ರಮೇಶ ಗೌಡರನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದಾಗ ಹೆಚ್.ಡಿ. ಸುರೇಂದ್ರ ಮತ್ತು ನಾನು ಅವರ ಆಸ್ಪತ್ರೆ ಖರ್ಚಿಗೆಂದು ಸ್ವಲ್ಪ ಹಣ ಕೊಟ್ಟಾಗ ಬಂದಗದ್ದೆ ರಮೇಶ 'ಗೌಡ್ರು ತಲೆ ದಿಂಬಿನಡಿ ಇಡಿ. ಸೋನಕ್ಕನವರಿಗೆ ತಲುಪಿಸುವೆ' ಎಂದರು. ಶಾಂತವೇರಿಯವರು ೧೯೭೨ ಜೂನ್ ೯ರಂದು ಇಹಲೋಕ ತ್ಯಜಿಸಿದರು. ಅವರೇ ತಿಳಿಸಿ ಹೋದಂತೆ ಯಾವ ಸಂಪ್ರದಾಯವನ್ನೂ, ಶಾಸ್ತ್ರಾಚಾರಗಳನ್ನೂ ಅಚರಿಸದೆ ಬೆಂಗಳೂರಿನಲ್ಲಿ ವಿದ್ಯುತ್ ಚಿತಾಗಾರದಲ್ಲಿ ಸಾವಿರಾರು ಜನ ಸಮಾಜವಾದಿಗಳ ಹಾಗೂ ಸ್ನೇಹಿತರ ಎದುರು ಅಂತ್ಯಕ್ರಿಯೆ ನೆರವೇರಿತು.

ಶ್ರೀ ಶಾಂತವೇರಿ ಗೋಪಾಲಗೌಡ ಮತ್ತು ಸಂಗಡಿಗ ಸೋಷಲಿಸ್ಟ್ ಪಾರ್ಟಿಯವರ 'ಉಳುವವನೆ ಹೊಲದೊಡೆಯ' ಹೋರಾಟ ಎರಡು ವರ್ಷದ ನಂತರದಲ್ಲಿ ದೇವರಾಜ ಅರಸ್ ಮುಖ್ಯಮಂತ್ರಿಯಾದಾಗ ಶಾಸನವಾಗಿ ಜಾರಿಗೆ ಬಂತು. ಕರ್ನಾಟಕದ ಲಕ್ಷಾಂತರ ರೈತ ಗೇಣಿದಾರರೆಲ್ಲ ಖಾತೆದಾರರಾದರು. ಶಾಂತವೇರಿ ಗೋಪಾಲ ಗೌಡರ ಆತ್ಮಕ್ಕೆ ಈಗ ಚಿರ ಶಾಂತಿ ದೊರಕಿದಂತಾಯ್ತು.

ಗುರುತಲ್ಲ ಸ್ವಾಮಿ: ಹೆಗ್ಗುರುತು



ಕಥೆ

ಕೆ. ಸತ್ಯನಾರಾಯಣ



-೧-

ವಾರ್ಟನ್ ವಾಣಿಜ್ಯ ಸಂಸ್ಥೆ ಮತ್ತು ವಿಶ್ವಬ್ಯಾಂಕ್ ಸಾಮಾಜಿಕ ಮಂಡಳ,
ಫಿಲ್‌ಡೆಲ್ಫಿಯಾ ಮತ್ತು ವಾಷಿಂಗ್‌ಟನ್

ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣ, ಏಪ್ರಿಲ್ 14 ರಿಂದ 18, 201...
ಸ್ಥಳ: ಜಾನ್ ಸ್ಟೈನ್‌ಬಕ್ ಕಟ್ಟಡ
ಮೂರನೇ ಮಹಡಿ, ನಾಲ್ಕನೇ ಕೊಠಡಿ (304).
ವಿಷಯ: ಇಸ್ಲಾಂ, ಮುಸ್ಲಿಮರು ಮತ್ತು ಮೈಕ್ರೋ ಫೈನಾನ್ಸ್
ಭಾಗವಹಿಸುವವರು: ಏಷ್ಯಾ, ಆಫ್ರಿಕಾ ಖಂಡಗಳ ಮುಸ್ಲಿಂ ದೇಶಗಳ ಸರ್ಕಾರಿ ಧುರೀಣರು,
ವಿಷಯ ತಜ್ಞರು, ಬ್ಯಾಂಕ್ ನಿರ್ದೇಶಕರು, ಅಧಿಕಾರಿಗಳು.
ಸಮಾರೋಪ ಪೂರ್ವ ಭಾಷಣ: ಸಯೀದ್ ಯಾಕೂಬ್
ಮ್ಯಾಗ್ಸೆಸೆ ಮತ್ತು ನೊಬೆಲ್ ಪ್ರಶಸ್ತಿ ವಿಜೇತರು,
ಗ್ರಾಮೀಣ ಬ್ಯಾಂಕ್ ಧುರೀಣರು, ಢಾಕಾ, ಬಂಗ್ಲಾದೇಶ.

-೨-

ಮೇಲಿನ ಸಂಕಿರಣಕ್ಕೆ ನನ್ನನ್ನು ಕಳಿಸಿದ್ದೇಕೆ ಎಂಬುದೇ ಇಂದಿಗೂ ನನಗೊಂದು ಸೋಜಿಗ. ನಿಜ, ಸಾಬರ ಬ್ಯಾಂಕ್ ಎಂದೇ ಬೆಂಗಳೂರಿನಲ್ಲೆಲ್ಲ ಪ್ರಸಿದ್ಧವಾಗಿರುವ ಬ್ಯಾಂಕ್ ಶಾಖೆಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಸಿಟಿ ಮಾರ್ಕೆಟ್ ಮತ್ತು ಕಲಾಸಿಪಾಳ್ಯದ ನಡುವೆ ಇರುವ ಪ್ರಸಿದ್ಧವಾದ ಓಣಿಯೊಂದರಲ್ಲಿ ನಮ್ಮ ಬ್ಯಾಂಕಿರುವುದು. ನಗರದಲ್ಲೇ ತುಂಬಾ ಹಳೆ ಕಟ್ಟಡ. ಬಹುಪಾಲು ಬಾಡಿಗೆದಾರರು ನೂರಾರು ವರ್ಷಗಳಿಂದ ಹಳೆ ಬಾಡಿಗೆಯ ಮೇಲೇ ಇರುವವರು. ಮುಸಲ್ಮಾನರಾದರೂ ವಕ್ಫ್ ಮಂಡಳಿಯವರಿಗೆ ಕೂಡ ಖಾಲಿ ಮಾಡಿಸಲೂ ಸಾಧ್ಯವಾಗಿಲ್ಲ, ಬಾಡಿಗೆ ಹೆಚ್ಚಿಸುವುದಂತೂ ದೂರದ ಮಾತು. ಓಣಿಯ ತುಂಬಾ ಮಾಂಸದಂಗಡಿಗಳು, ಬಣ್ಣ, ಕಬ್ಬಿಣ, ಹಗ್ಗ ಸಾಮಾನುಗಳಂಗಡಿ. ಸಂಜೆಯಾದರೆ ಸಾಕು, ನಗರದ ಎಲ್ಲ ಭಾಗಗಳಿಂದ ಜನ ಬಂದು ಕಬಾಬ್‌ಗೆ, ಬಿರಿಯಾನಿಗೆ, ಕೀಮಾಗೆಂದು ಸೇರಿಬಿಟ್ಟರೆ ಬ್ಯಾಂಕ್ ಕೆಲಸ ಮುಗಿಸಿದ ನಮಗೆ ಸ್ಕೂಟರ್‌ನ ಜನಸಂದಣಿಯಲ್ಲಿ ತೂರಿಸಿ ಮೇನ್ ರೋಡಿಗೆ ತಲುಪುವುದೇ ಕಷ್ಟ.

ಸಾಬರ ಬ್ಯಾಂಕೆಂದು ಹೆಸರು ಬಂದಿದ್ದರೂ ನಿಜವಾಗಿ ನೋಡಿದರೆ ಅನ್ವರ್ಥನಾಮವಲ್ಲ. ಮೆಜಾರಿಟಿ ಠೇವಣಿದಾರರು, ಮುಸ್ಲಿಮರಲ್ಲ, ಮೊದಲಿಯಾರ್‌ಗಳು, ನಾಯುಡುಗಳು, ತಿಗಳರು ಮತ್ತು ಕೋಮಟಿಗಳು. ಸಾಲ ಪಡೆದವರ ಪೈಕಿಯೂ ಇವರದೇ ಮೆಜಾರಿಟಿ. ಹೀಗಿದ್ದರೂ ಈ ಶಾಖೆಗೆ ವರ್ಗವಾದ ತಕ್ಷಣ ಸಹೋದ್ಯೋಗಿಗಳೆಲ್ಲ ರೇಗಿಸಿದರು. "'ಏನು ಸ್ವಾಮಿ, ಪಾಕಿಸ್ತಾನಕ್ಕೆ ವರ್ಗವಾಯಿತೇ, ಇನ್ನು ಬಿಡಿ ದಿನವೂ ಬಿರಯಾನಿ ತಿನ್ನಬಹುದು. ಬೆಳಗ್ಗೆಯಿಂದ ಸಂಜೆಯ ತನಕ ಸೆಂಟ್ ವಾಸನೆ ಕುಡಿಯಬಹುದು. ಮುಸಲ್ಮಾನ್ ಬಂಧುಗಳು ನಮ್ಮ ಬ್ಯಾಂಕಿಂದ ಹಣ ತೆಗೆದುಕೊಂಡು ಹೋಗಿ ನಾಲ್ಕು ಜನ ಹೆಂಡರಿಗೆ ನಗನಗತಾ ಹಂಚುವುದನ್ನು, ಇಲ್ಲಾ ಪಾಕಿಸ್ತಾನದ ಬ್ಯಾಂಕುಗಳಲ್ಲಿ ಜಮಾ ಮಾಡುವುದನ್ನು ನೋಡಿ ಸಂತೋಷಪಡಬಹುದು.' 'ಇಲ್ಲ ಇಲ್ಲ ವಸ್ತುಸ್ಥಿತಿ ಹಾಗೇನಿಲ್ಲ ಎಂದು ಬಿಡಿಸಿ ಬಿಡಿಸಿ ಹೇಳಿದರೂ ಯಾರೂ ನಂಬುತ್ತಿರಲಿಲ್ಲ. ಸ್ವಾಮಿ, ನಮ್ಮದು ಸರ್ಕಾರಿ ಬ್ಯಾಂಕ್. ನಮ್ಮ ಬ್ಯಾಂಕ್ ಮುಂದುಗಡೆ ಬೀದಿಯಲ್ಲಿರುವ ಅಮಾನತ್ ಬ್ಯಾಂಕಿದೆಯಲ್ಲ, ಅದು ಮುಸ್ಲಿಂ ಜನಾಂಗಕ್ಕೆ ಸೇರಿದ್ದು.' ಸ್ನೇಹಿತರು, ಬಂಧುಗಳಿರಲಿ ಸ್ವಂತ ನಮ್ಮ ಬ್ಯಾಂಕಿನ ಹಿರಿಯಧಿಕಾರಿಗಳು ಕೂಡ ನಂಬೋಲ್ಲ. 'ನಿಮ್ಮ ಬ್ಯಾಂಕ್ ತುಂಬಾ ಗಲೀಜು, ಕೆಟ್ಟ ವಾಸನೆ, ಮಹಡಿ ಮೆಟ್ಟಿಲುಗಳೆಲ್ಲ ಹಳೆ ಕಾಲದ ಮರದ್ದು, ಯಾವಾಗ ಬೇಕಾದರೂ ಕಟಕಟ ಅಂತಾ ಮುರಿದುಹೋಗಬಹುದು. ನಿಮ್ಮ ಬ್ಯಾಂಕ್ ಇನ್‌ಸ್ಪೆಕ್ಷನ್ನು ಬೇಡ, ಆಡಿಟ್ಟೂ ಬೇಡ.' ಅನ್ನುವರು.

ಬಾಳಿಗಾರ ಚೇಂಬರ್ ಸುತ್ತ ಕುಳಿತಿದ್ದವರೆಲ್ಲ ಸಂಜೆಯಾದ್ದರಿಂದ ಮನೆಗೆ ಹೊರಡುವ ತರಾತುರಿಯಲ್ಲಿದ್ದುದು ಗ್ಲಾಜಿನ ಮೂಲಕ ಕಾಣಿಸಿತು. ಬಾಳಿಗಾರಿಗು ಮಾತು ಶುರುಮಾಡುವಾಗಿದ್ದ ಉತ್ಸಾಹ ಮುಗಿಸುವಾಗ ಇರಲಿಲ್ಲ. ಅವರು ಕೂಡ ತಮ್ಮ ಊಟದ ಡಬ್ಬಿಯನ್ನ ಬ್ರೀಫ್‌ಕೇಸ್ ಒಳಗೆ ಇಟ್ಟುಕೊಂಡು ಟೈ ಸರಿಪಡಿಸಿಕೊಳ್ಳುತ್ತಾ ಹೊರಡಲು ಚಡಪಡಿಸಿದರು. ನನ್ನ ಪ್ರಶ್ನೆ, ಸಂದೇಹ ಬಾಯಿಂದ ಹೊರಗೆ ಬಂದೇಬಿಟ್ಟಿತು.

Islam and Micro financa ಸೆಮಿನಾರಿಗೆ ನಮ್ಮ ದೇಶದವರು, ನಮ್ಮ ಬ್ಯಾಂಕಿನವರು ಏಕೆ ಹೋಗಬೇಕು. ಮುಸ್ಲಿಮರು ನಮ್ಮ ದೇಶದ ನಾಗರೀಕರಲ್ಲವೆ, ಎಲ್ಲರಿಗೂ ಅನ್ವಯವಾಗುವ ಸಾಲದ ನೀತಿ, ಬಡ್ಡಿಯ ದರವೇ ತಾನೇ ಅವರಿಗೂ ಇರೋದು.

ಬಾಳಿಗಾ ಕುರ್ಚಿಯಿಂದ ಏಳುತ್ತಾ, ಬಾಯಿ ತುಂಬಾ ನಕ್ಕರು. ನೀನೊಬ್ಬ ಪೆದ್ದನೆನ್ನುವಂತೆ.

ಇಂತಹ ಪ್ರಶ್ನೆಗಳನ್ನೆಲ್ಲ ಇಷ್ಟು ವರ್ಷ ಸರ್ವೀಸಾದ ಮೇಲೆ ನೀವು ಕೇಳಲೇಬಾರದು. ಏಕೆಂದರೆ ನಮಗೂ ಉತ್ತರ ಏನೆಂದು ಗೊತ್ತಿರುತ್ತೆ. ಇಷ್ಟಕ್ಕೂ ಅಲ್ಪಸಂಖ್ಯಾತರಿಗೆ ನೆರವಾಗಬೇಕೆನ್ನುವ ಉದ್ದೇಶದಲ್ಲಿ ತಪ್ಪೇನು ಇಲ್ಲವಲ್ಲ.

-೩-

ಬಾಳಿಗಾರ ಹಿತವಚನವಾಗಲಿ, ಸೆಮಿನಾರ್ ತಯಾರಿಗೆಂದು ಕೊಟ್ಟಿದ್ದ ಸಾಹಿತ್ಯದ ಓದಾಗಲೀ ನನ್ನ ಗೊಂದಲವನ್ನು ಕಡಮೆ ಮಾಡಲಿಲ್ಲ. ಇಸ್ಲಾಂ ಧರ್ಮದ ಪ್ರಕಾರ ಬಡ್ಡಿ ವಿಧಿಸುವುದು ಪಾಪವೆಂದಾದರೆ, ನಮ್ಮೂರಾದ ಗುತ್ತಲಿನಲ್ಲಿ, ಏಕೆ ಸಾದಿಕ್ ಸಾಹೇಬರು ಮುಸ್ಲಿಮರಿಗೆ ಮಾತ್ರವಲ್ಲ, ಹಿಂದೂಗಳಿಗೂ ಕೂಡ ಸಾಲ ಕೊಡುತ್ತಿದ್ದರು? ಸಾಲ ವಾಪ್‌ಸ್ ಕೊಡದೆ ಹೋದರೆ, ಬಡ್ಡಿ ಕಂತು ಕಟ್ಟದೆ ಹೋದರೆ, ಗಿರವಿಗಿಟ್ಟಿದ್ದ ಜಮೀನನ್ನು ಬರೆಸಿಕೊಂಡು ಬಿಡುತ್ತಿದ್ದರು. ಜಾನುವಾರುಗಳನ್ನು ಕೊಟ್ಟಿಗೆಯಿಂದಲೇ ಬಿಚ್ಚಿಕೊಂಡು ಹೋಗಿಬಿಡುತ್ತಿದ್ದರು. ತಕರಾರು ಮಾಡುವವರನ್ನು ಹದ್ದುಬಸ್ತಿನಲ್ಲಿಡಲು ಸಾಹೇಬರು ಕುದೇರು, ನರಸೀಪುರದ ಕಡೆಯಿಂದ ಕರೆಸುತ್ತಿದ್ದ ಪಠಾಣರಿಗೆ ಸಾಬರು ಮಾತ್ರವಲ್ಲ, ಗೌಡರು, ಲಿಂಗಾಯಿತರು ಕೂಡ ಗಡಗಡ ನಡುಗೋರು. ಅಂಗಡಿಯ ಅಮೀನ್‌ಸಾಬಿ ಹಾಗೆ ನೋಡಿದರೆ ಸಾದಿಕ್ ಸಾಹೇಬರ ದೂರದ ಸಂಬಂಧದವನಂತೆ. ಆದರೂ ಸಾಲದ ಕಂತು ಸರಿಯಾಗಿ ಕಟ್ಟಲಿಲ್ಲವೆಂದು ಪೆಟ್ಟಿಗೆಯಂಗಡಿಯನ್ನೇ ಸಾಮಾನು ಸಮೇತ ಬಿಡಿಸಿಕೊಂಡು ಮಾದುಗೌಡನಿಗೆ ಮಾರಿದ್ದರು. ಸಣ್ಣಮಟ್ಟ ಬಡ್ಡಿ ವ್ಯವಹಾರ ಮಾಡುತ್ತಿದ್ದ ನಮ್ಮ ದೊಡ್ಡಜ್ಜಿ ಹತ್ತಿರ ಸಾಲ ಕೇಳಲು ಬರುತ್ತಿದ್ದ ಎಷ್ಟೋ ಮುಸಲ್ಮಾನರೇ ಸಾದಿಕ್ ಸಾಹೇಬರ ಹತ್ತಿರ ಸಾಲ ಮಾಡಿದ ಯಾರೂ ಉದ್ಧಾರವಾಗುವುದಿಲ್ಲವೆಂದು ಯಾವಾಗಲೂ ಅಲವತ್ತುಕೊಳ್ಳುತ್ತಿದ್ದರು.

ಬಿ.ಎ. ಓದುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದ ಸಯ್‌ದ್ ಪಾಷಾನ ತಂದೆಗೂ ನಮ್ಮ ಬೀದಿಯ ಕೊನೆ ಮನೆಯಲ್ಲಿದ್ದ ಕೆನರಾ ಬ್ಯಾಂಕ್ ಮ್ಯಾನೇಜರ್ ಶಾಂತಾರಾಮ ಕಾರಂತರಿಗೂ ಗಳಸ್ಯ ಕಂಠಸ್ಯ. ಪಾಷಾರ ಸಾಲಸೋಲ ವ್ಯವಹಾರವೆಲ್ಲ ಇದ್ದದ್ದು ಕೆನರಾ ಬ್ಯಾಂಕಿನಲ್ಲೇ. ಕಾರಂತರು, ಪಾಷಾಸಾಹೇಬರು ಪ್ರತಿ ಭಾನುವಾರವೂ ಮೈಸೂರಿಗೆ ಹೋಗಿ ಹಿಂದಿ ಸಿನಿಮಾ ನೋಡಿ ಬರೋರು. ತಹಶೀಲ್ದಾರರಾಗಿದ್ದ ನಮ್ಮ ತಂದೆ ಹತ್ತಿರವೂ ಪಾಷಾ ಸಾಹೇಬರಿಗೆ ಏನಾದರೂ ಮಾತುಕತೆ-ವ್ಯವಹಾರವಿದ್ದೇ ಇರೋದು. ನಮ್ಮ ತಂದೆ ಕಿಚಾಯಿಸೋರು, ಏನ್ರೀ ಸಾಹೇಬ್ರೇ, ಮೂರಂತಸ್ತಿನ ನಿಮ್ಮ ಕ್ರೆಸೆಂಟ್ ಸೆಂಟ್ರಲ್ ಬ್ಯಾಂಕ್ ಇಟ್ಟಕೊಂಡು ಕಾರಂತರ ಬ್ಯಾಂಕಿನ ಹತ್ತಿರ ಏನು ವ್ಯವಹಾರ ನಿಮ್ಮದು. ಪಾಷಾನು ನಗುತ್ತಲೇ ಉತ್ತರಿಸೋರು. ಹೆಸರಿಗೆ ನಮ್ಮ ಬ್ಯಾಂಕ್ ಸ್ವಾಮಿ ಅದು, ಅಡ್ರಸ್ಗು ಮಂಡ್ಯ ಸಿಟಿ. ಸಾಲ ಕೊಡೋದೇನಿದ್ದರು, ಕ್ಲೋಸ್‌ಪೇಟೆ, ಚನ್ನಪಟ್ಣ, ಬೆಂಗಳೂರಿನ ಶಿವಾಜಿ ನಗರದ ದೊಡ್ಡ ದೊಡ್ಡ ಕುಳಗಳಿಗೆ. ನನ್ನಂತ ಜುಜಬಿ ರೈಸ್ ಮಿಲ್ ಓನ್‌ರ್‌ನ ಯಾರು ಕೇಳ್ತಾರೆ.

ನಾನು ಹೋಗುತ್ತಿದ್ದುದು ಬ್ಯಾಂಕಿಂಗ್ ಸೆಮಿನಾರಿಗಾದರೂ ದಿಲ್ಲಿಯ ಮಂತ್ರಾಲಯದಿಂದ ಕಳಿಸಿಕೊಟ್ಟಿದ್ದ ಸಾಹಿತ್ಯದಲ್ಲಿ ನಮ್ಮ ಸಂವಿಧಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಸ್ಥಾನ, ಸ್ವಾತಂತ್ರ್ಯ ಬಂದಮೇಲೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಯಭಾರಿಗಳು, ಉಪಕುಲಪತಿಗಳು, ನ್ಯಾಯಾಧೀಶರುಗಳು, ಇಂತಹ ಹುದ್ದೆಗಳನ್ನಲಂಕರಿಸಿದ ಮುಸ್ಲಿಮರ ಜೀವನ ವಿವರಗಳು. ಮದ್ರಸಾಗಳಿಗೆ ನೀಡಿರುವ ನೆರವು, ಒದಗಿಸಿರುವ ಕಂಪ್ಯೂಟರ್‌ಗಳು, ಹಜ್ ಸಬ್ಸಿಡಿ ಪ್ರತಿವರ್ಷವೂ ಹೆಚ್ಚುತ್ತಲೇ ಇರುವುದು, ಇದೆಲ್ಲವೂ ಪುಟಪುಟದಲ್ಲೂ ತುಂಬಿಕೊಂಡಿತ್ತು. ಸಾವಿರಾರು ಪುಟಗಳ ಪೂರ್ವಭಾವಿ ಸಾಹಿತ್ಯವನ್ನು ಓದುವುದರಲ್ಲೇ ಸುಸ್ತಾಗುತ್ತಿತ್ತು.

ಈಗ ಕುಟುಂಬದ ವಲಯದವರು, ಬರವಣಿಗೆಯ ಮಿತ್ರರು ಕೂಡ ಗೇಲಿ ಮಾಡಲು ಸೇರಿಕೊಂಡರು. ಸೆಮಿನಾರಿಂದ ವಾಪ್‌ಸ್ ಬಂದಮೇಲೆ ಒಂದು All Muslim Branch ಮಾಡಿ ನಿನ್ನನ್ನೇ ಚೀಫ್ ಮ್ಯಾನೇಜರ್ ಮಾಡ್ತಾರೆ. ಒಳ್ಳೆ ಪ್ರಮೋಷನ್ ಕೊಡ್ತಾರೆ. ಸೆಮಿನಾರ್‌ಗೆಂದು ಯಾಕೂಬರ ಆತ್ಮಚರಿತ್ರೆಯನ್ನು ಮತ್ತೆ ಓದುತ್ತಿದ್ದ ನಾನು ಬಂಗ್ಲಾದಲ್ಲಿ ನಿಜವಾಗಿಯೂ ಯಾಕೂಬರು ಉಂಟುಮಾಡಿದ ಕ್ರಾಂತಿ ಸ್ವರೂಪದ ಬದಲಾವಣೆಯನ್ನು ಎಲ್ಲರಿಗೂ ವಿವರಿಸಲು ಹೊರಟರೆ, ಸಾಧನೆಯನ್ನೂ, ಪರಿವರ್ತನೆಯನ್ನೂ ಒಪ್ಪೋರು. ಒಪ್ಪಿದರೂ ಷರಾ ಮಾತ್ರ ಕುಹಕದ್ದೇ. ಬಂಗ್ಲಾದೇಶದ್ದು ಒಂದು exception. ಹಾಗೆಂದರೆ ಎಲ್ಲ ಸಾಬರು ಒಳ್ಳೆಯವರೆಂದು ಅರ್ಥವಲ್ಲ. ನೀವೇಕೆ ಯಾವಾಗಲೂ ಅವರನ್ನು ಮುಸಲ್ಮಾನರಾಗೇ ನೋಡುತ್ತೀರೆಂದು ನಾನು ಬೇಸರದಿಂದ ಕೇಳಿದರೆ, ನಿನ್ನದೊಳ್ಳೆ ತಮಾಷೆ. ಮುಸಲ್ಮಾನರನ್ನು ಮುಸಲ್ಮಾನರಂತೆ ತಾನೇ ನೋಡಬೇಕಾದ್ದು. ನಿನ್ನದೊಳ್ಳೆ ವಿಚಿತ್ರದ ಮಾತು ಎಂದು ನನಗೇ ರೇಗುವರು.

-೪-

ನಮ್ಮ ಭಾರತ ತಂಡದಲ್ಲಿ ನನ್ನಂತವರೇ ಇನ್ನಿಬ್ಬರು ಬ್ಯಾಂಕ್ ಅಧಿಕಾರಿಗಳೇ ಅಲ್ಲದೆ, ವಿತ್ತ ಮಂತ್ರಾಲಯದ ಇಬ್ಬರು ನಿರ್ದೇಶಕರು, ಒಬ್ಬ ಅಧೀನ ಕಾರ್ಯದರ್ಶಿ, ಮೂರು ಜನ ಆರ್ಥಿಕ ಪತ್ರಿಕೆಯ ವರದಿಗಾರರೂ ಇದ್ದರು. ನಮ್ಮೆಲ್ಲರ ನಾಯಕತ್ವ ವಹಿಸಿದ್ದ ಹಿರಿಯ ಕಾರ್ಯದರ್ಶಿಗಳು ಎಲ್ಲರನ್ನೂ ಲಾಬಿಯಲ್ಲಿ ಕೂರಿಸಿಕೊಂಡು ಸೆಮಿನಾರಿನಲ್ಲಿ ನಾವು ನಡೆದುಕೊಳ್ಳಬೇಕಾದ ರೀತಿಯ ಬಗ್ಗೆ ಬುದ್ಧಿಮಾತು ಹೇಳಿದರು. ಚರ್ಚಾಸ್ಪದವಾಗುವಂತಹ ಯಾವುದೇ ಮಾತು ಹೇಳಬಾರದು, ಮಂತ್ರಾಲಯವು ಕೊಟ್ಟಿರುವ ಸಾಹಿತ್ಯದಿಂದಲೇ ಅಂಕಿ-ಅಂಶಗಳನ್ನು ಉಲ್ಲೇಖಿಸಬೇಕು, ಯಾರದೇ, ಯಾವುದೇ ಮಾತಿಗೂ ತೀವ್ರ ಪ್ರತಿರೋಧ, ಪ್ರತಿಕ್ರಿಯೆ ವ್ಯಕ್ತಪಡಿಸಬಾರದು. ಪ್ರತಿನಿಧಿಗಳೆಲ್ಲರ ಜೊತೆ ಸ್ನೇಹಮಯವಾಗಿ ವರ್ತಿಸಿ, ಭಾರತದಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿಸಿ, ಭಾರತಕ್ಕೂ ಎಲ್ಲರನ್ನೂ ಆಹ್ವಾನಿಸಬೇಕು.

ಸೆಮಿನಾರಿನಲ್ಲಿ ಮೊದಲ ದಿನ ನನಗೆ ಹಲವು ಆಶ್ಚರ್ಯಗಳು ಕಾದಿದ್ದವು. ಮುಸಲ್ಮಾನರ ಹೆಸರುಗಳಲ್ಲಿ ಎಷ್ಟೊಂದು ವೈವಿಧ್ಯ! ಮಾಸೂಸ್-ಅಲ್-ಖುರಾದ್‌ವಿ, ದಾವೂದ್ ಮೊರಾದಿಯ್‌ನ್, ಜಲಾಲುದ್ದೀನ್ ಹರಾನಿ, ಮಹಮ್‌ದ್ ಮೋರಸಿ, ಅಬ್ದೆಲ್-ಮಾನಿಯ್‌ವ್-ಅಬೂಲ್ ಫಾತಾ, ಅಬುಲ್ ಕಾಸಿಮ್ ವಲೇಬಿ, ಅಹಮ್‌ದ್ ಹಿಲೇಬಿ. ಯಾವ ಹೆಸರನ್ನೂ ಪೂರ್ತಿಯಾಗಿ ನೆನಪಿಟ್ಟುಕೊಳ್ಳುವುದು, ಇಲ್ಲ ಉಚ್ಚರಿಸುವುದು ಕಷ್ಟವಾಗುತ್ತಿತ್ತು. ಸರ್ ಎಂದು ಕೂಗಲು ಹೊರಟರೆ ಒಪ್ಪದೆ ತಮ್ಮ ಹೆಸರನ್ನು ಉಚ್ಚರಿಸುವುದು ಹೇಗೆ ಎಂದು ಹೇಳಿಕೊಡುವರು. ಕೆಲವರು ಯೂರೋಪಿಯನ್ನರಿಗಿಂತಲೂ ಬೆಳ್ಳಗೆ, ಕೆಂಚಗೆ ಇದ್ದು ಸೂಟುಬೂಟಿನಲ್ಲಿ ಇಂಗ್ಲಿಷ್ ಸಿನೆಮಾ ನಾಯಕರುಗಳಿಗಿಂತಲೂ ಠೀಕುಠಾಕಾಗಿ ಕಾಣುತ್ತಿದ್ದರು. ಮುಸ್ಲಿಂ ನೀಗ್ರೋ ಹೆಂಗಸರನ್ನು ನಾನು ಮೊದಲ ಬಾರಿಗೆ ನೋಡುತ್ತಿದ್ದೆ. ಇಡೀ ದೇಹದಲ್ಲಿ ಕೆಂಪಾಗಿದ್ದುದು ಒರಟು ತುಟಿಗಳು ಮಾತ್ರ, ತುಟಿಗೆ ಏನೋ ದ್ರವ ಸವರಿದ್ದರೆಂದು ಕಾಣುತ್ತದೆ. ಜಿನುಗುತ್ತಿದ್ದ ರಸವನ್ನೇ ನಾಲಿಗೆಯ ತುದಿ ಸವರುತ್ತಿತ್ತು. ಮಾತುಮಾತಿನ ಮಧ್ಯ ನಾಲಿಗೆಯ ತುದಿ ತುಟಿ ಸವರುವಾಗ ಮಾತನ್ನೇ ನಿಲ್ಲಿಸಿಬಿಡೋರು. ಇಂತಹ ಒಬ್ಬಾಕೆ ಲಿಫ್ಟ್ ಒಳಗೆ ನನ್ನ ಪಕ್ಕದಲ್ಲಿ ನಿಂತಾಗ ಎದುರು ಕನ್ನಡಿಯಲ್ಲಿ ನನ್ನನ್ನು ನಾನೇ ನೋಡಿಕೊಂಡರೆ ನಾನೊಂದು ಗುಬ್ಬಚ್ಚಿ ಮರಿಯಂತೆ ಕಾಣುತ್ತಿದ್ದೆ.

ಸೆಮಿನಾರಿನಲ್ಲಿ ಚರ್ಚೆಗಿಂತಲೂ ಪ್ರತಿನಿಧಿಗಳು ತಮ್ಮ ತಮ್ಮ ದೇಶಗಳಲ್ಲಿ ಮುಸಲ್ಮಾನರಿಗೆ ದೊರಕುತ್ತಿದ್ದ ಸಾಲ ಸೋಲದ ಸೌಲಭ್ಯಗಳ ಬಗ್ಗೆಯೇ ಹೇಳುತ್ತಿದ್ದರು. ಹೋಟಲುಗಳಿಗೆ, ರಸ್ತೆ ನಿರ್ಮಾಣಕ್ಕೆ, ಕೈಗಾರಿಕೆಗಳಿಗೆ, ರಫ್ತು ವ್ಯಾಪಾರಿಗಳಿಗೆ, ಪ್ರವಾಸಿಗರಿಗೆ ಸೌಲಭ್ಯವು ಯಥೇಚ್ಛವಾಗಿದ್ದು, ಸಣ್ಣಪುಟ್ಟ

ವ್ಯಾಪಾರಿಗಳಿಗೆ, ತೋಟಗಾರರಿಗೆ, ವಿದ್ಯಾಭ್ಯಾಸಕ್ಕೆ, ಕೂಲಿ ಕೆಲಸಗಾರರಿಗೆ ಹಂಚಲು ಬ್ಯಾಂಕಲ್ಲಿ ಹಣವೇ ಇರಲಿಲ್ಲ. ಬ್ಯಾಂಕುಗಳಿಗೆ ಇಷ್ಟವೂ ಇರಲಿಲ್ಲ. ಯಾವುದೂ ಬಡ್ಡಿಯಿಲ್ಲದ ವ್ಯವಹಾರವಲ್ಲವಾದ್ದರಿಂದ ಬಡ್ಡಿ ಮೊತ್ತಕ್ಕೇ ತುಂಬಾ ಜನ ಹೆದರುತ್ತಿದ್ದರು. ಗಿರವಿಯಿಡಲು ಕೂಡ ಒಡವೆ-ವಸ್ತುಗಳಿರಲಿಲ್ಲ. ಮನೆಮಠದ್ದಂತೂ ದೂರದ ಮಾತೇ. ವಿಶ್ವ ಬ್ಯಾಂಕೋ, ಏಷ್ಯನ್ ಬ್ಯಾಂಕೋ ಮುಂದೆ ಬಂದು ಬಂಗ್ಲಾದಲ್ಲಾದಂತೆ ಬಡವರಿಗೆ ಸಾಲ ಸೋಲ ಕೊಟ್ಟರೆ ಮಾತ್ರ ಸಣ್ಣಪುಟ್ಟ ಬದಲಾವಣೆ. ಎಲ್ಲರೂ ಮತ್ತೆ ಮತ್ತೆ ಇದನ್ನೇ ಹೇಳುತ್ತಿದ್ದರು.

ನನ್ನ ರೂಮಿನ ಪಕ್ಕದಲ್ಲಿದ್ದ ಕುವೈತ್‌ನ ಬರೂನಿ ಬ್ಯಾಂಕ್ ಮ್ಯಾನೇಜರ್ ಮಾತ್ರ ನನಗೆ ಚೆನ್ನಾಗಿಯೇ ಗಂಟುಬಿದ್ದ. ಬೆಂಗಳೂರಲ್ಲಿ, ಹೈದ್ರಾಬಾದಲ್ಲಿ, ಮದ್ರಾಸಿನಲ್ಲಿ ನೀನು ನಮ್ಮ ಬ್ಯಾಂಕ್ ಪರವಾಗಿ ಕೆಲಸ ಮಾಡು. ನೀನು ಯಾರಿಗೆ ಹೇಳಿದರೆ ಅಂತವರಿಗೆ ಎಷ್ಟು ಬೇಕಾದರೂ ಸಾಲ ಕೊಡ್ತೇವೆ. ಸ್ವಲ್ಪ ಬಡ್ಡಿ ಜಾಸ್ತಿ ಎನ್ನುವುದು ಬಿಟ್ಟರೆ, ಮರುಪಾವತಿಗೆ ತುಂಬಾ ಟೈಂ ಕೊಡ್ತೇವೆ. ಗಿರವಿಗೆ ಹೆಚ್ಚು ಆಸ್ತಿ ಕೇಳೋಲ್ಲ. documentation ಕೂಡ ತುಂಬಾ ಕಡಮೆ. ನಿನ್ನ ಮೂಲಕ ಸಾಲ ಪಡೆಯುವವರ ಪರವಾಗಿ ನನಗೆ ಬ್ಯಾಂಕ್ ಕಡೆಯಿಂದ ಕಮೀಷನ್ ಕೊಡತೇವೆ. ಕೆಲಸದಲ್ಲಿದ್ದುಕೊಂಡೇ ನೀನಿದನ್ನು ಮಾಡಬಹುದು. ಕಮೀಷನ್ ಸ್ವರೂಪ ಸೂಚಿಸುವಂತೆ ದುಬಾರಿ ಸೆಂಟ್ ಬಾಟಲ್, ಪೆನ್‌ಗಳು, ಮೊಬೈಲ್ ಫೋನ್, ಸಿಲ್ಕ್ ಬಟ್ಟೆ ಎಲ್ಲವನ್ನೂ ಹಂತಹಂತವಾಗಿ ನನಗೆ ಉಡುಗೊರೆಯಾಗಿ ಕೊಟ್ಟ.

ನಮ್ಮೆಲ್ಲರಿಗೂ ಕುತೂಹಲವಿದ್ದುದು ಗುರುವಾರ ಬೆಳಿಗ್ಗೆ ಯಾಕೂಬರು ಮಾಡಬೇಕಾಗಿದ್ದ ಭಾಷಣದಲ್ಲಿ. ಬಂದೇಬಿಟ್ಟರು ಯಾಕೂಬ್ ಬುಧವಾರ ಸಂಜೆಯೇ, ಭಾಷಣ ಗುರುವಾರವಿದ್ದರೂ. ಪುಸ್ತಕದ ರಕ್ಷಾಕವಚದಲ್ಲಿ, ಫೋಟೋಗಳಲ್ಲಿ ಕಾಣುವುದಕ್ಕಿಂತಲೂ ಸಾಧಾರಣವಾಗಿದ್ದರು. ಮಧ್ಯಮ ಎತ್ತರ, ತೋರುದೇಹ, ಸಾಕಷ್ಟು ಮುಂದೆ ಬಂದಿರುವ ಹೊಟ್ಟೆ, ಮುಕ್ಕಾಲು ಮೂರುವಾಸಿ ಬೋಳಾದ ತಲೆ, ಮುಖದ ಎಡಭಾಗದಲ್ಲಿ ಸಣ್ಣಪುಟ್ಟ ಬೊಕ್ಕೆಗಳು. ಹಾಕಿಕೊಂಡಿದ್ದ ನೀಲಿ ಬಣ್ಣದ ತುಂಬುತೋಳಿನ ಷರ್ಟ್ ಮಂಡಿತನಕ ಬಂದಿದ್ದರೂ ಇನ್‌ಷರ್ಟ್ ಮಾಡಿರಲಿಲ್ಲ. ಕಾಲುಚೀಲ ಹಾಕಿಕೊಳ್ಳದೆ ಬೂಟು ಧರಿಸಿದ್ದರಿಂದ ನಡೆದಾಡುವಾಗ ಚೂರು ಚೂರು ಪಾದದ ಚರ್ಮದ ಭಾಗ ಕಾಣುವುದು.

ಯಾಕೂಬರದು ದುಡುದುಡು ನಡಿಗೆ. ತುಂಬುಮಾತು. ಸೆಮಿನಾರಿಗೆ ಬಂದಿದ್ದವರಲ್ಲಿ ಕೆಲವರು ಈಗಾಗಲೇ ಗೊತ್ತಿದ್ದರು. ಇನ್ನು ಕೆಲವರ ಸ್ನೇಹಿತರು ಗೊತ್ತಿದ್ದರು. ಬಂಗ್ಲಾ, ಬರ್ಮೀಸ್, ಹಿಂದಿ, ಇಂಗ್ಲಿಷ್, ಉರ್ದು, ದಖ್ಖಿನಿ, ಮೈಥಿಲಿ-ಹತ್ತು ಹಲವು ಭಾಷೆಗಳು ಗೊತ್ತಿದ್ದವು. ಭಾರತವಂತೂ ತೀರಾ ಅಂಗೈಯಲ್ಲೇ. ನಾನು ಬೆಂಗಳೂರಿನವನೆಂದು ಗೊತ್ತಾದ ತಕ್ಷಣ, ಹೈದ್ರಾಬಾದಿನ ಕೆಲವು ಸಾಲ ನೀಡುವ ಬ್ಯಾಂಕುಗಳು ಸಂಸ್ಥೆಗಳ ಬಗ್ಗೆ, ಬ್ಯಾಂಕುಗಳ ಸಂಘಟಕರ ಬಗ್ಗೆ ಕೇಳಿದರು. ಸಂಸ್ಥೆಗಳ ಬಗ್ಗೆಯಾಗಲೀ, ಸಂಘಟಕರ ಬಗ್ಗೆಯಾಗಲೀ ನನಗೆ ಏನೂ ಗೊತ್ತಿಲ್ಲದೆ ಇದ್ದರಿಂದ ನಾನೇ ಪೆಚ್ಚುಮುಖ ಮಾಡಿಕೊಂಡು ನಿಂತೆ. ತೆಲುಗಿಗೂ ಕನ್ನಡಕ್ಕೂ ವ್ಯತ್ಯಾಸ ಗೊತ್ತಿಲ್ಲದ ಯಾಕೂಬ್ ಭೋಜನಂ ಹೋಗಯಾ ಎಂದರು. ತಮಾಷೆಯ ಮಾತಿಗೂ ನಾನು ಪೆಚ್ಚಾಗಿಯೆ ನಿಂತಿದ್ದನ್ನು ಕಂಡು ನಿಮ್ಮ ಬೆಂಗಳೂರಲ್ಲಿ ದೊಡ್ಡ ಗಣಪತಿಯಿದೆಯಲ್ಲ-ಬಂಡೆ ಮೇಲೆ-ಅದಕ್ಕಿಂತಲೂ ದೊಡ್ಡದಾದ ಮಾರುತಿ ಇನ್ನೂ ದೊಡ್ಡ ಬಂಡೆ ಮೇಲೆ ನಮ್ಮ ನಾರಾಯಣ ಗಂಜ್‌ನಲ್ಲಿದೆಯೆಂದು ಹೇಳುತ್ತಾ ಆತ್ಮೀಯ ವಾತಾವರಣ ಹಬ್ಬಿಸಲು ಪ್ರಯತ್ನಿಸಿದರು.

ಒಟ್ಟಿನಲ್ಲಿ ಯಾವಾಗಲೂ ಯಾಕೂಬರ ಸುತ್ತಮುತ್ತ ಸಣ್ಣ ಗುಂಪು. ಪ್ರತಿನಿಧಿಗಳು ಮುಗಿಬಿದ್ದು ತಮ್ಮ ತಮ್ಮ ದೇಶಗಳ ಬೇಡಿಕೆಗಳ ವಿವರಗಳನ್ನು ಮನದಟ್ಟು ಮಾಡಿಕೊಡುತ್ತಿದ್ದರು. ಫಿಲ್‌ಡೆಲ್ಫಿಯಾಗೆ ಇದು ತಮ್ಮದು ಮೂರನೆದೋ, ನಾಲ್ಕನೆದೋ ಭೇಟಿಯೆಂದು, ದಿನದುದ್ದಕ್ಕೂ ಇರುವ ಎಳೆಬಿಸಿಲು ವಾತಾವರಣ, ಕ್ಯಾಂಪಸ್ ತುಂಬಾ ಇರುವ ಆರ್ಕಿಡ್ ಹೂಗಳ ಮರ ತಮಗೆ ಇಲ್ಲಿಗೆ ಬರಲು ಮುಖ್ಯ ಆಕರ್ಷಣೆಯೆಂದರು. ಸೆಮಿನಾರ್ ಸಂಘಟಕರಿಗೆ ಯಾಕೂಬರ ಬಗ್ಗೆ ವಿಶೇಷ ಗೌರವಗಳಿದ್ದುದು ಯಾಕೂಬರ ಪಕ್ಕ ನಿಂತವರ ಮುಖದ ಗೌರವ, ಭಕ್ತಿಯ ಭಾವದಲ್ಲಿ. ಯಾಕೂಬರಾಡಿದ ಪ್ರತಿ ಮಾತನ್ನು ಏಕಾಗ್ರತೆಯಿಂದ ಕೇಳಿಸಿಕೊಳ್ಳುತಿದ್ದ ತವಕದಲ್ಲಿ ಗೊತ್ತಾಗುತ್ತಿತ್ತು.

ಯಾಕೂಬರು ನಮ್ಮನ್ನುದ್ದೇಶಿಸಿ ಮಾತನಾಡುವುದಕ್ಕೆ ಮುಂಚೆ, ಮುಖದಿಂದ ಕನ್ನಡಕ ತೆಗೆದು ಮಡಿಸಿ ಕೇಸಿನಲ್ಲಿ ಹಾಕಿ ಜೇಬಿನಲ್ಲಿಟ್ಟುಕೊಂಡರು. ಜೇಬಿನಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ತೆಗೆದು ಮೈಕ್ ಪಕ್ಕ ಪೋಡಿಯಂ ಮೇಲಿಟ್ಟರು. ಪ್ಯಾಂಟಿನ ಎರಡು ಜೇಬಿನೊಳಗೂ ಕೈ ಇಳಿಬಿಟ್ಟು ಜೇಬಿನೊಳಗೇ ಕೈಗಳನ್ನು ಅಲ್ಲಾಡಿಸಿದರು. ಸೆಮಿನಾರ್ ಸಂಘಟಕರೆಲ್ಲ ಸಾಲಾಗಿ ಮೊದಲನೆ ಸಾಲಿನಲ್ಲಿ ಸೂಟುಧಾರಿಗಳಾಗಿ ಗಂಭೀರವದನರಾಗಿ ಕೂತಿದ್ದರು. ಭಾಷಣದ ಧ್ವನಿ ಮುದ್ರಣಕ್ಕೆ ಕೂಡ ವ್ಯವಸ್ಥೆ ಮಾಡಲಾಗಿತ್ತು. ಯಾಕೂಬರಿಗೆ ಬೇಕಾಗಬಹುದೆಂದು ಪವರ್ ಪಾಯಿಂಟ್ ಪ್ರೆಸೆಂಟೇಶ್‌ನ್‌ಗಾಗಿ ಪರದೆ, ಪ್ರೊಜೆಕ್ಟರ್, ರಿಮೋಟ್ ಎಲ್ಲವನ್ನೂ ಜೋಡಿಸಿಡಲಾಗಿತ್ತು. ಯಾಕೂಬ್ ಸಣ್ಣದಾಗಿ ಲೊಚಗುಟ್ಟುತ್ತಾ ಎಲ್ಲವನ್ನೂ ಸ್ವಿಚ್ ಆಫ್ ಮಾಡಿಬಿಟ್ಟರು. ಬೆಳಿಗ್ಗೆ ಬ್ರೇಕ್‌ಫಾಸ್ಟ್‌ನಲ್ಲ ತುಂಬಾ ಚೆನ್ನಾಗಿದ್ದ ಐಟಂ ಎಂದರೆ ಗಟ್ಟಿಯಾದ ಜೇನುತುಪ್ಪವಲ್ಲವೇ ಎಂದು ಲಹರಿಯಲ್ಲಿ ಕೇಳುತ್ತಾ ಭಾಷಣ ಪ್ರಾರಂಭಿಸಿದರು.

ಎಷ್ಟು ಬೇಗ ಸಿಟ್ಟು ಬಂದುಬಿಟ್ಟಿತು ಯಾಕೂಬರಿಗೆ. ಧ್ವನಿ ಕರ್ಕಶವಾಗಿಬಿಟ್ಟಿತು, ಒಂದೇ ಕ್ಷಣದಲ್ಲಿ. ಎರಡೂ ಕೈಗಳಲ್ಲೂ ನಮಸ್ತೆ ಮಾಡುತ್ತಾ, ನಿಮಗೆ ದೊಡ್ಡ ನಮಸ್ಕಾರ ಎಂದು ಸೂಚಿಸಲು ಜೋಡಿಸಿದ ಕೈಗಳನ್ನು ಸಭಾಂಗಣದ ಎಲ್ಲ ಕಡೆ ನೀಡುತ್ತಾ ನೂರು ನಮಸ್ಕಾರ, ಸಾವಿರ ನಮಸ್ಕಾರ ಹೇಳತೀನ ನಿಮಗೆ, ನಮ್ಮ ಹೆಂಗಸರನ್ನು, ಕೂಲಿನಾಲಿಯವರನ್ನು, ಬಡವರನ್ನು, ಸಣ್ಣಪುಟ್ಟ ವ್ಯಾಪಾರಿಗಳನ್ನು ದಯವಿಟ್ಟು ದಯವಿಟ್ಟು ಒಳ್ಳೆಯವರು, ನಿಯತ್ತಿನವರು, ನಿಸ್ಪೃಹರೆಂದೆಲ್ಲ ಪ್ರೊಜೆಕ್ಟ್ ಮಾಡಬೇಡಿ. ಪಡೆದ ಸಾಲ ಹಿಂತಿರುಗಿಸುವುದೇನು ದೊಡ್ಡ ಮಾತಲ್ಲ. ಹಾಗೂ ಇಲ್ಲ ನಮ್ಮ ಬಂಗ್ಲಾದಲ್ಲಿ. ಸಾಲ ಪಡೆಯುವುದಕ್ಕೆ ಸುಳ್ಳು ದಾಖಲೆ ಸೃಷ್ಟಿಸುತ್ತಾರೆ. ಒಬ್ಬರೇ ಎರಡು ಬ್ಯಾಂಕ್‌ಗಳಲ್ಲಿ, ಮೂರು ಬ್ಯಾಂಕುಗಳಲ್ಲಿ ಒಂದೇ ಬಾಬ್ತಿಗೆ ಸಾಲ ತೆಗೆದುಕೊಂಡಿದಾರೆ, ವ್ಯಾಪಾರದಲ್ಲಿ ಲಾಭವಿದ್ದರೂ ಸಾಲ ತೀರಿಸಬೇಕಾಗುತ್ತದೆಂದು ನಷ್ಟದ ಲೆಕ್ಕ ಬರೆಸುತ್ತಾರೆ, ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸಾಲವೆಂದರೆ ಇಬ್ಬರು ಮೂವರು ತಾಯಿ-ತಂದೆಗಳ ಹೆಸರು ಬದಲಾಯಿಸಿ, ಮನೆ ವಿಳಾಸ ಬದಲಾಯಿಸಿ ಸಾಲ ಹೊಡೆದುಬಿಡತಾರೆ. ಕೆಲವು ಗಯ್ಯಾಳಿ ಹೆಂಗಸರು ಚಾಲೂಕಾಗಿ ವ್ಯಾಪಾರದಲ್ಲಿ ಬೆಳೆದು ಗಂಡಂದಿರ ಆತ್ಮವಿಶ್ವಾಸವನ್ನೇ ನಾಶ ಮಾಡತಾರೆ. ವ್ಯಾಪಾರಕ್ಕೆಂದು ಕೊಟ್ಟ ದುಡ್ಡನ್ನು ಮಕ್ಕಳ ಇಂಗ್ಲಿಷ್ ಕಾನ್ವಂಟ್‌ಗೆ ತುಂಬತಾರೆ. ನಿಜ, ಇದೆಲ್ಲದರ ಜೊತೆಗೆ ಸಾಲವನ್ನು ತೀರಿಸಿದವರಿದ್ದಾರೆ. ಹಾಗೆಂದ ಮಾತ್ರಕ್ಕೇ ನಾವು ಪ್ರಾಮಾಣಿಕರು, ನಿಸ್ಪೃಹರು, ದಗಲ್‌ಬಾಜಿಗಳಲ್ಲ, ಅದಕ್ಕೇ ಇನ್ನೊಂದಿಷ್ಟು ಸಾಲ ಕೊಡಿಯೆಂದು ಹಾಹಾಕಾರ ಹುಟ್ಟಿಸುವುದು ತಪ್ಪು. ನಾವು ಹೇಗಿದೀವೋ ಹಾಗೆ ಕಾಣಿಸಕೊಬೇಕು. ಹಾಗೆ ಇನ್ನೊಬ್ಬರಿಗೆ ಒಪ್ಪಿಗೆಯಾಗಿ ಗೌರವ ಪಡೆಯಬೇಕು, ಸಮಾನರು ಎಂದೆನಿಸಿಕೊಳ್ಳಬೇಕು. ಸಾಲ ತಗೊಂಡಾಕ್ಷಣಕ್ಕೆ ಹೀಗೇ ಇರಬೇಕು, ಹೀಗೇ ಉಸಿರಾಡಬೇಕು, ಇಷ್ಟೇ ನೀರು ಕುಡಿಬೇಕು ಎಂದು ನಿರೀಕ್ಷಿಸುವುದು ಕೂಡ ದುಷ್ಟತನ. ಮೊದಲ ಸಾಲಿನಲ್ಲಿ ಶಿಸ್ತಾಗಿ ಕುಳಿತಿದ್ದ ಸಂಘಟಕರ ಕಡೆ ದೃಷ್ಟಿ ಕೇಂದ್ರೀಕರಿಸಿದರು.

ಇಲ್ಲಿ ಬಂದಿರುವ ಪ್ರತಿನಿಧಿಗಳು, ಧುರೀಣರೆಲ್ಲ ನಿಮಗೇನಾದರೂ ಅವರವರ ದೇಶದ ಬಗ್ಗೆ, ಜನಗಳ ಬಗ್ಗೆ ಆ ರೀತಿಯ ಭಾವನೆ ಕೊಟ್ಟಿದ್ದರೆ, ದಯವಿಟ್ಟು, ದಯವಿಟ್ಟು ಕ್ಷಮಿಸಿ. Ii is not true. It is not required also. Kindly kindly pardon us. ಮಾತು, ಹಾವಭಾವ-ಎಲ್ಲವೂ ನಿಧಾನಗತಿಗೆ ಬಂದು ಪ್ರಶಾಂತವಾಗುತ್ತಾ ಹೋಯಿತು.

ಸಮಾಧಾನದ ಧ್ವನಿಯಲ್ಲಿ, ಮೆಲುಮಾತಿನಲ್ಲಿ ಮುಂದುವರೆಸಿದರು. ಮತ್ತೊಂದೇ ಮಾತು. ಎಲ್ಲಕ್ಕಿಂತ ಮುಖ್ಯವಾದ ಮಾತು. ಯಾರನ್ನಾದರೂ ಸರಿಯೇ, ಏನನ್ನಾದರೂ ಸರಿಯೇ ಬೇಕು ಎಂದು ಕೇಳುವಾಗ ಪರ್ಸೆಂಟೇಜ್ ಲೆಕ್ಕದಲ್ಲಿ, ಕೋಟಾದ ಲೆಕ್ಕದಲ್ಲಿ ಮಾತ್ರ ಕೇಳಬೇಡಿ. ಸಾಲದ ಮೊಬಲಗಿನ ಶೇಕಡ ಹತ್ತರಷ್ಟು ಮುಸಲ್ಮಾನರಿಗೆ, ರಾಷ್ಟ್ರೀಯ ಆದಾಯದ ಶೇಕಡ ಒಂದರಷ್ಟು ಇಸ್ಲಾಂ ಬಂಧುಗಳಿಗೆ-ಇಂತಹ ಲೆಕ್ಕಾಚಾರವೇ ಆಭಾಸ. ನಮಗೆ ಬೇಕಾಗಿರುವುದು ಇಷ್ಟು, ಬೇಕೇಬೇಕು, ಖಂಡಿತಾ ಬೇಕು ಎಂದು ಕರಾರುವಾಕ್ಕಾಗಿ ಕೇಳಿ. ಹೀಗೆ ಧಾರ್ಷ್ಟ್ಯದಿಂದ ಕೇಳೋಕೆ ನಮಗೆ ಹಕ್ಕೇಕಿದೆ ಎನ್ನುವುದಕ್ಕೆ ಸಾವಿರಾರು ಕಾರಣಗಳಿವೆ. ಯಾವ ಕಾರಣವನ್ನೂ ಇಲ್ಲಿ ಮತ್ತೆ ಪ್ರಸ್ತಾಪಿಸಿ ಯಾರನ್ನೂ



ನೋಯಿಸುವುದು ಬೇಡ. ಮುಂದಾದರೂ ನಮ್ಮ ಬೇಡಿಕೆಗಳು ಹೇಗಿರಬೇಕೆಂದು ಇಲ್ಲಿಂದ ಹೋದಮೇಲೆ, ನಿಮ್ಮ ನಿಮ್ಮ ಸರ್ಕಾರಗಳಿಗೆ, ಬ್ಯಾಂಕುಗಳಿಗೆ ಮನದಟ್ಟು ಮಾಡಿಕೊಡಿ.

ಟೀ ವಿರಾಮದಲ್ಲಿ ಸೆಮಿನಾರ್‌ಗೆ ಬಂದಿದ್ದ ಪ್ರತಿನಿಧಿಗಳು ಸಂಘಟಕರೆಲ್ಲ ಯಾಕೂಬರನ್ನು ಮೆಚ್ಚುಗೆಯಲ್ಲಿ, ಕೃತಜ್ಞತೆಯಲ್ಲಿ ಮುತ್ತಿಕೊಂಡುಬಿಟ್ಟರು. ಯಾಕೂಬರ ವಿಚಾರಕ್ಕೆ ತಮ್ಮ ಸಮ್ಮತಿಯಿದೆಯೆಂದು, ತಾವೂ ಹಾಗೇ ಯೋಚಿಸುತ್ತಿದ್ದೇವೆಂದು ತೋಡಿಕೊಳ್ಳುವ ತವಕ. ಎಲ್ಲರನ್ನೂ ಮಾತಾಡಿಸುತ್ತಾ, ಎಲ್ಲರ ಮೆಚ್ಚುಗೆಯನ್ನು ಸ್ವೀಕರಿಸುತ್ತಾ ಯಾಕೂಬರಿಗೆ ಅರ್ಧ ಕಪ್ ಟೀ ಕುಡಿದು ಒಂದೇ ಒಂದು ಬಿಸ್ಕಟ್ ತಿನ್ನುವುದಕ್ಕೇ ಎಷ್ಟೋ ಹೊತ್ತು ಬೇಕಾಯಿತು. ಹೇಳಬೇಕಾದ್ದನ್ನೆಲ್ಲ ಹೇಳಿಬಿಟ್ಟಂತಿದ್ದ ಯಾಕೂಬರಲ್ಲಿ ಇನ್ನೂ ಏನೋ ಕಸಿವಿಸಿ, ಧಾವಂತ. ಎಲ್ಲರ ನಡುವೆಯೂ ಇರುತ್ತಲೇ ಇದ್ದಕ್ಕಿದ್ದಂತೆ ಒಂದು ಕ್ಷಣ ಮೌನವಾಗಿಬಿಡುತ್ತಿದ್ದರು.

***

'ನಮ್ಮ ಸೆಮಿನಾರ್, ಯಾಕೂಬರ ಕಳಕಳಿ, ಒಳನೋಟ ಎಲ್ಲವೂ ಹಿನ್ನೆಲೆಗೆ ಸರಿಯುವಂತೆ ಮುಸ್ಸಂಜೆ ಗೆ ಮುನ್ನವೇ ಏಳು ಘೂಟು ಎತ್ತರವಿರುವ ಆಸಾಮಿಯೊಬ್ಬರು ನಮ್ಮ ಕ್ಯಾಂಪಸ್ಸಿಗೆ ಬಂದರು. ಬಂದವರೇ ಯಾಕೂಬರ ಜೊತೆಯಲ್ಲಿ ಮಾತೇ ಮಾತು. ಮರಗಳ ಕೆಳಗೆ, ಹಾಸ್ಟಲಿನ ಕಾಂಪೊಂಡಿನ ಕಲ್ಲು ಬೆಂಚಿನಮೇಲೆ, ಡೈನಿಂಗ್ ಹಾಲ್‌ನಲ್ಲಿ. ಅಷ್ಟೊಂದು ಎತ್ತರದವರು ಕತ್ತನ್ನು ಬಗ್ಗಿಸಿಕೊಂಡು ಮುಖವನ್ನು ಯಾಕೂಬರ ಕಿವಿಯ ಹತ್ತಿರ ತಂದು ಮಾತಾಡುತ್ತಿದ್ದರು. ಮಾತಿನಲ್ಲಿದ್ದ ವಿಶ್ಲೇಷಣೆ, ಹರಿತ, ಹಾವಭಾವಗಳಲ್ಲಿ ಸೂಚಿತವಾಗುತ್ತಿತ್ತು. ಎರಡೂ ಉದ್ದನೆಯ ಕೈಗಳನ್ನು ಒಟ್ಟಿಗೇ ಎತ್ತಿ ಆಕಾಶದ ಕಡೆಗೆ ತೋರಿಸಿಬಿಡುತ್ತಿದ್ದರು. ಬಲಗೈ ಎದೆ ಹತ್ತಿರ ಪದೇ ಪದೇ ಹೋಗುತ್ತಿತ್ತು. ನಂತರ ತಿಳಿದು ಬಂದಿದ್ದೆಂದರೆ, ಹಾಗೆ ಬಂದವರು ಕಳೆದ ತಿಂಗಳು ತಾನೇ ಅಮೆರಿಕಾದ ವಾಯು ವಿಭಾಗದ ಮುಖ್ಯ ರಕ್ಷಣಾಧಿಕಾರಿಯಾಗಿ ನಿವೃತ್ತರಾಗಿದ್ದ ಮಾರ್ಷಲ್ ಕಾನೊಲಿ. ನಿವೃತ್ತಿಗೆ ಕೆಲವು ತಿಂಗಳುಗಳು ಮುಂಚೆ ಮತ್ತು ನವೃತ್ತಿಯ ನಂತರ ಪತ್ರಿಕೆಗಳಲ್ಲಿ, ಚಾನಲ್‌ಗಳಲ್ಲಿ ಬರೆದು ಬರೆದು, ಸಂದರ್ಶನ ನೀಡಿ ನೀಡಿ. ಯಾವುದೇ ವಿಮಾನ ನಲ್ದಾಣದಲ್ಲೂ ಈಗಿರುವಷ್ಟು ಸುರಕ್ಷಾ ಭದ್ರತಾ ಕ್ರಮಗಳು ಅಗತ್ಯವಿಲ್ಲವೆಂದು ಈ ಕ್ರಮಗಳು ಭದ್ರತೆಯ ಅಗತ್ಯಕ್ಕಿಂತ ಹೆಚ್ಚಾಗಿ ಮಾನಸಿಕ ಗೀಳಾಗಿಬಿಟ್ಟಿದೆಯೆಂದು, ಈಗಿರುವ ಕ್ರಮಗಳಲ್ಲಿ ಶೇಕಡಾ ಹತ್ತರಷ್ಟನ್ನು ಅನುಸರಿಸಿದರೂ ಭದ್ರತೆಗೆ ಯಾವ ತೊಂದರೆಯೂ ಇರುವುದಿಲ್ಲವೆಂದು ಪ್ರಚಾರ ಚಳುವಳಿಯನ್ನೇ ಒಡನಾಡಿಗಳೊಡನೆ ನಡೆಸುತ್ತಿದ್ದರು. ಹೆಂಗಸರ ಹೇರ್‌ಪಿನ್ ಕೂಡ ಸಂಶಯಾಸ್ಪದ ಲೋಹದ ಸಾಮಾನುಗಳ ಪಟ್ಟಿಯಲ್ಲಿರುವುದು, ದ್ರವರೂಪದ ಟೂತ್‌ಪೇಸ್ಟ್, ಬಾಯಿ ಶುದ್ಧಿ ಮಾಡುವ ಸಿರ್‌ಪ್ ಕೂಡ ಅಪಾಯಕಾರಿ ವಸ್ತುಗಳ ಪಟ್ಟಿಯಲ್ಲಿರುವುದು ಹಾಸ್ಯಾಸ್ಪದವೆಂದು ಹೇಳಿ ಭಾರತದ ಮಗುವೊಂದು ತಾಯಿತ, ಕೈಗಡಗ, ಬೆಳ್ಳಿ ಉಡದಾರ ಧರಿಸಿ ನೇವ್‌ರ್ಕ್‌ನಲ್ಲಿ ಬಂದಿಳಿದಾಗ ಮಗುವಿನ ಮೇಲಿರುವ ಲೋಹದ ಪ್ರಮಾಣ ಹೆಚ್ಚಾಗಿದೆಯೆಂದು ಸೆಕ್ಯೂರಿಟಿಯವರು ಮಗುವನ್ನು ಮೂರೂವರೆ ಘಂಟೆ ವಿಚಾರಣೆಗೆ ಒಳಪಡಿಸಿದ್ದನ್ನು ಕಾನೊಲಿ ವಿವರವಾಗಿ ವಾಲ್‌ಸ್ಟ್ರೀಟ್ ಪತ್ರಿಕೆಯಲ್ಲಿ ನೀಡಿದ ಸಂದರ್ಶನದಲ್ಲಿ ಉಲ್ಲೇಖಿಸಿದ್ದರೆಂದು ಹಾಸ್ಟಲಿನ ವಾರ್ಡನ್ ನಮ್ಮೆಲ್ಲರಿಗೆ ವಿವರಿಸಿದರು. ಮಾರ್ಷಲ್ ಕಾನೊಲಿಯವರು ಪ್ರತಿಯೊಬ್ಬ ಪ್ರಯಾಣಿಕನು ಒಂದು ಪ್ರಮಾಣಪತ್ರ ಸಲ್ಲಿಸಿದರೆ ಸಾಕೆಂದು, ಪ್ರಮಾಣಪತ್ರವನ್ನೇ ನಂಬಬೇಕೆಂದು, ಜನರನ್ನು ನಂಬುವುದೇ ಸುಲಭವೆಂದು, ಸಂಶಯಪಡುವುದೇ ಕಷ್ಟವೆಂದು ಪದೇ ಪದೇ ಹೇಳುತ್ತಿದ್ದರಂತೆ, ಬರೆಯುತ್ತಿದ್ದರಂತೆ. ಇನ್ನೊಬ್ಬರನ್ನು ನಂಬದಿರುವುದರಿಂದ ತೊಂದರೆಯಾಗುವುದು ನಮಗೇ, ನಮ್ಮ ಆತ್ಮವಿಶ್ವಾಸಕ್ಕೇ ಎಂಬುದು ಕಾನೊಲಿಯವರ ವಿಚಾರವಾಗಿದ್ದು, ಜನರ ನಡುವೆ ವಿಚಾರ ಹರಡಲು ಎಲ್ಲ ಸಭೆ, ಸಮಾರಂಭಗಳನ್ನು, ಸ್ನೇಹಿತರನ್ನು ಬಳಸಿಕೊಳ್ಳುತ್ತಿದ್ದರು. ಯಾಕೂಬರನ್ನು ನೋಡಲು ಬಂದಿರುವುದು ಕೂಡ ಹೀಗೆಯೇ ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು.

ಯಾಕೂಬರು ಸೇರಿದಂತೆ ಭಾರತದ, ಏಷ್ಯಾದ ಪ್ರತಿನಿಧಿಗಳೆಲ್ಲ ನೇವಾರ್ಕ್ ವಿಮಾನ ನಿಲ್ದಾಣದಿಂದ ಶುಕ್ರವಾರ ಸಂಜೆ ನಾಲ್ಕೂವರೆಗೆ ಹೊರಡುವ *ಏರ್-ಇಂಡಿಯಾ* ವಿಮಾನದಲ್ಲಿ ಹೊರಟಿದ್ದೆವು. ಯಾಕೂಬರು ಮುಂಬೈಯಿಂದ ಜಕಾರ್ತಾ, ಜಪಾನ್‌ಗೆ ವಿಚಾರ ಸಂಕಿರಣಗಳಿಗೆ ಹೋಗಬೇಕಾಗಿತ್ತು. ಬೋರ್ಡಿಂಗ್ ಪಾಸ್ ಪಡೆಯುವಾಗ ನನ್ನ ಪಕ್ಕದ ಪ್ರಯಾಣಿಕ ಯಾಕೂಬ್ ಎನ್ನುವ ಹೆಸರಿನವರೆಂದು ತಿಳಿದಾಗ ನನಗೆ ತುಂಬಾ ಸಂತೋಷವಾಯಿತು. ಇನ್ನೊಂದಿಷ್ಟು ವಿಚಾರ ವಿನಿಮಯ ಮಾಡಿಕೊಳ್ಳಬಹುದು, ಯಾಕೂಬರಂತಹ ಪ್ರಸಿದ್ಧರ ನೆನಪಿನಲ್ಲಿ ಸದಾ ಉಳಿಯುವಂತೆ ಪರಿಚಯ ಮಾಡಿಕೊಳ್ಳಬೇಕೆಂಬ ಆಸೆ ಜಾಗೃತವಾಯಿತು.

ಮೂರೂವರೆಯಾಯಿತು, ಮೂರುಮುಕ್ಕಾಲಾಯಿತು, ನಾಲ್ಕರ ಹತ್ತಿರಕ್ಕೇ ಬಂತು. ಯಾಕೂಬರು ಬರಲೇ ಇಲ್ಲ. ನಾನು ಭಾರತ ತಂಡದ ಸದಸ್ಯರೆಲ್ಲ ಸೆಕ್ಯೂರಿಟಿ ಗೇಟ್ ಹತ್ತಿರವೇ ಇದ್ದು ತಪಾಸಣೆಗೆ ಒಬ್ಬರಾದ ಮೇಲೆ ಒಬ್ಬರು ಒಪ್ಪಿಸಿಕೊಳ್ಳುತ್ತಿದ್ದೆವು. ಗೇಟ್ ಸುತ್ತಲೇ ಕೆಲವರು ಠಳಾಯಿಸುತ್ತಿದ್ದರು. ಕೆಲವು ಮುಖಗಳು ಭಾರತೀಯ ಮುಖಗಳಾಗಿದ್ದು, ಇನ್ನು ಕೆಲವಠದಂತು ಕನ್ನಡದ ಮುಖಗಳಂತೆಯೇ ಕಂಡವು. ಸ್ಥಳೀಯರು ಕೂಡ ಇವರ ಗುಂಪಿನಲ್ಲಿದ್ದರು. ಕೆಲವರ ಮುಖದಲ್ಲಿ ಹಿಡಿದಿಟ್ಟುಕೊಂಡಿರುವ ನಗೆ, ಮತ್ತೆ ಕೆಲವರ ಮುಖದಲ್ಲಿ ಭಯ, ತಳಮಳ.

ದುಡುದುಡು ಯಾಕೂಬ್ ಧಡಧಡವೆಂದು ದಾಪುಗಾಲು ಹಾಕುತ್ತಾ ಕಾನೊಲಿಯವರೊಡನೆ ಬಂದೇಬಿಟ್ಟರು. ತಂಡದಲ್ಲಿ ಹತ್ತು-ಹನ್ನೆರಡು ಜನ. ಯಾಕೂಬ್-ಕಾನೊಲಿಯವರ ಜೊತೆ ಹೆಜ್ಜೆ ಹಾಕುತ್ತಲೇ ಸರಸರನೆ ಕೆಲ ಪತ್ರಗಳನ್ನು ಹಂಚಿದರು. ಕೆಲವರು ಆತುರಾತುರವಾಗಿ ಪೋಸ್ಟರ್ ಹಚ್ಚಿದರು. ಈ ತಂಡಕ್ಕಿಂತ ಮುಂಚೆ ಬಂದು ಸೆಕ್ಯೂರಿಟಿ ಗೇಟ್ ಹತ್ತಿರ ಠಳಾಯಿಸುತ್ತಿದ್ದವರೆಲ್ಲ ಯಾಕೂಬರನ್ನು, ಕಾನೊಲಿಯವರನ್ನು ಸುತ್ತುವರೆದರು. ಭಾರತೀಯ ಮುಖದ ಯುವಕನೊಬ್ಬ ಯಾಕೂಬರ ಮೊಬೈಲ್ ತೆಗೆದುಕೊಂಡು ಏನೇನನ್ನೋ ಪರೀಕ್ಷಿಸುವವನಂತೆ ಮೊಬೈಲ್ ಸ್ಕ್ರೀನ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿತ್ರಗಳನ್ನು ಪರಿಶೀಲಿಸುತ್ತಾ ತನಗೆ ತಾನೇ ಸರಿ ಎಂದುಕೊಳ್ಳುತ್ತಾ ಯಾಕೂಬರಿಗೆ ಮೊಬೈಲ್ ವಾಪಸ್ ಕೊಟ್ಟನು. ಆ ಹುಡುಗನ ಹತ್ತಿರ ಮಾರ್ಷಲ್ ಕಾಲೊನಯವರು ತುಂಬಾ ಮಾತನಾಡುತ್ತಿರುವಂತೆ ಕಂಡಿತು.

ಯಾಕೂಬ್ ತಮ್ಮ ಕೋಟಿನ ಜೇಬಿನಿಂದ ಪಾಸ್‌ಪೋರ್ಟ್‌ನ್ನು, ಬೋರ್ಡಿಂಗ್ ಪಾಸ್‌ನ್ನು ಕೊಟ್ಟು ಜೊತೆಗೆ ಒಂದು ಉದ್ದನೆಯ ಕಾಗದವನ್ನು ಕೂಡ ನೀಡಿದರು. ಸೆಕ್ಯೂರಿಟಿಯವನೊಬ್ಬ ಅದನ್ನೆಲ್ಲ ಎಡಗೈಲಿ ತೆಗೆದುಕೊಂಡು ಪಕ್ಕದ ಟೇಬಲ್ ಮೇಲೆ ಇಟ್ಟು ಮೆಟಲ್ ಡಿಟೆಕ್ಟರ್‌ನ್ನು ಯಾಕೂಬರ ದೇಹದ ಬಳಿ ತಂದಾಗ ಹಿಂದಕ್ಕೆ ಜಿಗಿದರು. ನನ್ನನ್ನು ಚೆಕ್ ಮಾಡಬೇಡಿ. ನನ್ನ ಹತ್ತಿರ ಅಪಾಯಕಾರಿಯಾದ್ದು ಏನೂ ಇಲ್ಲ. ಹಾಗಂತ ಪ್ರಮಾಣ ಮಾಡಿ ಪತ್ರ ಬರೆದುಕೊಟ್ಟಿದ್ದೇನೆ. ನನ್ನನ್ನು ನಂಬಿ, ನಿಮ್ಮನ್ನೂ ನಂಬಿ ಎಂದು ಕೊಸರಾಡಲು ಪ್ರಾರಂಭಿಸಿದರು. ಕೊಸರಾಟ ಹೆಚ್ಚಿದಷ್ಟೂ ಯಾಕೂಬರ ಸುತ್ತಮುತ್ತ ನಾಲ್ಕಾರು ಸೆಕ್ಯೂರಿಟಿಯವರು ಸೇರಿಕೊಂಡು ಕಿರುಚಾಡುವುದು, ಗಟ್ಟಿಯಾಗಿ ಹಿಡಿದುಕೊಳ್ಳುವುದು ಹೆಚ್ಚಾಯಿತು. ಕಾನೊಲಿ ಮತ್ತು ಇತರರು ಘೋಷಣೆಗಳನ್ನು ಕೂಗುತ್ತಿದ್ದರು. ನಂಬಿಕೆ ಮುಖ್ಯ, ಭದ್ರತೆಯಲ್ಲ. ಭದ್ರತೆಯಿರುವುದು ಮೆಟಲ್ ಡಿಟಕ್ಟರ್‌ನಲ್ಲಲ್ಲ, ಮನುಷ್ಯನ ಮನಸ್ಸಿನಲ್ಲಿ.

ಸೆಕ್ಯೂರಿಟಿಯವರಿಂದ ನುಣುಚಿಕೊಂಡ ಯಾಕೂಬ್ ನೆಲದ ಮೇಲೆ ಮಲಗೇಬಿಟ್ಟರು. ಮಲಗಿದ ಯಾಕೂಬ್ ದೇಹದ ಮೇಲೆ ಮೆಟಲ್ ಡಿಟೆಕ್ಟರ್ ಹರಿಸಿ ಚೆಕ್ ಮಾಡಿದರು. ಕಾಲಿನಿಂದ ಬೂಟುಗಳನ್ನು, ಜೇಬಿನಿಂದ ಪರ್ಸ್‌ನ್ನು ತೆಗೆಯಲು ಬಹು ಪ್ರಯಾಸಪಡಬೇಕಾಯಿತು. ಮತ್ತೆ ಇದನ್ನೆಲ್ಲ ಜೇಬಿನೊಳಗೆ ಇಟ್ಟು ಯಾಕೂಬರನ್ನು ಎಳಿಸಲು ಹೊರಟರೆ, ಏಳದೆ ಮುಷ್ಕರ ಮಾಡುತ್ತಿದ್ದರು. ಕೊನೆಗೂ ಯಾಕೂಬರನ್ನು ಎಬ್ಬಿಸಿ, ನಿಲ್ಲಿಸಿ ಅವರ ಪದಾರ್ಥಗಳನ್ನೆಲ್ಲ ಅವರ ಕೈಗೇ ಕೊಟ್ಟು ಸೆಕ್ಯೂರಿಟಿ ಗೇಟ್‌ನ ಆಕಡೆ ತಲುಪಿಸಲು ಸೆಕ್ಯೂರಿಟಿಯವರಿಗೆ ಇನ್ನಿಲ್ಲದಷ್ಟು ಪ್ರಯಾಸವಾಯಿತು. ತಮ್ಮತಮ್ಮಲ್ಲೇ ವ್ಯಗ್ರರಾಗಿ ಮಾತಾಡಿಕೊಳ್ಳುತ್ತಾ ಯಾಕೂಬರ ಕಡೆ ವಿಚಿತ್ರವಾಗಿ ಕೈತೋರಿಸುತ್ತಿದ್ದರು. ಗೇಟ್‌ನ ಈಕಡೆ ಕಾನೊಲಿ ಮತ್ತು ಸಂಗಡಿಗರು ಬಲಗೈ ಹೆಬ್ಬೆರಳನ್ನು ಮತ್ತೆ ಮತ್ತೆ ಮೇಲಕ್ಕೆತ್ತಿ ವಿಜಯದ ಸಂಕೇತವೆಂಬಂತೆ ಸೂಚಿಸುತ್ತಿದ್ದರು.

ವಿಮಾನದೊಳಗೆ ನನ್ನ ಪಕ್ಕ ಕೂತ ಯಾಕೂಬರು ತುಂಬಾ ಬೆವರಿದ್ದರು. ಪುಟ್ಟ ಪುಟ್ಟ ನೀರಿನ ಮೂರುನಾಲ್ಕು ಬಾಟಲನ್ನು ಒಟ್ಟಿಗೇ ಇಸಿದುಕೊಂಡು ಗಟಗಟ ಎಂದು ನೀರು ಕುಡಿದರು. ಕರವಸ್ತ್ರದಿಂದ ಮತ್ತೆ ಮತ್ತೆ ಬೆವರೊರಸಿಕೊಂಡರು. ಗಡಿಬಿಡಿಯಲ್ಲಿ ತುಂಬಾ ಆಯಾಸಗೊಂಡಿರಬೇಕೆಂದು ನಾನೇ ಮಾತನಾಡದೆ ಸುಮ್ಮನೆ ಕುಳಿತೆ.

ಸ್ವಲ್ಪ ಸಮಯದ ನಂತರ ಮೊಬೈಲ್ ತೆಗೆದು ಗುಂಡಿ ಒತ್ತುತ್ತಾ ಒಂದೊಂದೇ ಫೋಟೋಗಳನ್ನು ನೋಡುತ್ತಾ ನೋಡುತ್ತಾ ನನ್ನನ್ನು ಉದ್ದೇಶಿಸಿ, ಆದರೆ ನನ್ನ ಕಡೆ ನೋಡದೆ ಹೇಳಿದರು, ಹೇಳಿಕೊಳ್ಳುತ್ತಿದ್ದರು.

ಇವರೇನು ಸುಖವಾಗಿದ್ದಾರಾ, ಧೈರ್ಯದಿಂದ ಇದ್ದಾರಾ, ಖಂಡಿತ ಇಲ್ಲ. ಬಿನ್‌ಲೇಡನ್ ಸೋತಿದ್ದರೂ ಸತ್ತಿದ್ದರೂ ಇವರೆಲ್ಲರ ಎದೆಯೊಳಗೆ ಶಾಶ್ವತವಾಗಿ ಭಯವನ್ನು, ದ್ವೇಷವನ್ನು ಬಿತ್ತಿ ಹೋಗಿದ್ದಾನೆ. ನಮ್ಮ ಕಾರ್ತಿಕ್ ಹೊಸನಗರ್ ನೋಡಿ. ಸೆಕ್ಯೂರಿಟಿಯವರು ಅವರವರೇ ಇದ್ದಾಗ ಹೇಗಿರುತ್ತಾರೆ, ಹೇಗೆ ವರ್ತಿಸುತ್ತಾರೆಂದು ಯಾರಿಗೂ ಗೊತ್ತಾಗದ ಹಾಗೆ ಸ್ಕ್ಯಾನ್‌ರ್ ಕ್ಯಾಮರಾದಲ್ಲಿ ಫೋಟೋ ತೆಗೆದಿದ್ದಾನೆ. ಎಷ್ಟು ವಿಕಾರದ ಜನರು. ಮೊಬೈಲ್‌ನ್ನು ನನ್ನ ಕೈಗೇ ಕೊಟ್ಟರು.

ಎಷ್ಟೊಂದು ಫೋಟೋ, ಎಷ್ಟೊಂದು ವಿಕೃತಿ. ಬ್ಲೇಡಿನಲ್ಲಿ ಒಬ್ಬ ತನ್ನ ಬಲಗೈ ಹತ್ತಿರ ಗಾಯ ಮಾಡಿಕೊಳ್ಳುತ್ತಿದ್ದಾನೆ. ಗಾಯದಿಂದ ರಕ್ತ ಹೀರಲು ಇನ್ನೊಬ್ಬ. ಬೇಡ ಬೇಡವೆಂದು ಗೋಗರೆದುಕೊಳ್ಳುತ್ತಿದ್ದರೂ ಒಬ್ಬನನ್ನು ಮಲಗಿಸಿ ನಗ್ನಗೊಳಿಸುತ್ತಿದ್ದಾರೆ. ಎಲ್ಲರೂ ಪ್ಯಾಂಟು ಬಿಚ್ಚಿ ಪೃಷ್ಠ ತೋರಿಸುತ್ತಾ ಸಾಲಾಗಿ ನಿಂತಿದ್ದಾರೆ. ಟೆಡ್ಡಿ ಬೇರ್‌ನ ಹರಿದು ಚೂರು ಚೂರು ಮಾಡಿ ಚೂರು ಮಾಡಿದ ಭಾಗಗಳನ್ನು ಎಸೆದುಕೊಂಡು ಆಟವಾಡುತ್ತಿದ್ದಾರೆ. ಗಹಗಹಿಸಿ ನಕ್ಕು ಜಿಗಿದಾಡುತ್ತಿದ್ದಾರೆ. ಒಬ್ಬೊಬ್ಬರಾಗಿ ಬಂದು ಗೋಡೆಗೆ ತಲೆ ಗುದ್ದುತ್ತಾ ಗುದ್ದಿದಾಗ ನೋವಾದರೂ ನಗುತ್ತಿದ್ದಾರೆ. ಎಲ್ಲವೂ ಸೆಕ್ಯೂರಿಟಿ ಗೇಟಿನ ಪಕ್ಕದ ರೂಮಿನಲ್ಲಿ.

ವಿಮಾನ ಹೊರಡುವ ಮುನ್ಸೂಚನೆ. ನನ್ನಿಂದ ಮೊಬೈಲ್ ವಾಪಸ್ ಪಡೆದು ತಲೆ ಚಚ್ಚಿಕೊಳ್ಳುತ್ತಾ ಸ್ವಿಚ್ ಆಫ್ ಮಾಡಿದರು. ಗುಂಡಿಯನ್ನು ಒತ್ತಿ ಸೀಟನ್ನು ಹಿಂದಕ್ಕೆ ತಳ್ಳಿಕೊಂಡು ನಿದ್ದೆಗೆ ಜಾರಿದರು. ನಾನು ಕೂಡ ಮೊಬೈಲ್‌ನಲ್ಲಿ ಕಂಡ ಫೋಟೋ ದೃಶ್ಯಗಳನ್ನು ನೆನಸಿಕೊಳ್ಳುತ್ತಾ ಯಾಕೂಬರ ಮುಖ ನೋಡುತ್ತಾ ನಿದ್ದೆಗೆ ಜಾರಿದೆ.

ನಿದ್ದೆ ತಿಳಿದು ಮತ್ತೆ ಎಚ್ಚರವಾದಾಗ ನಾಲ್ಕೈದು ಗಂಟೆಗಳಾದರೂ ಆಗಿಹೋಗಿರಬೇಕು. ವಿಮಾನದೊಳಗೆ ಝುಗಝುಗಿಸುವ ಬೆಳಕು. ಹೀಗೆ ಬೆಳಕಿದ್ದರೂ ಕೆಲವರದು ಗಾಢ ನಿದ್ರೆ, ಇನ್ನು ಕೆಲವರದು ಸೀಟಿನಲ್ಲೇ ಹೊರಳಾಟ.

ಯಾಕೂಬ್ ಎದ್ದಿದ್ದಾರೆ. ಲ್ಯಾಪ್‌ಟ್ಯಾಪ್ ತೆಗೆದು ಕಂಪ್ಯೂಟರ್ ಪರದೆಯಲ್ಲಿ ಎರಡು ಚಿತ್ರಗಳನ್ನೇ ಮತ್ತೆ ಮತ್ತೆ ನೋಡುತ್ತಿದ್ದಾರೆ. ಮೊದಲ ಚಿತ್ರದಲ್ಲಿ ಆನೆಕಾಲು ರೋಗದಿಂದ ರಣವಾದ, ಕೊಳಕಾದ ದಪ್ಪನೆಯ ವಿಕಾರವಾದ ಕಾಲುಗಳು. ನಂತರದ ಚಿತ್ರ ಒಬ್ಬ ಸ್ಪುರದ್ರೂಪಿ ಯುವಕನದು. ನರ್ಸಿಂಗ್ ಹೋಂ, ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ನವರದು ಕೂಡ ವಿರೋಧವಿದೆ. ವಿರುದ್ಧವಾಗಿ ದೊಡ್ಡ ಪ್ರಚಾರನೇ ನಡೀತಾಯಿದೆ. ಹುಡುಗನ Concept ಹೋರಾಟ ನೋಡಿ. ಪ್ರತ್ಯೇಕವಾಗಿ ದೂರ ದೂರ ಉಳಿದು ನಾನೇ ಕೊನೇ ನಾನೇ ಎಲ್ಲ ಎನ್ನುವಂತೆ ಉಳಿದಿರುವ ಎಲ್ಲ ಪದ್ಧತಿಗಳ ಜ್ಞಾನಮಾರ್ಗಗಳನ್ನು ಬೆರಸಿ ಹೊಸದು ಎನ್ನುವ ಕ್ರಮವನ್ನೇ ಪತ್ತೆ ಮಾಡಬೇಕು, ಸ್ಥಾಪಿಸಬೇಕೆಂಬ ಆಸೆ. ಹುಡುಗನ ಕನಸು ಕಳಕಳಿ ಯಾರಿಗೂ ಬೇಡ.

ಯಾಕೂಬ್ ಮತ್ತೆ ಮತ್ತೆ ಎನ್ನುವಂತೆ ಡಾಕ್ಟರ್ ಹುಡುಗನ ಚಿತ್ರವನ್ನೇ ನಾನಾ ಕೋನಗಳಲ್ಲಿ, ಜೂಮ್ ಮಾಡುತ್ತಾ ನೋಡುತ್ತಲೇ ಇದ್ದರು. ಇಳಿದು ಬಾ, ಈಗಲೇ ಇಳಿದು ಬಾ ಎನ್ನುವಂತೆ. ಡಾಕ್ಟರ್ ಹುಡುಗನ ಮುಖದಲ್ಲೂ ನಗೆ, ವಿಶ್ವಾಸ ಹೆಚ್ಚಾಗುತ್ತಲೇ ಇತ್ತು. ಹುಡುಗನ ಬಗ್ಗೆ, ಆತನ ಯೋಜನೆಗಳ ಬಗ್ಗೆ ಏನೂ ತಿಳಿಯದ ನನಗೆ ಯಾಕೂಬ್ ಎಲ್ಲವನ್ನೂ ಮೊದಲಿಂದ ವಿವರಿಸುತ್ತಿದ್ದರು. ನಂತರ ಊಟ, ನಿದ್ರೆ.

ಮತ್ತೆ ಯಾವಾಗಲೋ ನನಗೆ ಎಚ್ಚರವಾದಾಗ ಯಾಕೂಬ್ ನಿದ್ದೆ ಮಾಡುತ್ತಿದ್ದರೂ ಕೈ ಬೆರಳುಗಳು ಮಾತ್ರ ಲ್ಯಾಪ್‌ಟ್ಯಾಪಿನ ಮೌಸಿನ ಮೇಲೇ ಇತ್ತು. ಕಂಪ್ಯೂಟರ್ ಪರದೆ ಮ್ಲೇಲೆ ಒಂದೆರಡು ವಾಕ್ಯಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದ್ದವು.

ALL IDENTITIES SHOULD LEAD TO A NEW INTEGRATION, A HIGHER INTEGRATION OF EVERY THING. SO FAR. AND SUCH INTEGRATION... CAN ONLY . . . .

ಕೆಲವು ಹಾಯಿಕುಗಳು...

ಮಿಂಚು ಹುಳು
ಅನಂತ ಕತ್ತಲೆಯಲ್ಲಿ
ಕ್ಷಣದ ಸತ್ಯ

*


ಕಾವೇರಿಯ ದಡ
ಅವಳು ಕಂಡ ಹನಿಗಳು
ಕಡಲು ಸೇರಿವೆ

*

ಸಾಲು ಬೆಟ್ಟಗಳ ಆವರಿಸಿದೆ
ಅವಳ ನೋಟ
ಈ ಕ್ಷಣ ಬೆಚ್ಚಗಿದೆ

*

ಸುಮ್ಮನೆ ಹರಿಯುತ್ತಿದೆ ತನ್ನ ಪಾಡಿಗೆ
ನೋಡುತ್ತ ನಿಂತಿದ್ದೇನೆ
ಒಂದು ಋಷಿಯ ಚಿಲುಮೆ





ಈ ದಿನದ ಹೊಸ ವಾರ್ತೆ
ಪುಟ್ಟ ಹಕ್ಕಿಯ
ಟಿಟ್ ಟಿಟ್ ಟೂ ...

*


ಅಣಭೆ
ಪುಟ್ಟ ಮಳೆ ಹನಿಯ
ಜಾರು ಬಂಡೆ

*

ಆಗಸದಲ್ಲಿ ಧಗ ಧಗಿಸುತ್ತಿವೆ
ಚುಕ್ಕಿಗಳು
ಈ ರಾತ್ರಿ ತಂಪು

*

ಚೊಕ್ಕಟ ಬೀದಿಯಲ್ಲಿ
ಉದುರಿವೆ
ಪೊರಕೆ ಕಡ್ಡಿ, ನೋವು



ಹಾಕುತ್ತದೆ ಏಕೆ
ಪುಟ್ಟ ಮಗು
ಬಲಗಾಲಿಗೆ ಎಡ ಚಪ್ಪಲಿ?

*

ಉದುರುತ್ತಿವೆ
ಗುಲಾಬಿ ದಳಗಳು
ಮುಳ್ಳಿಗೆ ನೋವು

*

ಚೊಕ್ಕಟ ಬೀದಿಯಲ್ಲಿ
ಉದುರಿವೆ
ಪೊರಕೆ ಕಡ್ಡಿ, ನೋವು

*

ಸ್ವರವೊಂದು ಹುಟ್ಟಿದೆ
ಕೊಳಲ ಕೊರಳಿಂದ
ಹುಟ್ಟು ಹಬ್ಬ ಆಚರಿಸಬೇಕು

– ಡಾ. ಸಿ.ರವೀಂದ್ರನಾಥ್

ಕಾವ್ಯ



ಮಾಯಾದ ಗಾಯ

ನಿಂತ ನಡೆದ ನೆಲವನ್ನ
ತೋರು ಬೆರಳ ಉಗುರಿನಿಂದ ಕೆರೆದೆ
ಗಾಯವಾಯಿತಲ್ಲ ಅನ್ನಿಸಿತು

ಪುಟ್ಟ ಗಿಡದ ಎಲೆ ಮುರಿದೆ
ತೊಟ್ಟಲ್ಲಿ ಇರುವೆ ಕಣ್ಣೀರು ಬಂತು



ತಥಾಗತರಿಗೆ ಇಡಲೆಂದು
ಹೂವ ಬಿಡಿಸಿದೆ ಬೆರಳ ತುದಿಗೆ
ತೇವ ತಾಗಿ ತಣ್ಣಗಾಯಿತು

ಇಷ್ಟು ಗಾಯ ಮಾಡಿದ ನನಗೆ
ನನ್ನಂತವರಿಗೆಲ್ಲಾ ಗಾಯ ಮಾಡಿದವರ
ಕ್ಷಮೆಕೋರಿ

ಅವರ ಪಾದಕ್ಕೆ ....

–ಸುಬ್ಬು ಹೊಲೆಯಾರ್



ಆಷಾಢದ ನೋವ ಆವರ್ತ

ಆಣೆಯ ಸಾಣೆ ಜಡ್ಡಿನ ಕಣಿ
ಉಸಿರ ಹಬೆ ಉರಿಯೂತ
ಒಂದೇ ಸಮನೆ ನೂಲುತಿರುವ
ನೋವ ಚಕಮಕಿಗೆ
ದೇಹ ಹಿಡಿದಿಗೆ ರಚ್ಚೆ


ನಿರ್ಭಾವುಕ ಹಾಸಿಗೆಯ ರಂಗ
ಬಿಳಿ ಗೋಡೆಗಳ ನಿಸ್ಸಂಗ
ಅಂಗಳದ ಮಲ್ಲಿಗೆ
ತಪತಪನೆ ಉದುರಿ
ಅನಾಮತ್ತು ಜಂಗಿರಿದ ಅಂಗಾಂಗ





ಅರಿವಿನ ತುಂಬ ನಿಸ್ತೇಜ
ಕತ್ತಲ ಜಂಗೀ ಕುಸ್ತಿ.
ಏರಲಾಗದೆ ಮಲ್ಲಕಂಬ
ನಾಲಿಗೆಯ ಕಚ್ಚೆ
ನೋವ ಅವುಡುಗಚ್ಚಿ
ಚಿತ್ತಾದ ಪೈಲ್ವಾನನೊಬ್ಬ.

ಆವಾಗ ಗ್ರಹಣ ಬಿಡುವ ವೇಳೆ
ಥಟ್ಟೆಂದು ಬಿದ್ದಿತು ಒನಕೆ
ನೀರಲಿ ಕಂಡಿತು ಬಿಂಬ
ಕಡಿಮೆಯಾಗಿತ್ತು ಭೂಮಿಯ
ಪರಿಭ್ರಮಣ ವೇಗ.

–ಪವಿತ್ರ ಪ್ರಿಯಭಾಷಿಣಿ







ಬಾಳೆ ಎಲೆಯಲಿ ಬಿರಿಯಾನಿ

ಇಲ್ಲ ಇಲ್ಲ
ಬಿರಿಯಾನಿ ಬೇಯುತ್ತಿಲ್ಲ
ಹುಟ್ಟು – ಸಾವಿನ ನಡುವೆ
ಸೀಟಿ ಬಾರಿಸುವ ಕುಕ್ಕರಿನಲಿ
ಇಡೀ ಬ್ರಹ್ಮಾಂಡವೇ ಬೇಯುತ್ತಿದೆ

ಮಂಡಿಯೂರಿ ಪ್ರಾರ್ಥನೆಗೆ ಕೂತವರ ಹಾಗೆ
ಅರ್ಧ ಡಜನ್ ಹೊಟ್ಟೆಗಳು
ಉರಿವ ಒಲೆಯ ಕಡೆಗೇ
ನೆಟ್ಟ ಕಾತರದ ಕಣ್ಣುಗಳು

ಇದು ಹಸಿದವರ ಆಧ್ಯಾತ್ಮ
ಹೋಗುವವರೆ ಹೋಗಿ ಬನ್ನಿ
ಯಾವಾಗ ಬೀಳುವದೊ
ಬಾಳೆ ಎಲೆಯಲಿ ಬಿರಿಯಾನಿ

ಯಾರಿಗೆ ಗೊತ್ತು
ನಟ್ಟ ನಡುರಾತ್ರಿ
ಆಜಾನ್ ಕೂಗಬಹುದು ಹುಂಜ
ಕುಕ್ಕರಿನಲಿ

ನಟ್ಟ ನಡುರಾತ್ರಿ
ಕೊಕ್ ಕೊಕ್ ಕೋೞ ಎಂದು
ಆಜಾನ್ ಕೂಗಬಹುದು ಹುಂಜ
ಅಮರತೆಯಲಿ.

–ಅರಿಫ್ ರಾಜಾ



ಶಂಖ

ನನಗಿರುವುದು ಒಂದೇ ಅಸ್ತಿತ್ವ
ಹೊರಗಿನದ್ದು ಸುತ್ತಿ ಒಳಕ್ಕೆ
ಒಳಗಿನದ್ದು ಬಿಚ್ಚುತ್ತ ಹೊರಕ್ಕೆ

ಮೇಲೆ ಕಾಣುವುದಕ್ಕೆ ಒಳಗಿನ ಪ್ರಭೆ
ಕಾಣದುದಕ್ಕೆ ಹೊರಗು ದಾರಿಸೂಚಕ,
ದಿಕ್ಕು ಕಾಣದೆ ಕಂಗೆಟ್ಟು ಅಲೆವ
ನೂರು ಭಾವಕ್ಕೆ ಕಣ್ಣೆರಡು ಕನ್ನಡಿ

ಮಡಿಚಿ ಸುತ್ತಿದ ಒಳಗಿನ ಪದರಕ್ಕೆ
ಅದುರುವ ಶಕ್ತಿ ಹೆಚ್ಚು,
ಕಾಣುವಂತೆ ಬಿಚ್ಚಿಕೊಂಡ ಕಣ್ಣಗುಡ್ಡೆಯೊಳಗೆ
ಸಾವು ಬೆಳಕು

ಹೊಟ್ಟೆಯಾಳದಿಂದ ಉಸಿರು ತೆಗೆದು
ಊದಬೇಕು, ಉಸಿರು ಬಿಗಿಹಿಡಿದು
ತಾಳಿಕೊಳ್ಳಬೇಕು, ಬಯಲಕತ್ತಲು
ಶಂಖನಾದ.

–ಜ.ನಾ.ತೇಜಶ್ರೀ

ನೆಹರೂ ಅವರ ಆಧುನಿಕ ಭಾರತದ ಭವ್ಯ ದೇಗುಲಗಳ ತಳಗೆ...

ಮೂಲ : ಚಿತ್ರಾ ಪದ್ಮನಾಭನ್
ಕನ್ನಡಕ್ಕೆ ಎಮ್. ಆರ್. ರಾಮಶೇಷ



ನನ್ನ ಬಾಲ್ಯದ ಗೆಳತಿಯೊಬ್ಬಳ ತಾಯಿ ಸುರ್‌ಜಿತ್ ಕೌರ್ ಎಂಬಾಕೆಗೆ ಬರವಣಿಗೆಯ ಗೀಳು ಹತ್ತಿದೆ. ಸರಿ ಸುಮಾರು ೮೦ ವರ್ಷ ಪ್ರಾಯದ ಆಕೆ ತನ್ನ ಜೀವಮಾನದ ಅನೇಕ ಅನುಭವಗಳನ್ನು ಕಾಗದದ ಮೇಲೆ ದಾಖಲಿಸುವ ಕಾಯಕದಲ್ಲಿ ತೊಡಗಿದ್ದಾರೆ. ೧೯೫೭ರಲ್ಲಿ ಯುವ ಶಿಕ್ಷಕಿಯಾಗಿ ಅವರು ಕೈಗೊಂಡ ಶೈಕ್ಷಣಿಕ ಪ್ರವಾಸ ಅವರ ಅತ್ಯಂತ ಆಪ್ತ ಅನುಭವಗಳಲ್ಲೊಂದು. ತನ್ನ ೨೫ನೇ ವಯಸ್ಸಿನಲ್ಲಿ ಅವರು ಪ್ರವಾಸ ಕೈಗೊಂಡಾಗ ಸ್ವತಂತ್ರ ಭಾರತಕ್ಕೆ ಕೇವಲ ೧೦ ವರ್ಷಗಳ ಬಾಲ್ಯ. ತನ್ನ ಅಂದಿನ ಅನುಭವಗಳ ಬಗ್ಗೆ ಆಕೆ ಉತ್ಸಾಹದಿಂದ ಹೇಳುತ್ತಿದ್ದಾಗ ನನಗೆ ಆಗಿನ ನೆಹರೂ ಕಾಲದ ಭಾರತದ ಜನಸ್ತೋಮ ತನ್ನ ಭವಿಷ್ಯದ ಬಗ್ಗೆ ಕಟ್ಟಿಕೊಂಡಿದ್ದ ಕನಸುಗಳ, ಆಶೋತ್ತರಗಳ ಸ್ಪಷ್ಟ ಚಿತ್ರ ಮೂಡಹತ್ತಿತು.

ಸುರ್‌ಜಿತ್ ಕೌರ್ ಅವರ ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಪ್ರವಾಸದಲ್ಲಿ ನಾವು ಸಾಮಾನ್ಯವಾಗಿ ಸೇರಿಸಿಕೊಳ್ಳುವ ಧಾರ್ಮಿಕ, ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ವಾಣಿಜ್ಯಕ ತಾಣಗಳಾದ ಕಾನ್ಪುರ, ವಾರಣಾಸಿ, ಪ್ರಯಾಗ, ಲಖ್ನೋ, ಗ್ವಾಲಿಯರ್, ಕೊಲ್ಕತ್ತಾ ಇತ್ಯಾದಿಗಳ ಜೊತೆಜೊತೆಗೆ ದಾಮೋದರ್ ಕಣಿವೆ ನಿಗಮದವರು ಅಂದಿನ ಬಿಹಾರ(ಇಂದಿನ ಝಾರ್ಖಂಡ್)ದಲ್ಲಿ ಕಟ್ಟತೊಡಗಿದ್ದ ಅಣೆಕಟ್ಟು, ಪಶ್ಚಿಮ ಬಂಗಾಳದ ಚಿತ್ತರಂಜನ್‌ನಲ್ಲಿ ಸ್ಥಾಪಿತವಾಗುತ್ತಿದ್ದ ರೈಲ್ವೇ ಇಂಜಿನ್ ಕಾರ್ಖಾನೆ, ಮಧ್ಯಪ್ರದೇಶದ ಕಾಟ್ನಿಯಲ್ಲಿನ ಸಿಮೆಂಟ್ ಕಾರ್ಖಾನೆಗಳೂ ಸೇರಿದ್ದವು. 'ಅಧುನಕ ಭಾರತದ ದೇವಾಲಯಗಳೆಂದು' ನೆಹರು ಹೆಸರಿಸಿದ ಈ ತಾಣಗಳು ಹೊಸ ಭಾರತ ಕಟ್ಟ ಹೊರಟ ನವ ಜನಾಂಗದ ಆಶೋತ್ತರಗಳ ಪ್ರತಿಬಿಂಬವಾಗಿದ್ದವು.

ಅಂದಿನ ಯುವತಿ ಸುರ್ಜಿತ್ ಕೌರ್ ಹಾಗೂ ಅವರಂತಹ ಲಕ್ಷಾಂತರ ಯುವಕ-ಯುವತಿಯರನ್ನೊಳಗೊಂಡ, ಸ್ವತಂತ್ರ ಭಾರತದ ಯುವಜನಾಂಗದ ಕಣ್ಣುಗಳಲ್ಲಿ ಕಂಡುಬರುತ್ತಿದ್ದ ಹೊಳಪು, ಭವಿಷ್ಯದ ಬಗ್ಗೆ ಅವರು ಹೊಂದಿದ್ದ ವಿಶ್ವಾಸ ಹಾಗೂ ನಂಬಿಕೆ ಇವುಗಳನ್ನು ಪುಷ್ಟೀಕರಿಸುವಲ್ಲಿ ಆಂದಿನ *ಬಾಲಿವುಡ್* ಸಿನಿಮಾಗಳೂ ಹಿಂದೆ ಬಿದ್ದಿರಲಿಲ್ಲ. ಅಂದಿನ ಸಿನಿಮಾ ಹಾಡೊಂದು ಇದಕ್ಕೆ ಉತ್ತಮ ಉದಾಹರಣೆ – *'ಛೋಡೋ ಕಲ್ ಕೀ ಬಾತೇ, ಕಲ್ ಕೀ ಬಾತ್ ಪುರಾನಿ, ನಯೆದೌರ್ ಸೆ ಲಿಖೇಂಗೆ, ಮಿಲ್ ಕರ್ ನಯೀ ಕಹಾನೀ ಹಮ್ ಹಿಂದೂಸ್ತಾನಿ, ಹಮ್ ಹಿಂದೂಸ್ತಾನಿ"* ('ಬಿಡಿ ನಿನ್ನೆಯ ಮಾತುಗಳನ್ನು, ಆ ಹಳೆಯ ಮಾತುಗಳನ್ನು, ಬರೆಯೋಣ, ಹೊಸ ಕಥೆಯ ನಾವು... ಹಿಂದೂಸ್ತಾನಿಗಳು...ನಾವು ಹಿಂದೂಸ್ತಾನಿಗಳು...) ಹೊಸದಾಗಿ ಕಟ್ಟುತ್ತಿದ್ದ ಅಣೆಕಟ್ಟೊಂದರ ಬಳಿ ಸುನಿಲ್ ದತ್ ನಾಯಕನಾಗಿ ಚಿತ್ರಿತವಾದ 'ಹಮ್ ಹಿಂದೂಸ್ತಾನಿ' ಚಿತ್ರದ ಈ ಜನಪ್ರಿಯ ಹಾಡು ಅಂದಿನ ಜನಾಂಗದ ಕನಸುಗಳಿಗೆ ಹಿಡಿದ ಕನ್ನಡಿಯಂತಿತ್ತು. ಅಧುನಿಕ ವಿಜ್ಞಾನ-ತಂತ್ರಜ್ಞಾನದ ಬಗೆಗೆ ಅಚಲ ಶ್ರದ್ಧೆ, ಅದರ ಶಕ್ತಿಯನ್ನು ವೈಜ್ಞಾನಿಕ ಮನೋಭಾವದೊಡನೆ ಬಳಸಿ ಸಾಧಿಸಬಹುದಾದ ಪ್ರಗತಿ ಹಾಗೂ ತತ್ಫಲವಾಗಿ ಮೂಡಲಿರುವ ಸಮೃದ್ಧಿ –ಇವುಗಳೇ ಆ ನೆಹರೂ ಪ್ರಣೀತ ನವ ಭಾರತದ ಕನಸೆಂಬ ಹೆಮ್ಮರದ ಮೂಲಬೀಜಗಳು.

ರಾಷ್ಟ್ರ ವಿಭಜನೆಯೆಂಬ ಘೋರ ಯಾತನೆಯಿಂದ ಆಗಷ್ಟೇ ಚೇತರಿಸಿಕೊಳ್ಳುತ್ತಿದ್ದ ಸುರ್‌ಜಿತ್ ಕೌರ್ ಪೀಳಿಗೆಗೆ 'ಪ್ರಗತಿಶೀಲ ಆಧುನಿಕ ಭಾರತ'ದ ಈ ಹೊಸ ಕನಸು ಅಪ್ಯಾಯಮಾನವಾಗಿ ಕಂಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ನಿವೃತ್ತಿ ಹೊಂದಿ, ಈಗ ವಿಶ್ರಾಂತ ಜೀವನ ನಡೆಸುತ್ತಿರುವ ಸುರ್‌ಜಿತ್ ಕೌರ್, ಇತ್ತೀಚೆಗೆ ತನ್ನ ಕಾಲದ 'ಆಧುನಿಕ ದೇವಾಲಯ'ಗಳ ಬಗ್ಗೆ ನನ್ನನ್ನು ವಿಚಾರಿಸಿ, ಆ ಬಗ್ಗೆ ಆಕೆ ತೋರಿದ ಕಳಕಳಿ, ನನ್ನಲ್ಲಿ ವಿಚಿತ್ರ ಕುತೂಹಲವೊಂದನ್ನು ಹುಟ್ಟಿಸಿತು. ನಮ್ಮ ಹಿರಿಯರ ಶ್ರದ್ಧಾ ಕೇಂದ್ರಗಳಾಗಿದ್ದ, ಅಂದಿನ ತಲೆಮಾರಿನ ಕನಸಿನ ಪ್ರತೀಕಗಳಾಗಿದ್ದ ಈ 'ಪವಿತ್ರ ತಾಣಗಳ' ಇತ್ತೀಚಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಣೆಯ ಕಾರ್ಯಕ್ಕೆ ನನ್ನನ್ನು ಪ್ರೇರೇಪಿಸಿತು. ಅಷ್ಟೇ ಅಲ್ಲ, ಬುಧ್ನಿ ಮೆಝಾನ್ ಎಂಬ ಸಂತಾಲ ಆದಿವಾಸಿ ಹೆಂಗಸಿನ ಕ(ವ್ಯ)ಥೆಗೂ ನನ್ನನ್ನು ಮುಖಾಮುಖಿಯಾಗಿಸಿತು. ಯಾವ ಬಂಡೆಗಳನ್ನೊಡೆದು ಹೆದ್ದಾರಿಯನ್ನು ನಿರ್ಮಿಸಲಾಯಿತೋ ಆ ಹೆದ್ದಾರಿಯ ಪಕ್ಕದಲ್ಲಿ ಬಿದ್ದಿರುವ ಆ ಬಂಡೆಗಳ ದಿಕ್ಕಿಲ್ಲದ ತುಂಡುಗಳಂತೆ ಇರುವ ಬುಧ್ನಿಯ ಬದುಕು ನಮ್ಮ ಭಾರತದ ೬೫ ವರ್ಷಗಳ 'ಯಶೋಗಾಥೆ'ಯ ಆಳದಲ್ಲಿ ಘನೀಭೂತವಾಗಿರುವ ನೋವಿನ ಕಥೆಯೆಂಬುದು, ನಮ್ಮ ಸ್ವತಂತ್ರ ಭಾರತ ಇಟ್ಟ ಭಾರಿ ಹೆಜ್ಜೆಗಳ, ಆ ಭಾರದ ಹಿಂಸೆ ಸೃಷ್ಟಿಸಿದ ನೋವುಗಳ ರೂಪಕವಾದೀತೆಂದು ನನಗಾಗಲೀ, ಸುರ್‌ಜಿತ್ ಕೌರ್‌ರ ತಲೆಮಾರಿಗಾಗಲೀ ಕಲ್ಪನೆಗೂ ದಕ್ಕದ ಸಂಗತಿ.

ಬುಧ್ನಿ ಮೆಝಾನ್ ಎಂಬ ಸಂತಾಲ ಆದಿವಾಸಿ ಹೆಣ್ಣುಮಗಳ ಹೆಸರು ಅಕಸ್ಮಾತ್ ನನ್ನ ಕಣ್ಣಿಗೆ ಬಿದ್ದದ್ದು, ಸುರ್‌ಜಿತ್ ಕೌರ್ ಅವರ ಪ್ರವಾಸದ ಒಂದು ಮುಖ್ಯ ಅಂಗವಾಗಿದ್ದ ಮೈಥಾನ್ ಆಣೆಕಟ್ಟಿನ ಬಗ್ಗೆ ಮಾಹಿತಿ ಸಂಗ್ರಹ ಮಾಡುತ್ತಿದ್ದಾಗ. ಝಾರ್ಖಂಡ್ ರಾಜ್ಯದ ಧನಬಾದ್ ಜಿಲ್ಲೆಯಂಚಿನಲ್ಲಿ ಪಶ್ಚಿಮ ಬಂಗಾಳ ರಾಜ್ಯಕ್ಕೆ ಹೊಂದಿಕೊಂಡಂತಿರುವ ಈ ಆಣೆಕಟ್ಟು ದಾಮೋದರ್ ನದಿ ಕಣಿವೆಯಲ್ಲಿ ಕಟ್ಟಿದ ಮೂರನೆಯ ಅಣೆಕಟ್ಟು, ಅಮೇರಿಕದ ಟೆನೆಸ್ಸಿ ಕಣಿವೆ ಪ್ರಾಧಿಕಾರದ ಮಾದರಿಯಲ್ಲಿ ೧೯೪೮ರಲ್ಲಿ ರೂಪುಗೊಂಡ ದಾಮೋದರ್ ಕಣಿವೆ ನಿಗಮ (Damodar Valley Corporation – DVC) ಕಟ್ಟಿದ ಈ ಮಹತ್ವಾಕಾಂಕ್ಷಿ ವಿವಿಧೋದ್ದೇಶ ಅಣೆಕಟ್ಟು, ಸರಿ ಸುಮಾರು, ಸುರ್‌ಜಿತ್ ಕೌರ್ ಅವರು ಅಲ್ಲಿ ಪ್ರವಾಸ ನಡೆಸಿದ ಕಾಲದಲ್ಲೇ ರಾಷ್ಟ್ರಕ್ಕೆ 'ಅರ್ಪಿತ'ವಾಗಿತ್ತು. ಈ ಆಣೆಕಟ್ಟಿನ ಬಗ್ಗೆ ವಿಷಯ ಸಂಗ್ರಹಿಸುತ್ತಿದ್ದಾಗ ನನ್ನ ಗಮನ ಅಲ್ಲೇ ಪಕ್ಕದಲ್ಲೇ, ಪಶ್ಚಿಮ ಬಂಗಾಳ ರಾಜ್ಯದ ಪುರೂಲಿಯಾ ಜಿಲ್ಲೆಗೆ ಹೊಂದಿಕೊಂಡಂತಿರುವ ಧನಬಾದ್ ಜಿಲ್ಲೆಯ ಪಾಂಚೆತ್ ಎಂಬಲ್ಲಿ ಕಟ್ಟಲಾದ ನಾಲ್ಕನೆಯ ಅಣೆಕಟ್ಟಿನ ಕಡೆಗೆ ಹರಿಯಿತು. 'ಬಂಗಾಳದ ವ್ಯಥೆ'ಯೆಂದೇ ಪ್ರಖ್ಯಾತವಾಗಿದ್ದ ದಾಮೋದರ್ ನದಿಗೆ ಅಡ್ಡವಾಗಿ ಕಟ್ಟಲಾಗಿರುವ ಈ ಅಣಕಟ್ಟು ಅಂದಿನ ಕಾಲಕ್ಕೆ ಅತಿ ದೊಡ್ಡ ಅಣೆಕಟ್ಟಾಗಿತ್ತು; ಅಷ್ಟೇ ಅಲ್ಲ, ಅಂದಿನ ಕಾಲದ ೧೯ ಕೋಟಿ ರೂ ವೆಚ್ಚದಲ್ಲಿ ಕಟ್ಟಲಾದ ಈ ಭಾರಿ ಆಣೆಕಟ್ಟಿನ ಉದ್ಘಾಟನಾ ಸಮಾರಂಭ ೧೯೫೯ರ ಡಿಸೆಂಬರ್ ೬ರಂದು ನಡೆದಾಗ, ಸ್ವತಃ ಪ್ರಧಾನ ಮಂತ್ರಿ ನೆಹರೂ ಅವರೇ ಸಮಾರಂಭದ ಅಗ್ರಸ್ಥಾನವನ್ನಲಂಕರಿಸಿದ್ದರು. ಜೊತೆಗೆ ಅವರು ತಮ್ಮದೇ ಆದ ಶೈಲಿಯಲ್ಲಿ ಆ ಸಮಾರಂಭ ನಡೆಯಬೇಕೆಂದು ಒತ್ತಾಯಿಸಿ, ವಿದ್ಯುತ್ ಉತ್ಪಾದನಾ ಕೇಂದ್ರದ ಉದ್ಘಾಟನೆಯ ಗುಂಡಿಯೊತ್ತುವ

ಕಾರ್ಯವನ್ನು ಆ ಅಣೆಕಟ್ಟು ಕಟ್ಟಿದ ಕೂಲಿಗಳಲ್ಲೊಬ್ಬಳಾದ ೧೫ ವರ್ಷ ವಯಸ್ಸಿನ ಬುಧ್ನಿ ಮೆಝಾನ್ ಎಂಬ ಸ್ಥಳೀಯ ಆದಿವಾಸಿ ಸಂತಾಲ್ ಕನ್ಯೆಯ "ಹಸ್ತ"ದಿಂದ ನೆರವೇರಿಸಿದ್ದರು. ಬಹಳ ಹುಡುಕಿದ ನಂತರ ಆ ಸಮಾರಂಭದ ಚಿತ್ರ ಕೂಡ ನನಗೆ ನೆಹರೂ ಸ್ಮಾರಕ ಸಂಗ್ರಹಾಲಯದಲ್ಲಿ ಸಿಕ್ಕಿತು. ಆದಿವಾಸಿ ಕನ್ಯೆಯೊಬ್ಬಳ ಮುಗ್ಧತೆ ಮತ್ತು ನೆಹರೂ ಅವರ ಉತ್ಸಾಹವನ್ನು ತೋರಿಸುವ ಈ ಕಪ್ಪು ಬಿಳುಪು ಫೋಟೋ ಕಾಲನ ಮಹಿಮೆಯಿಂದಾಗಿ ಮಾಸಿದೆಯಾದರೂ, ಆ ಚಿತ್ರದಲ್ಲಿ ಕಂಡುಬರುವ ಅಂದಿನ ಹುರುಪು ಮಾಸಿಲ್ಲ.

ಮುಂದಾದ ವಿಶೇಷ ಬಹಳ ಜನರ ಅರಿವಿಗೆ ದಕ್ಕಿಲ್ಲ. ಸಮಾರಂಭದಲ್ಲಿ ನೆಹರೂ ಅವರಿಗೆ ಬುಧ್ನಿ, ಹಾರ ಹಾಕಿದ್ದರಿಂದ ಅವಳು ಸಂತಾಲರಲ್ಲದ ನೆಹರೂ ಅವರ ಪತ್ನಿಸಮಾನಳಾದಳೆಂದು ತಮ್ಮ ಸಂಪ್ರದಾಯದ ಪ್ರಕಾರ ನಿರ್ಧರಿಸಿದ ಕರ್ಬೋನಾ ಹಳ್ಳಿಯ ಸಂತಾಲ್ ಆದಿವಾಸಿ ಸಮುದಾಯ ಅವಳಿಗೆ ಬಹಿಷ್ಕಾರ ಹಾಕಿ ಅವಳನ್ನು ಊರಿಂದ ಹೊರಹಾಕಿತು. ಬದುಕುವುದೇ ಹೀಗೆ ದುಸ್ತರಗೊಂಡ ನಂತರ ಬುಧ್ನಿಗೆ ಆಸರೆ ದೊರೆತದ್ದು ಪಾಂಚೆತ್ ನಿವಾಸಿ ಸುಧೀರ್ ದತ್ತ ಅವರ ಮನೆಯಲ್ಲಿ. ಅವರಿಂದ ಒಂದು ಹೆಣ್ಣುಮಗುವನ್ನೂ ಕೂಡ ಬುಧ್ನಿ ಪಡೆದಳು. ಬಹಿಷ್ಕಾರದ ಜೊತೆಜೊತೆಯಾಗಿಯೇ ಹುಟ್ಟಿ ಆಜೀವ ಪರ್ಯಂತ ಅಜ್ಞಾತವಾಗಿ ಬದುಕಬೇಕಾಗಿದ್ದ ದೌರ್ಭಾಗ್ಯ ಆ ಮಗುವಿನದಾಗಿತ್ತು. ೧೯೬೨ರಲ್ಲಿ ದಾಮೋದರ್ ಕಣಿವೆ ನಿಗಮದ ನೌಕರಿಯಿಂದ ಹೊರಹಾಕಲ್ಪಟ್ಟ ಬುಧ್ನಿ ಜೀವನ ಸಾಗಿಸಲು ಸಣ್ಣ ಪುಟ್ಟ ಕೂಲಿನಾಲಿ ಕೆಲಸಗಳ ಮೊರೆ ಹೋಗಬೇಕಾಯಿತು. ೧೯೮೦ರಲ್ಲಿ ದಿಲ್ಲಿಗೆ ಹೋದ ಬುಧ್ನಿ ಅಲ್ಲಿ ನೆಹರೂರವರ ಮೊಮ್ಮಗನಾದ ಅಂದಿನ ಪ್ರಧಾನಿ ರಾಜಿವ್ ಗಾಂಧಿ ಅವರನ್ನು ಭೇಟಿ ಮಾಡಿ ತನಗೆ ದಾಮೋದರ್ ಕಣಿವೆ ನಿಗಮದಲ್ಲಿ ಮತ್ತೆ ನೌಕರಿ ಕೊಡಿಸಬೇಕೆಂಬ ಬೇಡಿಕೆಯನ್ನಿಟ್ಟಳಾದರೂ ಅದು ಫಲಕಾರಿಯಾಗಲಿಲ್ಲ.

ಬುಧ್ನಿ ಬಗೆಗಿನ ಕೊನೆಯ ತಂತು ಸಿಕ್ಕಿದ್ದು, www.ambedkar.org ಎಂಬ ಅಂತರ್ಜಾಲ ತಾಣದಲ್ಲಿ ಪ್ರಕಟಗೊಂಡ ವರದಿಯೊಂದರಲ್ಲಿ. "ತನ್ನ ಸಮುದಾಯದಿಂದ ಬಹಿಷ್ಕೃತಗೊಂಡ ನೆಹರೂರ ಆದಿವಾಸಿ ಪತ್ನಿ' ಬಡತನದಿಂದ ಕಂಗಾಲು" ಎಂಬ ಶೀರ್ಷಿಕೆಯಡಿ ಪ್ರಕಟವಾದ ಈ ಲೇಖನದಲ್ಲಿ ಬುಧ್ನಿಯ ಜೀವನದ ವಿವರಗಳನ್ನು ಉಲ್ಲೇಖಿಸಲಾಗಿತ್ತು. ಅಲ್ಲಿ ತಿಳಿಸಲಾಗಿದ್ದ ಮಾಹಿತಿಯ ಪ್ರಕಾರ, ೫೮ ವರ್ಷದ ಬುಧ್ನಿ ತಾನು ಮತ್ತೆ ಕರ್ಬೋನ ಗ್ರಾಮಕ್ಕೆ ಹಿಂದಿರುಗುವ ಅವಕಾಶ ಸಿಕ್ಕರಷ್ಟೇ ಸಾಕು ಎಂಬ ಅಳಲನ್ನು ವ್ಯಕ್ತಪಡಿಸಿದ್ದಳು. ಇದನ್ನು ಓದಿದ ನನಗೆ ನಂಬಿಕೆಯೇ ಬರಲಿಲ್ಲ. ಬುಧ್ನಿಯನ್ನು ನೇರ ಭೇಟಿ ಮಾಡಿ, ಅವಳೊಡನೆ ಮಾತಾಡಿ ಸತ್ಯ ಅರಿಯುವ ಆಸೆ ಬಲವಾಯಿತು. ನಾನು ನೆಹರೂ ಸಂಗ್ರಹಾಲಯದಿಂದ ಪಡೆದಿದ್ದ ಫೋಟೋದಲ್ಲಿ ಕಂಡ ಬುಧ್ನಿಯ ಸ್ಪಷ್ಟ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತ್ತಿತ್ತು. ಆಕೆ ಧರಿಸಿದ್ದ ಒಡವೆಗಳು, ಆಕೆಯ ಆರೋಗ್ಯವಂತ ಕಡುಗಪ್ಪು ಕೈಯನ್ನಲಂಕರಿಸಿದ್ದ ಬೆಳ್ಳಿ ಬಳೆಗಳು ನನ್ನ ನೆನಪಲ್ಲಿ ಸ್ಥಿರಗೊಂಡಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಅಕೆಯ ಕಣ್ಣಲ್ಲಿ ಮಿಂಚುತ್ತಿದ್ದ, ಮುಖದಲ್ಲಿ ಹೊರಹೊಮ್ಮುತ್ತಿದ್ದ ಅಮಾಯಕ ಮುಗ್ಧತೆ ನನ್ನ ಮನಃಪಟಲದಲ್ಲಿ ಅಚ್ಚಳಿಯದೇ ನಂತಿತ್ತು. ಸುರ್‌ಜಿತ್ ಅವರ ಪ್ರವಾಸ ತಾಣಗಳನ್ನು ಕುರಿತ ಮಾಹಿತಿ ಸಂಗ್ರಹಣಾ ಕಾರ್ಯವನ್ನು ಬದಿಗಿಟ್ಟು ಬುಧ್ನಿಯ ಬಗ್ಗೆ ವಿವರಗಳನ್ನು ಕಲೆ ಹಾಕತೊಡಗಿದೆ.

ಪಾಂಚೇತ್ ಅಣೆಕಟ್ಟಿನ ಉದ್ಘಾಟನೆ ಅಂದಿನ ಕಾಲದ ವೃತ್ತಪತ್ರಿಕೆಗಳಲ್ಲಿ, ವಿಶೇಷ ಉತ್ಸಾಹದೊಂದಿಗೆ ವರದಿಯಾಗಿತ್ತು. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ವರದಿ "ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ಭಾರತ; ಭಾರಿ ಅಣೆಕಟ್ಟುಗಳು ನಮ್ಮ ಧೃಡ ನಿರ್ಧಾರದ ಪ್ರತೀಕ – ನೆಹರೂ" ಎಂಬ ಶೀರ್ಷಿಕೆಯಡಿ ಪ್ರಕಟಗೊಂಡರೆ, ಸ್ಟೇಟ್ಸ್‌ಮನ್ ಪತ್ರಿಕೆ ಬುಧ್ನಿಯನ್ನೂ ಒಳಗೊಂಡು "ಡಿವಿಸಿಯ ಭಾರಿ ಅಣೆಕಟ್ಟಿನ ಉದ್ಘಾಟನೆ; ಪಾಂಚೇತ್‌ನಲ್ಲಿ ನಡೆದ ಸಮಾರಂಭದಲ್ಲಿ ಆದಿವಾಸಿ ಹೆಣ್ಣುಮಗಳೊಬ್ಬಳಿಂದ ಚಾಲನೆಗೊಂಡ ವಿದ್ಯುತ್ ಕೇಂದ್ರ" ಎಂಬ ಶೀರ್ಷಿಕೆ ಹೊಂದಿತ್ತು. ಅಂದಿನ ಸಮಾರಂಭದ ಬಗ್ಗೆ ಅತ್ಯುತ್ಸಾಹದಿಂದ ಉಸಿರು ಬಿಗಿಹಿಡಿದು ಬರೆದಂತಿರುವ ಈ ವರದಿಯ ಮಾದರಿ ನೋಡಿ: "ಉದ್ಘಾಟನಾ ಕಾರ್ಯವನ್ನು ಸಂತಾಲ ಕೂಲಿಗಾರ್ತಿ ಶ್ರೀಮತಿ ಮಾಝಿ (ಹೆಸರು ಬರೆಯುವಾಗ ಇರುವ ತಪ್ಪು ಮತ್ತು ಇನ್ನೂ ಮದುವೆಯಾಗದ ಆಕೆಯನ್ನು ಶ್ರೀಮತಿ ಎಂದು ಸಂಭೋದಿಸುವಲ್ಲಿ ಕಾಣುವ ಉಪೇಕ್ಷೆಯನ್ನು ಗಮನಿಸಿ)ಯವರಿಂದ ನೆರವೇರಿಸಿದ ಮಾನ್ಯ ನೆಹರೂರವರು, ಪ್ರಾಜೆಕ್ಟ್ ಕೆಲಸಗಾರ್ತಿಯೊಬ್ಬರು ಈ ಕೇಂದ್ರವನ್ನು ಉದ್ಘಾಟಿಸುವುದೇ ಸರಿಯಾದ ಕ್ರಮ ಎಂದು ತಿಳಿಸಿದರು. ಇದರಿಂದಾಗಿ ವಿದ್ಯುತ್ ಕೇಂದ್ರವನ್ನು ಉದ್ಘಾಟಿಸಿದ ದೇಶದ ಪ್ರಥಮ ಕೂಲಿ ಹೆಂಗಸೆಂಬ ವಿಶೇಷ ಗೌರವ ಶ್ರೀಮತಿ ಮಾಝಿಯವರಿಗೆ ದೊರಕಿದೆ"

ಇದೇ ವರದಿಗಾರ ಮುಂದುವರೆದು, ೧೩೪ ಅಡಿ ಎತ್ತರದ ಅಣೆಕಟ್ಟನ್ನು, ಆ ಹೆಂಗಸು ಸಂತಾಲಿ ಭಾಷೆಯಲ್ಲಿ ಮಾತನಾಡಿ ರಾಷ್ಟ್ರಕ್ಕೆ ಸಮರ್ಪಿಸಿದಳು ಎಂದೂ ಬರೆದಿದ್ದ. ಕೇವಲ ೧೫ ವರ್ಷದ ಒಬ್ಬ ಆದಿವಾಸಿ ಬಾಲೆ ರಾಷ್ಟ್ರದಲ್ಲಿ ಅಧಿಕೃತ ಭಾಷೆಯ ಸ್ಥಾನವನ್ನೂ ಪಡೆಯದ ಭಾಷೆಯೊಂದರಲ್ಲಿ ಮಾತಾಡಿ, ಅಣೆಕಟ್ಟನ್ನು ರಾಷ್ಟ್ರಕ್ಕೆ ಸಮರ್ಪಿಸಿದ ವಿಪರ್ಯಾಸ ವರದಿಗಾರನ ಗಮನಕ್ಕೇ ಬಂದಿರಲಿಲ್ಲ. (ಸಂತಾಲಿ ಭಾಷೆ ಅಧಿಕೃತ ಭಾಷೆಗಳ ಪಟ್ಟಿಯನ್ನು ಸೇರಿದ್ದು ೨೦೦೩ರಲ್ಲಿ.). ಅಷ್ಟೇಕೆ, "ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಂದ ದುರ್ಗಾಪುರ ಉಕ್ಕು ಕಾರ್ಖಾನೆಯ ಉದ್ಘಾಟನೆ, ಅಮೆರಿಕ ರಾಷ್ಟ್ರಪತಿ ಐಸೆನ್ಹೋವರ್ ಅವರ ಐತಿಹಾಸಿಕ ಭಾರತ ಭೇಟಿ" ಇತ್ಯಾದಿ "ಮಹತ್ತ್ವಪೂರ್ಣ ಸಂಗತಿ"ಗಳನ್ನು ವರದಿ ಮಾಡುವುದರಲ್ಲಿ ನಿರತವಾಗಿದ್ದ ಪತ್ರಿಕೆಗಳಿಗೆ, ನೆಹರೂರವರ ಆಸೆಯ ಈಡೇರಿಕೆಯ ಒಂದು ಕ್ಷಣದ ಕ್ರಮ ಬುಧ್ನಿಯ ಜೀವನವನ್ನು ಶಾಶ್ವತವಾಗಿ ಹಾಳುಗೆಡವಿದ ಸಂಗತಿ ಯಃಕಶ್ಚಿತ್ ವಿಷಯವಾಗಿದ್ದು ಅದು ಅವುಗಳ ಗಮನಕ್ಕೆ ಎಂದೂ ಬರಲೇ ಇಲ್ಲ. ಇದಿಷ್ಟೇ ಸಾಲದೆಂಬಂತೆ "ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾರತಕ್ಕೆ ೪೯೦೦೦ ಇಂಜಿನಿಯರುಗಳ ಅವಶ್ಯಕತೆ" , "೧೯೬೧ರ ವೇಳೆಗೆ ಉಕ್ಕು ಉತ್ಪಾದನೆಯಲ್ಲಿ ರಾಷ್ಟ್ರದ ಸ್ವಾವಲಂಬನೆಯ ಸಾಧನೆ", "ಭಾಕ್ರಾ ಅಣೆಕಟ್ಟು ಕಾರ್ಯದಲ್ಲಿ ಪ್ರಗತಿ", "ಆಲೂಗೆಡ್ಡೆ ಬೆಳೆಯುವ ಕ್ರಮದಲ್ಲಿ ವೈಜ್ಞಾನಿಕ ಪದ್ಧತಿಯ ಅಳವಡಿಕೆ", ಇತ್ಯಾದಿ ಇತ್ಯಾದಿ ಪ್ರಗತಿಶೀಲ ಭಾರತದ ಸಾಧನೆಯ ಶೀರ್ಷಿಕೆಗಳಿಂದ ಅಂದಿನ ಪತ್ರಿಕೆಗಳು ತುಂಬಿ ಹೋಗಿದ್ದವು. ಬುಧ್ನಿಗೆ ಎದುರಾದ ದುರಂತದ ಬಗ್ಗೆ ಒಂದು ಚಿಕ್ಕ ಸಾಲೂ ಎಲ್ಲೂ ಸಿಕ್ಕಲಿಲ್ಲ. ಡಿವಿಸಿ ಕಟ್ಟಿದ ಪಾಂಚೇತ್ ಅಣೆಕಟ್ಟಿನಲ್ಲಿ ಮುಳುಗಿಹೋದ, ಸಂತಾಲ ಗ್ರಾಮಗಳಂತೆ, ಐತಿಹಾಸಿಕ ದೇಗುಲಗಳಂತೆ ಬುಧ್ನಿಯ ದುರ್ದೈವ ಈ ಎಲ್ಲ ಪ್ರಗತಿಶೀಲ ಭಾರತದ ಕನಸಿನಲ್ಲಿ, ಕನಸುಗಳ ವರದಿಗಳಲ್ಲಿ ಮುಳುಗಿ ಹೋಗಿತ್ತು. (*ಜಾಗತಿಕ ಅಣೆಕಟ್ಟು ಆಯೋಗ(World Commission on Dams)*ಕ್ಕಾಗಿ, ಹರ್ಷ್ ಮಂದೆರ್, ರವಿ ಹೇಮಾದ್ರಿ ಮತ್ತು ವಿಜಯಾ ನಾಗರಾಜ್ ಅವರು ನಡೆಸಿದ ಅಧ್ಯಯನದ ಫಲವಾಗಿ, ೧೯೯೯ ರಲ್ಲಿ ಪ್ರಕಟವಾದ *'ಭಾರತದ ಅಣೆಕಟ್ಟುಗಳು, ಅದರಿಂದಾಗಿ ನಿರ್ವಸಿತಗೊಂಡವರ ಬಗೆಗಿನ ಭಾರತೀಯ ನೀತಿ ಮತ್ತು ಕಾನೂನು'* ಎಂಬ ಲೇಖನದ ಪ್ರಕಾರ ಪಾಂಚೇತ್ ಹಾಗೂ ಮೈಥಾನ್ ಅಣೆಕಟ್ಟಿನಿಂದಾಗಿ ನಿರ್ವಾಸಿತಗೊಂಡವರಲ್ಲಿ ಶೇ. ೫೪.೬೬ ಜನ ಆದಿವಾಸಿಗಳೆಂಬ ಅಂಶ ಬೆಳಕಿಗೆ ಬಂದಿದೆ. ಕುತೂಹಲಕಾರಿಯಾದ ಇನ್ನೊಂದು ಅಂಶವೆಂದರೆ ೧೯೬೦ರವರೆಗೂ ನಿರ್ವಸಿತ ಜನರ ಪಟ್ಟಿಗೆ ಭಾರತ ಇಭ್ಭಾಗವಾದಾಗ ಬಂದ ಜನರನ್ನು ಮಾತ್ರ ಸೇರಿಸಲಾಗುತ್ತಿತ್ತೇ ವಿನಹಾ ಅಣೆಕಟ್ಟುಗಳಿಂದಾಗಿ ಮನೆಮಠ ಕಳೆದುಕೊಂಡು ನಿರ್ಗತಿಕರಾದವರನ್ನು ಸೇರಿಸುತ್ತಿರಲಿಲ್ಲ.

ಪಾಂಚೇತ್ ಅಣೆಕಟ್ಟಿನ ಬಗ್ಗೆ ಮಾಹಿತಿ ನೀಡುವ ಅಂತರ್ಜಾಲ ತಾಣದಲ್ಲಿ ಸಿಕ್ಕುವ ಹಲವು ಕೊಂಡಿಗಳಲ್ಲಿ ಖ್ಯಾತ ರಾಜ್ಯನೈತಿಕ ಮನಃಶಾಸ್ತ್ರಜ್ಞ ಅಶೀಶ್ ನಂದಿಯವರು ಬರೆದಿರುವ ಆಧುನಿಕ ಭಾರತದ ಪರಿಸರವಾದಿಗಳ ಬಗೆಗಿನ ಲೇಖನವೂ ಒಂದು. ಆದರಲ್ಲಿ ಅಂದಿನ ಪರಿಸರವಾದಿ ಕಪಿಲ್ ಭಟ್ಟಾಚಾರ್ಜಿ ಅವರ ಹೆಸರಿನ ಉಲ್ಲೇಖವಿದೆ. ಆ ಕಾಲದಲ್ಲಿ ಬಹಳ ಜನಪ್ರಿಯವಾಗಿದ್ದ ಡಿವಿಸಿ ಪ್ರಾಜೆಕ್ಟ್ ಬಗ್ಗೆ ಪರಿಸರ ದೃಷ್ಟಿಕೋನದಿಂದ ಅಪಸ್ವರವೆತ್ತಿದ ಭಟ್ಟಾಚಾರ್ಜಿ ಅವರನ್ನು ಒಬ್ಬ ದೇಶದ್ರೋಹಿಯೆಂದು ಅಂದಿನ ಹಲವರು ಭಾವಿಸಿದ್ದೂ ಉಂಟಂತೆ! ಅಂತಹ ಕಪಿಲ್ ಭಟ್ಟಾಚಾರ್ಜಿ ಅವರ ಲೇಖನಗಳಲ್ಲೂ ಸಹ ಅಣೆಕಟ್ಟಿನಿಂದಾಗಿ ನಿರ್ವಸಿತರಾದ ಆದಿವಾಸಿಗಳ ಬಗ್ಗೆ ಸೊಲ್ಲೇ ಇಲ್ಲ. ತನ್ನ ಇಳಿ ವಯಸ್ಸಿನಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಾದ ಭಟ್ಟಾಚಾರ್ಜಿ ಅವರ ಲೇಖನಗಳಲ್ಲಿ ಕಾಣುವ ಈ ಕೊರತೆಗೆ ಬಹುಶಃ ಬಹುಶಃ ಕೈಗಾರಿಕೀಕರಣ ಮತ್ತು ವಿಜ್ಞಾನ-ತಂತ್ರಜ್ಞಾನಾಧಾರಿತ ಪ್ರಗತಿಯ ಬಗ್ಗೆ ಭಟ್ಟಾಚಾರ್ಜಿಯವರಿಗಿದ್ದ


' ದೃಢ ನಂಬಿಕೆಯೇ ಕಾರಣವಿರಬಹುದು ಎಂಬುದು ಆಶೀಶ್ ನಂದಿಯವರ ಅಭಿಪ್ರಾಯ.

ಇದನ್ನು ಓದಿದ ನನಗೆ ನನ್ನ ಬಾಲ್ಯದ ನೆನಪುಗಳು ಮರುಕಳಿಸಿದವು. ೧೯೭೦ರಲ್ಲಿ ಜನಪ್ರಿಯವಾಗಿದ್ದ 'ಸಾಮಾನ್ಯ ಜ್ಞಾನ' ಅಥವಾ 'ಜನರಲ್ ನಾಲೆಜ್' ಎಂಬ ವಿಷಯ ವಿಶೇಷ ನೆನಪಿಗೆ ಬಂತು. ಎಲ್ಲಾ ಸಂದರ್ಶನ ಹಾಗೂ ಕೆಲಸದ ಪೂರ್ವಭಾವಿ ಲಿಖಿತ ಪರೀಕ್ಷೆಗಳಲ್ಲಿ ಈ ವಿಭಾಗದ ಪ್ರಶ್ನೆಗಳು ಕಡ್ಡಾಯವಾಗಿದ್ದವು. ಅವುಗಳನ್ನು ಉತ್ತರಿಸಲೆಂದು ನಾವುಗಳು, ರಸ್ತೆ ಬದಿಯಲ್ಲಿನ ಪುಸ್ತಕ ವ್ಯಾಪಾರಿಗಳ ಬಳಿ ದೊರೆಯುತ್ತಿದ್ದ ಕೆಟ್ಟ ಕಾಗದದಲ್ಲಿ ಅಚ್ಚು ಹಾಕಿದ್ದ ಗೈಡುಗಳಿಂದ ವಿಷಯಗಳನ್ನು ಉರು ಹಚ್ಚಿದ್ದು ನೆನಪಾಯಿತು. ನಾವುಗಳು ಉತ್ಸಾಹದಿಂದ ಒದರುತ್ತಿದ್ದ ಪಟ್ಟಿಯಲ್ಲಿ ಹಲವು ಹೆಸರುಗಳು ನಮ್ಮ ನೆನಪಿನ ಭಾಗವಾಗುತ್ತಿದ್ದವು. ಉದಾಹರಣೆಗೆ – ಸಿಂಧ್ರಿ (ರಸಗೊಬ್ಬರ) ಪಿಂಪ್ರಿ (ಪೆನ್ಸಿಲಿನ್), ಚಿತ್ತರಂಜನ್(ರೈಲ್ವೆ ಇಂಜಿನ್), ಪೆರಂಬೂರ್ (ರೈಲ್ವೆ ಬೋಗಿ), ಭಾಕ್ರಾ ನಂಗಲ್, ಹಿರಾಕುಡ್, ದಾಮೋದರ್ ವ್ಯಾಲಿ, ಕೋಸಿ, ತುಂಗಭದ್ರಾ(ವಿವಿಧೋದ್ದೇಶ ಅಣೆಕಟ್ಟುಗಳು) ಅಂಕಲೇಶ್ವರ್ (ಪೆಟ್ರೋಲಿಯಮ್) ನರೋಡಾ(ಭಾರ ಜಲ) ತಾರಾಪುರ (ಅಣು ವಿದ್ಯುತ್ ಕೇಂದ್ರ), ಟ್ರಾಂಬೆ (ಅಣು ಸಂಶೋಧನೆ) ಇತ್ಯಾದಿ ಇತ್ಯಾದಿ. ಇದರ ಜೊತೆಗೆ ಭಾರತದ ಖನಿಜ ನಿಕ್ಷೇಪ ಸ್ಥಳಗಳನ್ನು ಸೂಚಿಸುವ ಚಿತ್ರ ವಿಚಿತ್ರ ಹೆಸರುಗಳು ಮತ್ತು ಭೂಪಟದಲ್ಲಿ ಇವುಗಳ ಸ್ಥಾನದ ಇನ್ನೊಂದು ಪಟ್ಟಿ- ಝರಿಯಾ (ಕಲ್ಲಿದ್ದಲು), ಹಜಾರಿಬಾಗ್(ಅಭ್ರಕ), ಬೈಲದಿಲ್ಲ, ಗಡ್ಚಿರೋಲಿ(ಕಬ್ಬಿಣದ ಅದಿರು), ನೈವೇಲಿ(ಲಿಗ್ನೈಟ್) .... ಈ ಎಲ್ಲ ಸಂಗತಿಗಳನ್ನು ನಮ್ಮ ತಲೆಗೆ ತುಂಬುತ್ತಿದ್ದ, ಹಾಗೂ ಈ ಸ್ಥಳಗಳನ್ನು ನೋಡಬೇಕೆಂದು ನಮ್ಮನ್ನು ಪ್ರೇರೇಪಿಸುತ್ತಿದ್ದ ಸುರ್‌ಜಿತ್ ಕೌರ್‌ರಂತಹ ಟೀಚರ್‌ಗಳೂ ನೆನಪಾದರು!!!.

ಮಾಡಲು ಬೇರೇನೂ ಅಮೂಲ್ಯ ಕೆಲಸವಿಲ್ಲದ ನಮ್ಮ ಬಾಲ್ಯ ಕಾಲದಲ್ಲಿ ನಮ್ಮ ತಲೆಗೆ ತುಂಬಿಕೊಂಡ ಈ ಹೆಸರುಗಳು ತನ್ನದೇ ಆದ ಒಂದು ನೆನಪಿನ ಚೌಕಟ್ಟನ್ನು ನಿರ್ಮಿಸಿ ಅದರಲ್ಲಿ ಸುಭದ್ರವಾಗಿ ನೆಲೆ ನಿಲ್ಲುತ್ತಿದ್ದವು. ಹಲವು ವರ್ಷಗಳ ನಂತರವೂ, ಈ ಪಟ್ಟಿಯಲ್ಲಿನ ಒಂದು ಹೆಸರು ಕಿವಿಗೆ ಬಿದ್ದರೆ ಸಾಕು, ಮಗ್ಗಿ ಹೇಳಿದಂತೆ ಉಳಿದವು ತಂತಾನೆ ಬಾಯಿಗೇ ನುಗ್ಗಿ ಬಂದುಬಿಡುತ್ತಿದ್ದವು; ಅಷ್ಟರ ಮಟ್ಟಿಗೆ ಅವು ನಮ್ಮ ತಲೆಯಲ್ಲಿ ಭದ್ರವಾಗಿ ನೆಲೆಯೂರಿದ್ದವು.

ಇವೆಲ್ಲ ನೆನೆಪುಗಳ ನಡುವೆ ಥುತ್ತನೆ ನನ್ನನ್ನು ಕಾಡಿದ್ದು ಒಂದು ಹೊಚ್ಚ ಹೊಸ ಹೊಳಹು: "ಇವೆಲ್ಲ ಜಾಗಗಳೂ ನಮಗೆ ಬೇಕಾಗುವ ಸಂಪನ್ಮೂಲಗಳ ಆಕರವಾಗಿ, ಮುಂದೆ ಮೂಡಲಿರುವ ಭವ್ಯ ಭಾರತದ ಕನಸಿನ ಕಚ್ಚಾಸಾಮಗ್ರಿಗಳಾಗಿ, ತಮ್ಮ ಇರವನ್ನು ಮೂಡಿಸಿದವೇ ಹೊರತು, ಬಯಕೆ ಭಯಗಳಿಂದ, ಆಸೆ ಅಳವುಗಳಿಂದ, ಕನಸು ಕಳವಳಗಳಿಂದ ಕೂಡಿದ, ಬುದ್ಧಿ–ಮನಸ್ಸು, ರಕ್ತ ಮಾಂಸಭರಿತ ನಮ್ಮಂತಹ ಮನುಷ್ಯರು ಇರುವ ತಾಣಗಳಾಗಿ ಗೋಚರಿಸಲೇ ಇಲ್ಲ. ಈ ಹೊಸ ಹೊಳಹು ನನ್ನನ್ನು ವಿಹ್ವಲಗೊಳಿಸಿದ್ದನ್ನು ನನ್ನ ಗೆಳತಿಯೊಬ್ಬಳ ಬಳಿ ಹಂಚಿಕೊಂಡಾಗ ಅವಳು ನನಗೆ ಸಮಾಜಶಾಸ್ತ್ರಜ್ಞ ಸತೀಶ್ ದೇಶಪಾಂಡೆಯವರ "ಸಮಕಾಲೀನ ಭಾರತ: ಒಂದು ಸಮಾಜಶಾಸ್ತ್ರೀಯ ನೋಟ (ಪೆಂಗ್ವಿನ್ ೨೦೦೩) " ಎಂಬ ಪುಸ್ತಕ ಓದುವಂತೆ ಸಲಹೆ ಇತ್ತಳು. ಆವಳ ಪ್ರಕಾರ ನನ್ನ ಕಳವಳದ ಹಿಂದಿನ ಗೃಹೀತಗಳನ್ನರಿಯಲು ಅದು ತಕ್ಕ ಪುಸ್ತಿಕೆ.

ಅವಳ ಅಂದಾಜು ಸರಿಯಿತ್ತು. ನೆಹರೂರವರ ದೃಷ್ಟಿಯಲ್ಲಿ ದೇಶವೆಂಬುದು ಪ್ರಮುಖವಾಗಿ ಒಂದು ಆರ್ಥಿಕ ಚಟುವಟಿಕೆಗಳ ಆಡುಂಬೊಲವಾಗಿತ್ತೆಂಬುದನ್ನು ದೇಶಪಾಂಡೆಯವರು ' ಒಂದು ಕಲ್ಪಿತ ಅರ್ಥವ್ಯವಸ್ಥೆಯಾಗಿ ರಾಷ್ಟ್ರದ ಪರಿಕಲ್ಪನೆ.' ಎಂಬ ತಮ್ಮ ಪ್ರಬಂಧದಲ್ಲಿ ನಿರೂಪಿಸಿದ್ದರು. ಶಾಲೆಗಳ ಹಾಗೂ ಮಾಧ್ಯಮಗಳ ಮೂಲಕ ಪ್ರಚುರಗೊಂಡ ಈ ಪರಿಕಲ್ಪನೆಯಿಂದಾಗಿ ದೇಶವೆಂದರೆ ಆರ್ಥಿಕ ಸಂಬಂಧಗಳಿಂದ ರೂಪುಗೊಂಡ ಉತ್ಪಾದನಾವ ಕಾಶಗಳ ಕ್ಷೇತ್ರ ಎಂಬುದು ಅಂದಿನ ವಿದ್ಯಾವಂತರೆಲ್ಲರ ನಂಬಿಕೆಯಾಗಿಬಿಟ್ಟಿತ್ತು. ಹೀಗಾಗಿ ಪ್ರಗತಿಯೆಂದರೆ ದೇಶದ ಎಲ್ಲ ಸಂಪನ್ಮೂಲಗಳನ್ನು ಕಚ್ಚಾ ಸಾಮಗ್ರಿಯಾಗಿ ಬಳಸಿ ಯೋಜನೆಗಳ ಮೂಲಕ ಸಾಧಿಸಬೇಕಾದ ಗುರಿಗಳು ಎಂಬ ಪ್ರಚ್ಛನ್ನ ಪರಿಕಲ್ಪನೆ ಸ್ಫುಟವಾಗಿ ನನಗೆ ಕಾಣತೊಡಗಿತು.



ಇದೇಕೆ ಹೀಗೆ ಎಂಬುದಕ್ಕೂ ದೇಶಪಾಂಡೆಯವರಲ್ಲಿ ಉತ್ತರವಿತ್ತು. ಅವರ ಪ್ರಕಾರ – ಅರ್ಥವ್ಯವಸ್ಥೆಯನ್ನೇ ಅಡಿಪಾಯವಾಗಿ ಬಳಸಿ ಕಟ್ಟಿದ ರಾಷ್ಟ್ರ, ಕೇಂದ್ರೀಕೃತ ಸಮುದಾಯವಾಗಿ ರೂಪುಗೊಂಡ ರಾಷ್ಟ್ರವಾಗುತ್ತದೆಂಬ ಪರಿಕಲ್ಪನೆ ನಮ್ಮ ಮಾಜಿ ಪ್ರಧಾನಿ ನೆಹರೂರವರು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೀಡಿದ ವಿಶಿಷ್ಟ ವೈಯುಕ್ತಿಕ ಕೊಡುಗೆ. ಈ ಪರಿಕಲ್ಪನೆಯೇ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಇತ್ಯಾದಿ ವಿಭಿನ್ನ ಸೆಳೆತಗಳು ಮೂಡಿಸುವ ವಿಕೇಂದ್ರೀಕರಣದ ಒತ್ತಡವನ್ನು ದಮನಗೊಳಿಸಿ ಕೇಂದ್ರೀಕೃತ ಏಕರೂಪಿ ರಾಷ್ಟವನ್ನು ಸ್ಥಾಪಿಸುವ ಬ್ರಹ್ಮಾಸ್ತ್ರವಾದದ್ದು.

ಹುಡುಗರಾಗಿದ್ದಾಗ 'ಪ್ರಗತಿ ಎಂಬ ಈ ಸಿದ್ಧ ಪರಿಕಲ್ಪನೆ ನಮಗೆ ಏಕೆ ಅಷ್ಟು ರೋಚಕವಾಗಿ ಕಂಡಿತ್ತೆಂಬ ನನ್ನ ಸಮಸ್ಯೆಗೂ ದೇಶಪಾಂಡೆಯವರ ಬಳಿ ಉತ್ತರವಿತ್ತು. ಪ್ರಗತಿಯ ಗುರಿಸಾಧನೆಗೆ ಬಳಕೆಯಾದ ಎರಡು ಪರಿಕರಗಳಲ್ಲಿ(ಒಂದು ತಂತ್ರಜ್ಞಾನವಾದರೆ. ಇನ್ನೊಂದು ಈ ತಂತ್ರಜ್ಞಾನವನ್ನು ಎಲ್ಲಿ ಹೇಗೆ ಬಳಸಬೇಕೆಂಬುದನ್ನು ನಿರ್ಧರಿಸುವ ಯೋಜನೆಗಳು) ಒಂದಾದ ಯೋಜನಾಕ್ರಮದ ಹೃದಯದಲ್ಲೇ ಅಡಗಿರುವ ಮೂಲದೋಷ. ಅಂಕಿ–ಅಂಶಗಳನ್ನು ಜೊತೆ ನಮ್ಮ ತರ್ಕ ಕ್ರಮವನ್ನು ಬಳಸಿ ಸಿದ್ಧಗೊಳ್ಳುವ ಯೋಜನಾಕ್ರಮದಲ್ಲಿ ಮಾನವಿಕ ಅಂಶಗಳ ಸ್ಥಾನ ಕಟ್ಟ ಕಡೆಯದು; ಇಲ್ಲಿ ಗುರಿ ಹಾಗೂ ಕ್ರಮಗಳೆರಡೂ ಮಾನವೀಯ ಭಾವನಾತ್ಮಕ ಅಂಶಗಳನ್ನು ಬದಿಗಿಡುತ್ತವೆ. ಯೋಜನೆಯ ಅಂತಿಮ ಫಲಾನುಭವಿಯಾಗಿ ಮಾತ್ರ ಮನುಷ್ಯನಿಗೆ ಅಲ್ಲಿ ಸ್ಥಾನ. ಇಷ್ಟಿದ್ದರೂ ಇಂತಹ ಕ್ರಮಗಳು ಅತ್ಯಂತ ಮಾನವೀಯ ಮುಖವಾಡಗಳನ್ನು ತಂತಾನೇ ಗಳಿಸಿಕೊಡುಬಿಡುತ್ತವೆ. ಇದರಿಂದಾಗಿ ಇವುಗಳ ಸಫಲತೆ ಇಡೀ ಸಮುದಾಯಕ್ಕೆ ವರದಂತೆ ಗೋಚರಿಸಿ, ಇವುಗಳು ಆಧುನಿಕ ದೇವತೆಗಳ ಸ್ಥಾನ್ನ ಪಡೆದುಬಿಡುತ್ತವೆ. ಹೀಗಿರುವುದರಿಂದ ತಾನೆ, ಮಾನ್ಯ ನೆಹರೂಗೆ ಭಕ್ರಾ ನಂಗಲ್ ಬಳಿ ನಿಂತು "ಇದಕ್ಕಿಂತ ಪವಿತ್ರವಾದ ಸ್ಥಳ ಭಾರತದಲ್ಲಿ ಇರಲು ಸಾಧ್ಯವೇ!" ಎಂದು ಉದ್ಗರಿಸಲು, ಹಾಗೂ ಆ ಉದ್ಗಾರವನ್ನು ಕೇಳಿ ಆಧುನಿಕರು ಪುಳಕಿತರಾಗಲು ಸಾಧ್ಯವಾದದ್ದು! ನಮ್ಮ ರಾಷ್ಟ್ರ ಹಾಗೂ ಅದರ ಪ್ರಗತಿಯ ಪರಿಕಲ್ಪನೆ ಭಾರಿ ಕೈಗಾರಿಕೆಗಳ, ಅಣೆಕಟ್ಟುಗಳ ಭಾರದಡಿ ಸಿಕ್ಕಿ ನಲುಗಿಹೋಗಿತ್ತು. ಅಷ್ಟೇಕೆ;೧೯೫೯ರ ಡಿಸೆಂಬರ್೨೮ರಂದು ಖರಗ್ಪುರ ಐಐಟಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಭಾಷಣವನ್ನು ಸ್ಟೇಟ್ಸ್‌ಮನ್ ಪತ್ರಿಕೆ ಮಾಡಿದ ವರದಿಯ "ಜನರ (ಮಾನವೀಯ) ಹಕ್ಕುಗಳ ಬಗ್ಗೆ ಅತಿ ಒತ್ತು ಕೊಡುವುದು ಖಂಡನೀಯ, ಬದಲಿಗೆ ನಮ್ಮ ಕರ್ತವ್ಯದ ಬಗ್ಗೆ ಗಮನಹರಿಸಿ: ರಾಷ್ಟ್ರಪತಿಯವರ ಕರೆ" ಎಂಬ ಶೀರ್ಷಿಕೆ ನಮ್ಮ ಪ್ರಗತಿ ಸಾಧನೆಯ ಗುರಿ ಮತ್ತು ಕ್ರಮದ ಹಿಂದಿನ ನಂಬಿಕೆಗಳನ್ನು ಎತ್ತಿ ತೋರಿಸುತ್ತದೆ. (೧೯೯೯ರಲ್ಲಿ ಯೋಜನಾ ಆಯೋಗದ ಕಾರ್ಯದರ್ಶಿಯಗಿದ್ದ ಎನ್. ಸಿ. ಸಕ್ಸೇನಾ ಅವರ ಪ್ರಕಾರ ನಮ್ಮ ೫೦ ವರ್ಷಗಳ ಭಾರಿ ಯೋಜನೆಗಳ ಫಲವಾಗಿ ಮನೆಮಠ ಕಳೆದುಕೊಂಡು ನಿರಾಶ್ರಿತರಾದವರ ಸಂಖ್ಯೆ ಸರಿಸುಮಾರು ೫ ಕೋಟಿ. (ನೋಡಿ: Dams, Displacement, Policy and Law in India', ೧೯೯೯ by N.C.Saxena)

ಈ ನಮ್ಮ 'ಪ್ರಗತಿಯ ಪ್ರತೀಕ'ಗಳನ್ನು ಜನ ಸಾಮಾನ್ಯರು ಬೆರಗಿನಿಂದ, ಮೆಚ್ಚುಗೆಯಿಂದ ನೋಡುವಂತೆ ಪ್ರಚೋದಿಸಲಾಯಿತೇ ವಿನಹಾ, ಅವುಗಳ ಬಗ್ಗೆ ನೇರ ಮತ್ತು ನಿರ್ವಿಕಾರವಾದ ಗಮನ ಹರಿಸಲು ಅಸಾಧ್ಯವಾದಂತಹ ವಾತಾವರಣವೊಂದು ಸೃಷ್ಟಿಯಾಗಿತ್ತು. ಸುರ್‌ಜಿತ್ ಅವರ ಉತ್ಸಾಹ, ಬುಧ್ನಿಯ ಹುರುಪು ಹಾಗೂ 'ಜನರಲ್ ನಾಲೆಜ್' ಬಗೆಗಿನ ನನ್ನ ಭಕ್ತಿ, ಇವೆಲ್ಲ ಸಾಧ್ಯವಾದದ್ದು ಸ್ವತಂತ್ರ ಭಾರತದ ಅಧ್ವರ್ಯುಗಳು ನಿರ್ಮಾಣ ಮಾಡಿದ ಇಂತಹ ವಾತಾವರಣದಿಂದಾಗಿಯೇ!.

ಚಾರಿತ್ರಿಕ ಸಂಧಿಕಾಲವೊಂದು ಒಬ್ಬ ಶಿಕ್ಷಕಿಯನ್ನೂ ಮತ್ತು ಒಬ್ಬ ಸಂತಾಲ ಕೂಲಿ ಕೆಲಸದವಳನ್ನೂ ಒಂದೆಡೆ ಒಗ್ಗೂಡಿಸಿದೆ; ಅಂದಿನ ಭಾರತದ ಒಟ್ಟಾರೆ ಸಮಾಜದ ಎರಡು ತುದಿಯಲ್ಲಿರುವ ಇವರಿಬ್ಬರೂ ನೆಹರೂರವರ ಕನಸಿನಲ್ಲಿ ಸಿಕ್ಕಿಬಿದ್ದಿದ್ದಾರೆ. ದೇಶಪಾಂಡೆಯವರು ಹೇಳುವಂತೆ, ತನ್ನ ಪರಂಪರಾಗತ ನೆನಪುಗಳನ್ನು ಧಿಕ್ಕರಿಸಿ ದೂರತಳ್ಳಿ, ಆಧುನಿಕ ಅರ್ಥವ್ಯವಸ್ಥೆ ಹಾಗೂ ಚಿಂತನೆಯ ಅಡಿಪಾಯದ ಮೇಲೆ ಕಟ್ಟಿರುವ ನೆಹರೂರವರ ಭಾರತದ ಕಲ್ಪನೆಯಲ್ಲಿ ಬುಧ್ನಿಂತಹ ಅತಿ ಸಾಮಾನ್ಯರ ವಾಸ್ತವ ಪ್ರಪಂಚದ ಸೋಂಕೂ ಇರಲಿಲ್ಲ. ಅಂದಿನ ಸಮಾಜದ ಅಧ್ವಂರ್ಯುಗಳಿಗಾಗಲೀ, ಸುರ್‌ಜಿತ್ ಕೌರ್ ಅವರಿಗಾಗಲೀ, ನನಗಾಗಲೀ ಬುಧ್ನಿಯ ಹಾಗೂ ಅವಳಂತಹವರ ಇರವಿನ ಅರಿವೇ ಇರಲಿಲ್ಲ.

ಸುರ್‌ಜಿತ್ ಕೌರ್ ಅವರಿಂದ ಪ್ರೇರಿತಳಾಗಿ ೫೦ ವರ್ಷಗಳ 'ಪ್ರಗತಿ ಸಾಧನೆ'ಯ ಮಾಹಿತಿ ಸಂಗ್ರಹ ಕಾರ್ಯಕ್ಕೆ ಹೊರಟದ್ದು ಒಂದು ರೀತಿ ಒಳ್ಳೆಯದೇ ಆಯಿತು. 'ಪ್ರಗತಿ ಸಾಧನೆಯೇ ಒಂದು ಮಹಾನ್ ಪುರುಷಾರ್ಥ'ವೆಂದು ಬಗೆದು ಈ ಪಥದಲ್ಲಿ ಸಾಗಿದ ಸುರ್‌ಜಿತ್ ಕೌರ್ ಹಾಗೂ ನನ್ನಂಥಹವರಿಗೆ, ಈ ಎಲ್ಲ ಸಂಭ್ರಮಗಳಿಗೆ ಹೊರತಾಗಿ, ಹೆದ್ದಾರಿ ಬದಿ ಬೇರು ಸಮೇತ ಕಿತ್ತು ಬಿಸುಟ ಗಿಡಗಳಂತೆ ಗಮನಕ್ಕೆ ಬಾರದೇ ಉಳಿದು ಬದುಕಿದ ಭುಧ್ನಿಯಂತಹ ಹುಲು ಮಾನವರ ಬಗ್ಗೆ ಅರಿವು ಹಾಗೂ ಸಹಾನುಭೂತಿ ಮೂಡುವಂತಾದದ್ದು ಒಳ್ಳೆಯದೇ.

ನೆಹರೂ ಕಾಲದ ಕನಸುಗಳು ಇಂದು ಮಾಸಿವೆಯಾದರೂ ದೇಶದ ಭಾಗಗಳನ್ನು ಸಂಪನ್ಮೂಲ ಭರಿತ ಪ್ರದೇಶಗಳೆಂದು ಗುರುತಿಸುವ ಚಾಳಿ ಇನ್ನೂ ಹಾಗೇ ಉಳಿದುಬಿಟ್ಟಿದೆ. ಉದಾಹರಣೆಗೆ, ಇತ್ತೀಚೆಗೆ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಛತ್ತೀಸ್‌ಗಡ್ ಪ್ರದರ್ಶಿಸಿದ್ದ ಸ್ಥಬ್ದಚಿತ್ರದಲ್ಲಿ ಮೋಹಕ ಕೊತ್ಮುಸಾರ್ ಗುಹೆಗಳಲ್ಲಿರುವ ಹೇರಳ ಸುಣ್ಣಕಲ್ಲಿನ ಚಿತ್ರಣವಿತ್ತೇ ಹೊರತು ಅಲ್ಲಿನ ಬಸ್ತರ್ ಆದಿವಾಸಿಗಳ ಸುಳುಹೂ ಇರಲಿಲ್ಲ. ಆರ್ಥಿಕಾಭಿವೃದ್ಧಿ ಹಾಗೂ ಖಾಸಗಿ ಉದ್ಯಮಶೀಲತೆಯ ಮೋಡಿಗೊಳಗಾಗಿರುವ ಇಂದಿನ ಜಾಗತೀಕರಣಗೊಂಡ ಪ್ರಪಂಚದಲ್ಲಿ ಈ ಚಾಳಿ ಇನ್ನೂ ಹೆಚ್ಚು ಬಲಗೊಳ್ಳುತ್ತಿದೆ.

ದೇಶದ ಪೌರತ್ವದ ಬಗೆಗಿನ ತಿಳುವಳಿಕೆಯ ಬದಲು ಗ್ರಾಹಕತ್ವದ ಪರಿಚಯವನ್ನು ಮಾಡಿಕೊಡುತ್ತಿರುವ ಶಿಕ್ಷಣ ಕ್ರಮದಿಂದಾಗಿ ಜನರಿಗೆ ದೇಶದ ನೆಲ-ಜಲ ಅಷ್ಟೇ ಏಕೆ, ಸಹಪೌರರೂ ಸಹ ಮಾರಾಟದ ಸರಕಾಗಿ, ಲಾಭ ಗಳಿಸಲು ಉಪಯುಕ್ತವಾದ ಕಚ್ಚಾ ಸಾಮಗ್ರಿಯಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಆದರೆ ಒಂದು ಮುಖ್ಯ ಬದಲಾವಣೆಯೂ ಈ ವಿದ್ಯಮಾನದಲ್ಲೇ ಅಡಗಿರುವುದನ್ನು ನಾವು ಗಮನಿಸಬೇಕಾಗಿದೆ. ದೇಶದ ವಿಸ್ತಾರವನ್ನು ಕಚ್ಚಾ ಸಾಮಗ್ರಿಯಾಗಿ ಕಾಣುವ ಚಾಳಿ ಹೆಚ್ಚಿದಷ್ಟೂ ಅಲ್ಲಿನ ಜನ ಸಮುದಾಯ ಹಾಗೂ ಅವರ ಸಂಸ್ಕೃತಿಗಳು ಈ ನೆಹರೂ ಕನಸಿನ ಪ್ರಗತಿಗೆ ಅಡ್ಡಗಾಲು ಹಾಕುವುದೂ ಹೆಚ್ಚಾಗಿದೆ. ಕಚ್ಚಾ ಸಾಮಗ್ರಿಯ ದೃಶ್ಯದ ಜೊತೆಜೊತೆಯಲ್ಲಿಯೇ ಇದರ ಸೂರೆಗೆ ಎಲ್ಲೆಡೆಯಲ್ಲಿಯೂ ಜನ ಸಾಮಾನ್ಯರು ಸೆಡ್ಡು ಹೊಡೆದು ನಿಲ್ಲುತ್ತಿರುವುದು ಢಾಳಾಗಿ ಕಾಣಹತ್ತಿದೆ. ಮುಂಚಿನಷ್ಟು ಸರಳವಾಗಿ ಬಿಡಿಸಕೊಳ್ಳಲಾಗದಂತಹ ತೊಡಕುಗಳನ್ನು ಅವರು ಒಡ್ಡುತ್ತಿದ್ದಾರೆ. ಬಾಕ್ಸೈಟ್ ಅದಿರಿನ ಕಣಜದಂತೆ ಕಾಣುವ ಬೆಟ್ಟದಲ್ಲೇ ಆದಿವಾಸಿಗಳ ದೈವಮೂಲಗಳಷ್ಟೇ ಅಲ್ಲ, ಅಲ್ಲಿರುವ ಔಷಧೀಯ ಸಸ್ಯ ಸಂಪತ್ತು ಹಾಗೂ ಅದರ ಬಗೆಗೆ ಅಲ್ಲಿನ ಮೂಲ ನಿವಾಸಿಗಳಿಗಿರುವ ಅಮೂಲ್ಯ ಜ್ಞಾನ ಕೂಡ ನಮ್ಮ ಧಾವಂತಕ್ಕೆ ಕಡಿವಾಣ ಹಾಕುತ್ತಿವೆ. ತಾಳ್ಮೆಯ ಪಾಠವನ್ನು ನಮಗೆ ಕಲಿಸುತ್ತಿವೆ. ಜನ ಸಮುದಾಯ, ತಾನು ಇದ್ದೆಡೆಯೆಲ್ಲಾ ತಮ್ಮ ತಮ್ಮ ಅನುಭವವೆಂಬ ವೃಕ್ಷದ ಬೇರನ್ನು ಅಲ್ಲಿನ ನೆಲದಲ್ಲಿ ಊರಿ, ಹರಡಿ ಅಲ್ಲಿನ ಜಲ-ಹವೆಯೊಂದಿಗೆ ಅದನ್ನು ಬೆಸೆದಿರುತ್ತದೆ. ಪರಿಸರ ಹಾಗೂ ಜನ ಸಮುದಾಯದ ನಡುವೆ



ಇರುವ ಈ ಸಾವಯುವ ಸಂಬಂಧವನ್ನು ಮರೆತು ಮುಂದುವರೆಯುವುದು ಅಸಾಧ್ಯವಷ್ಟೇ ಅಲ್ಲ, ಅಸಾಧು ಕೂಡ. ಇದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಲೇ ಬೇಕಾದ ಅನಿವಾರ್ಯ ಇಂದು ಸೃಷ್ಟಿಯಾಗಿದೆ ಎಂಬುದು ಬುಧ್ನಿಯ ಕಥಾನಕದಿಂದ ನಾನು ಪಡೆದ ತಿಳುವಳಿಕೆ.

ಇಂತೆಲ್ಲಾ ನಾನು ಬುಧ್ನಿಯ ಬಗ್ಗೆ ಚಿಂತನೆ ನಡೆಸುತ್ತಿದ್ದಾಗಲೇ, ಕೊನೆವರೆಗೂ ದೈನೇಸಿ ಬದುಕನ್ನೇ ನಡೆಸಿದ ಬುಧ್ನಿ ಕಳೆದ ವರ್ಷ ತನ್ನ ೭೦ನೆಯ ವಯಸ್ಸಿನ ಆಸುಪಾಸಿನಲ್ಲಿ ಕೊನೆಯುಸಿರೆಳೆದಳೆಂಬ ಸುದ್ದಿ ನನ್ನ ರಾಂಚಿಯ ಮಿತ್ರರೊಬ್ಬರಿಂದ ದಕ್ಕಿತು.

ಬುಧ್ನಿ ಉದ್ಘಾಟಿಸಿದ ಪಾಂಚೇತ್ ಅಣೆಕಟ್ಟು ಸಹ ತನ್ನದೇ ಆದ ವಯೋಸಹಜ ಮುದಿತನವನ್ನು ಕಂಡಿದೆ. ಅಣೆಕಟ್ಟಿನ ಬಗ್ಗೆ ಮಾಹಿತಿ ಕಲೆಹಾಕುವ ಕಾರ್ಯದಲ್ಲಿ ಮುಳುಗಿದ್ದ ನನಗೆ ಬೂಲೂ ಇಮಾಮ್‌ರವರು the Indian National Trust for Art and Cultural Heritage (Hazaribagh chapter)ಗಾಗಿ ೨೦೦೬-೦೭ರಲ್ಲಿ ಅಂತಾರಾಷ್ಟ್ರೀಯ ಸ್ಮಾರಕಗಳು ಹಾಗೂ ನಿವೇಶನಗಳ ಬಗ್ಗೆ ತಯಾರಿಸಿದ ವರದಿಯೂ ಕಣ್ಣಿಗೆ ಬಿತ್ತು. ಪಾಂಚೇತ್ ಅಣೆಕಟ್ಟಿನಲ್ಲಿ ತುಂಬಿದ ಹೂಳಿನಿಂದಾಗಿ ನೀರಿನ ಸಂಗ್ರಹ ಕಡಿಮೆಯಾಗಿ, ಅಣೆಕಟ್ಟಿನ ನೀರಲ್ಲಿ ಮುಳುಗಿಹೋಗಿದ್ದ ತೇಲ್ಕುಪಿ ದೇವಸ್ಥಾನ ಹೇಗೆ ಮತ್ತೆ ಮೇಲೆದ್ದು ಕಾಣತೊಡಗಿದೆ ಎಂಬುದನ್ನು ಇಮಾಂರವರು ತಮ್ಮ ವರದಿಯಲ್ಲಿ ವಿವರಿಸಿದ್ದರು. (ಮೇಲಿನ ಚಿತ್ರ ನೋಡಿ) .

ಸುರ್‌ಜಿತ್ ಕೌರ್ ಅವರ ಕೋರಿಕೆಯಿಂದಾಗಿ ಶುರುವಾದ ನನ್ನ ಪಯಣ, ಬುಧ್ನಿಯ ದುರಂತದೊಂದಿಗೆ ಮುಂದುವರೆದು, ಮತ್ತೆ ನೀರಿನಿಂದ ಮೇಲೆದ್ದಿರುವ, ಈ ದೇಶದ ಸಾಂಸ್ಕೃತಿಕ ಪ್ರತೀಕವಾದ ದೇಗುಲದವರೆಗೆ ಸಾಗಿದ್ದು, ಈ ಪಯಣದಲ್ಲಿ ಕಂಡು ಪರಿಭಾವಿಸಿದ ಚಿತ್ರಗಳೆಲ್ಲವೂ ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಪರಿಭ್ರಮಿಸುತ್ತಿವೆ. ಇವು ನಮ್ಮ ಇಡೀ ಪ್ರಸಕ್ತ ಸನ್ನಿವೇಶಕ್ಕೆ ಹೊಸ 'ಸಾಮಾನ್ಯ ಜ್ಞಾನ' (ಜನರಲ್ ನಾಲೆಜ್)ದ ಒಂದು ದೊಡ್ಡ ಪ್ರತೀಕವಾಗಿ, ನಮ್ಮ ಇಂದಿನ ಹಾಗೂ ಭವಿತವ್ಯದ ಕಡೆಗೆ ತೋರುಬೆರಳೆನಿಸುವ ರೂಪಕಗಳಾಗಿ, ಇಲ್ಲಿನ ನೆಲ ಹಾಗು ಅಲ್ಲಿ ನೆಲೆ ಕಂಡುಕೊಂಡ ಜನಕ್ಕೆ ನಾವು ಈರೆಗೆ ತೋರಿದ ಅನಾದರದ ಬಗೆಗಿನ ಎಚ್ಚರಿಕೆ ಘಂಟೆಯಾಗಿ, ನಮ್ಮ ಹಮ್ಮನ್ನು ಅಣಕಿಸುತ್ತಾ, ನಮ್ರತೆ, ವಿನಯದ ಪಾಠ ಹೇಳುವ ಗುರುಸದೃಶವಾಗಿ ಕಾಣುತ್ತಿವೆ.


ಈ ನನ್ನ ಲೇಖನ ಸುರ್‌ಜಿತ್ ಕೌರ್ ಅವರನ್ನು ಯಾವ ರೀತಿ ತಟ್ಟುತ್ತದೆ ಎಂಬುದು ನನ್ನ ಕುತೂಹಲ. ಅವರು ವಹಿಸಿದ ಕಾರ್ಯವನ್ನು ಇನ್ನೂ ಮುಗಿಸದೆ ಕುಳಿತಿರುವ ನನಗೆ ಅವರನ್ನು ಮುಖತಃ ಭೇಟಿ ಮಾಡುವಷ್ಟು ಧೈರ್ಯವಿಲ್ಲ. ಆದರೂ ನಾನು ಸಂಗ್ರಹಿಸಿದ ಮಾಹಿತಿಯನ್ನು ಗಮನಿಸಿದ ಅವರು ಮತ್ತೊಮ್ಮೆ ಆ ಹಳೆಯ ಸ್ಥಳಗಳ ಪ್ರವಾಸ ಕೈಗೊಳ್ಳುವ ಮನಸ್ಸು ಮಾಡಿಯೇ ಮಾಡುತ್ತಾರೆಂಬ ನಂಬಿಕೆ ನನ್ನದು. ಹಾಗೆ ಅವರು ಹೊರಟಾಗ, ನಾನಂತೂ ಮರೆಯದೆ ಅವರ ಜೊತೆ ಹೊರಡುತ್ತೇನೆ ಎಂಬುದಂತೂ ಖಂಡಿತಾ ನಿಜ.!

(ನೆಹರೂ ರವರ "ಆಧುನಿಕ ಭಾರತದ ದೇವಾಲಯ"ಗಳನ್ನು ಉದ್ಘಾಟಿಸಿ ಅವರ ಕನಸಿನಲ್ಲಿ ಸಿಕ್ಕೆ ನರಳಿದ ಸಂತಾಲ ಹೆಣ್ಣು ನಮ್ಮ ಭಾರತದ ರಾಷ್ಟ್ರೀಯ ಚರಿತ್ರೆಯಪುಟಗಳಲ್ಲಿ ಸ್ಥಾಪಿತಗೊಳ್ಳಲಿ; ನಮ್ಮೆಲ್ಲರ ಸಾಮುದಾಯಿಕ ನೆನಪಿನಲ್ಲಿ ಆಕೆ ಭದ್ರವಾಗಿ ಉಳಿದು, ಇಲ್ಲಿನ ಮಣ್ಣನ್ನು, ಮಣ್ಣಿನ ಮಕ್ಕಳಿಂದ ಬೇರೆಯಾಗಿಸಿಯೇ ಪರಿಭಾವಿಸುವ ಚಾಳಿಯಿಂದಾಗುವ ಘನಘೋರ ದುರಂತಗಳನ್ನು ನಮಗೆ ಸರ್ವದಾ ನೆನೆಪಿಸುತ್ತಿರಲಿ.)

(ಹಿಂದೂ ವೃತ್ತಪತ್ರಿಕೆಯಲ್ಲಿ ಇತ್ತೀಚೆಗೆ (ಜೂನ್ ೨, ೨೦೧೨) ಪ್ರಕಟವಾದ ಲೇಖನ - Recovering Budhni Mejhan from the silted landscape of modern India ದ ಕನ್ನಡಾನುವಾದ)


ಅಭಿವೃದ್ಧಿ ಮೀಮಾಂಸೆ ಮತ್ತು ನಮ್ಮ ಶಿಕ್ಷಣ ಕ್ರಮ

-ರಾಜೇಂದ್ರ ಚೆನ್ನಿ



ಮುಖ್ಯ ಪ್ರಶ್ನೆಯೆಂದರೆ, ಒಟ್ಟಾರೆ ನಮ್ಮ ಶಿಕ್ಷಣ ವ್ಯವಸ್ಥೆ ಸಾಮಾಜಿಕವಾಗಿ ಪ್ರಸ್ತುತವಾದ ಯಾವುದೇ ಪರಿಕಲ್ಪನೆಯ ಬಗ್ಗೆ ವಿಮರ್ಶಾತ್ಮಕವಾದ, ವೈಚಾರಿಕವಾದ ಜಿಜ್ಞಾಸೆಯನ್ನು ಪ್ರೋತ್ಸಾಹಿಸುತ್ತಿದೆಯೇ ಎನ್ನುವುದು. ಇದಕ್ಕೆ ಉತ್ತರ ಸರಳ ಹಾಗೂ ಖಚಿತವಾದ-ಇಲ್ಲ ಎಂಬುದು. ಮೊದಲಿನಿಂದಲೂ ಯಾವುದೋ ಅಧಿಕಾರ ಮೂಲದಿಂದ ಬಂದ ಜ್ಞಾನವನ್ನು ತರಗತಿಯಲ್ಲಿ ಅಧಿಕಾರ ಸ್ಥಾನದಲ್ಲಿಯೇ ಇರುವ ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ವರ್ಗಾವಣೆ ಮಾಡುವುದೇ ಶಿಕ್ಷಣವೆಂದು ನಮ್ಮ ವ್ಯವಸ್ಥೆಯಲ್ಲಿ ನಂಬಲಾಗಿದೆ. ಈ ಅಧಿಕಾಂದ ಮೂಲ ಹಿಂದೆ ಶಾಸ್ತ್ರವಾಗಿತ್ತು, ಅದನ್ನು ಹುಟ್ಟಿನಿಂದ ಪಡೆದ ಜಾತಿಯಾಗಿತ್ತು, ಈಗ ಅದು ಜಾಗತೀಕರಣಗೊಂಡ ವಿಶ್ವದಲ್ಲಿ ಯಜಮಾನಿಕೆಯ ಸ್ಥಾನದಲ್ಲಿರುವ ಪಶ್ಚಿಮವಾಗಿದೆ. ಹೀಗಾಗಿ ಪಶ್ಚಿಮದಲ್ಲಿ ಉತ್ಪಾದನೆಯಾದ ಜ್ಞಾನವೇ ಅಧಿಕೃತವೆಂದು ಮನ್ನಣೆಯಾಗಿ ಅದನ್ನು ಯಥಾಶಕ್ತಿ ಮರುಹಂಚಿಕೆ, ವರ್ಗಾವಣೆ ಮಾಡುವುದೇ ಶಿಕ್ಷಣದ ಗುರಿಯಾಗಿದೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ಸಮಾಜವಿಜ್ಞಾನದ ಯಾವುದೇ ಶಾಖೆಯಲ್ಲಿ ಅಥವಾ ವಿಷಯದಲ್ಲಿ ಭಾರತದಿಂದ ಹೊರಟು ಪಶ್ಚಿಮದಲ್ಲಿ ಸ್ವೀಕೃತವಾದ ಕೊನೆಯ ವೈಚಾರಿಕ ಪರಿಕಲ್ಪನೆ ಅಥವಾ ಸಿದ್ಧಾಂತ ಯಾವುದು ಅಂತ ನೆನಪು ಮಾಡಿಕೊಳ್ಳಿ, ನೆನಪಾಗುವುದಿಲ್ಲ. ವಿಪರ್ಯಾಸವೆಂದರೆ, ಭಾರತಕ್ಕೇ ವಿಶಿಷ್ಟವಾದ ಜಾತಿವ್ಯವಸ್ಥೆಯಂಥ ಸಾಮಾಜಿಕ ಪರಿಸ್ಥಿತಿಯನ್ನು ಅಥವಾ ರಚನೆಯನ್ನು ವಿವರಿಸುವ ಎಲ್ಲಾ ಸಿದ್ಧಾಂತಗಳು ಪಶ್ಚಿಮ ಮೂಲದ್ದವೇ- ಬ್ರಿಟಿಷ್ ಮಾನವಶಾಸ್ತ್ರಜ್ಞರಿಂದ ನಿಕೋಲಾಸ್ ಡರ್ಕ್ಸರ ವರೆಗೆ (Castes of Mind ಕೃತಿಯ ಲೇಖಕ) ಎಲ್ಲಾ ವ್ಯಾಖ್ಯಾನಕಾರರು ಪಶ್ಚಿಮದವರೇ. ಇಲ್ಲಿ ಜ್ಞಾನದ ಮೂಲವು ಭಾರತೀಯವೋ ಪಶ್ಚಿಮವೋ ಅನ್ನುವುದು ಮುಖ್ಯವಲ್ಲ, ಅವುಗಳನ್ನು ನಮ್ಮ ಶಿಕ್ಷಣ ಪದ್ಧತಿ ಅಧಿಕೃತ ಜ್ಞಾನವಾಗಿ ಅಂದರೆ ಅವಿಮರ್ಶಾತ್ಮಕವಾಗಿ ವಿದ್ಯಾರ್ಥಿಗಳಿಗೆ ದಾಟಿಸುತ್ತದೆ. ಗಾಂಧಿ, ಲೋಹಿಯ ಮತ್ತು ಅಂಬೇಡ್ಕರ್‌ರು ಈ ಜ್ಞಾನವ್ಯವಸ್ಥೆಗೆ ಎಷ್ಟು ಅಪ್ರಸ್ತುತರಾಗಿದ್ದಾರೆಂದು ತಿಳಿಯಲು ನಮ್ಮ ಸಮಾಜವಿಜ್ಞಾನಗಳ ಪಠ್ಯಕ್ರಮ ನೋಡಿದರೆ ತಿಳಿಯುತ್ತದೆ.


ಹೀಗಾಗಿ 'ಅಭಿವೃದ್ಧಿ' ಎನ್ನುವ ಜಾಗತೀಕರಣದ ಬೆನ್ನೆಲುಬು ಮತ್ತು ವೈಚಾರಿಕ ಆಧಾರಸ್ತಂಭವಾದ ಪರಿಕಲ್ಪನೆಯನ್ನು ಅತ್ಯಂತ ರಭಸದಿಂದ ಮತ್ತು ಅವಿಮರ್ಶಾತ್ಮಕವಾಗಿ ನಮ್ಮ ಶಿಕ್ಷಣ ವ್ಯವಸ್ಥೆ ಮುನ್ನೆಲೆಗೆ ತಂದು ಅದನ್ನು ನಮ್ಮ ಯುವ ಮನಸ್ಸುಗಳು ಸರ್ವ ಸಮ್ಮತಿಯೊಂದಿಗೆ ಸ್ವೀಕರಿಸುವಂತೆ ಮಾಡುತ್ತಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದು ಸಾಧ್ಯವಾಗುತ್ತಿರುವುದು ನನ್ನ ದೃಷ್ಟಿಯಲ್ಲಿ ಈ ಕೆಳಕಂಡ ಕಾರಣಗಳಿಂದ;



ಆಶೀಶ್ ನಂದಿ

ಅ) ಜ್ಞಾನದ ಬಗ್ಗೆ ವಿಮರ್ಶಾತ್ಮಕವಾದ ಜಿಜ್ಞಾಸೆ ಭಾರತೀಯ ವಿಜ್ಞಾನದಲ್ಲಿ ಸಂಪೂರ್ಣ ಗೈರುಹಾಜರಾಗಿದೆ. ಏಕೆಂದರೆ ವಿಜ್ಞಾನವು value-neutral ಅಂದರೆ ಸಾಮಾಜಿಕ ಮೌಲ್ಯಗಳಿಂದ ಸ್ವತಂತ್ರವಾದುದು ಎನ್ನುವ ಸಿದ್ಧಾಂತವನ್ನು ನಮ್ಮ ವಿಜ್ಞಾನಿಗಳು ಆಳದಲ್ಲಿ ನಂಬಿದ್ದಾರೆ. ಈ ಸಿದ್ಧಾಂತವನ್ನು ಪಶ್ಚಿಮದ ಚಿಂತಕರು ಅಂತಿಮವಾಗಿ ಧೂಳೀಪಟಮಾಡಿ ಎಷ್ಟೋ ದಶಕಗಳೇ ಕಳೆದುಹೋಗಿರುವುದು ನಮ್ಮ ವಿಜ್ಞಾನಿಗಳಿಗೆ ಗೊತ್ತಿಲ್ಲ. ಅವರು ಆಶೀಸ್ ನಂದಿ, ಕ್ಲೋಡ್ ಅಲ್ವಾರೆಸ್‌ರು ದಶಕಗಳ ಹಿಂದೆ ಬರೆದದ್ದನ್ನು ಓದುವುದಿಲ್ಲ. ವಂದನಾ ಶಿವ ಬರೆದದ್ದನ್ನು ಓದುವುದಿಲ್ಲ. ಹೀಗಾಗಿ ತಂತ್ರಜ್ಞಾನದ ಮೂಲಕ ಅಭಿವೃದ್ಧಿ ತರುವುದು ಅವರಿಗೆ ಸಮಸ್ಯಾತ್ಮಕವಾಗಿ ಕಾಣುವುದೇ ಇಲ್ಲ.ಉದಾಹರಣೆಗೆ ಹಸಿರುಕ್ರಾಂತಿಯ ಹೆಸರಿನಲ್ಲಿ ಭೂಮಿ, ನೀರು, ಬೆಳೆಯಬೇಕಾದ ತಳಿಗಳು ಹಾಗೂ ಕೃಷಿಕರಾಗಿದ್ದ ಸ್ತ್ರೀ ಸಮುದಾಯಗಳು ಇವುಗಳನ್ನೆಲ್ಲ ಒಂದೇ ಏಟಿಗೆ ವಿನಾಶದ ಅಂಚಿಗೆ ತಂದಿದ್ದರ ಬಗ್ಗೆ ನಮ್ಮ ಪ್ರತಿಷ್ಠಿತ ವಿಜ್ಞಾನಿಗಳು ಬರೆಯಲಿಲ್ಲ. ಆ ಕೆಲಸವನ್ನು ವಂದನಾ ಶಿವ ಮತ್ತು ನೂರಾರು ಆ್ಯಕ್ಟಿವಿಸ್ಟ್‌ರು ಮಾಡಬೇಕಾಯಿತು. ಹಸಿರು ಕ್ರಾಂತಿಗಾಗಿ ಬಳಸಲಾದ High yield variety of crop ಎಂದು ಕರೆಯಲಾದ ತಳಿಗಳು ವಾಸ್ತವವಾಗಿ ರಾಸಾಯನಿಕ ಗೊಬ್ಬರ ಹಾಗೂ ಅತಿಶಯ ಪ್ರಮಾಣದ ನೀರಿಗೆ ಸ್ಪಂದಿಸುತ್ತ ಜೊತೆಗೆ ಭೂಮಿ ಹಾಗೂ ಪರಿಸರಕ್ಕೆ ಮಾರಕವಾಗುವ ತಳಿಗಳು ಎಂದು ಅವರು ಪರೀಕ್ಷಿಸಲಿಲ್ಲ. ಏಕೆಂದರೆ ಆ ತಳಿಗಳ ಬಗ್ಗೆ "ಜ್ಞಾನ"ವನ್ನು ಅಧಿಕೃತವಾಗಿ ನೀಡಿದವರು ಅಂತರ್‌ರಾಷ್ಟ್ರೀಯ ಕಂಪನಿಗಳಿಗೆ ವಲಸೆಹೋಗಿದ್ದ ವಿಜ್ಞಾನಿ-ಪ್ರಾಧ್ಯಾಪಕರು ಎನ್ನುವುದು ಅವರಿಗೆ ಗೊತ್ತಾಗದಿದ್ದುದಕ್ಕೆ ಕಾರಣವೆಂದರೆ "ಆಧುನಿಕ", "ಇತ್ತೀಚಿನ" ಸಂಶೋಧನೆಯೆನ್ನುವ ಹಣೆಚೀಟಿಯೊಂದಿಗೆ ಬರುವ ಎಲ್ಲವನ್ನು ಅವರು ಅವಿಮರ್ಶಾತ್ಮಕವಾಗಿ ಒಪ್ಪಿಕೊಳ್ಳುತ್ತಾರೆ. ಈಗ ಸದ್ಯಕ್ಕೆ ಕುಲಾಂತರಿ(Genetically modified) ಅಥವಾ ಸುಧಾರಿತ ಹಣ್ಣು ತರಕಾರಿ, ಹತ್ತಿ ಇವುಗಳನ್ನು ಕೃಷಿ ಹಾಗೂ ಮಾರುಕಟ್ಟೆಯಲ್ಲಿ ಬಳಕೆಗೆ ಯೋಗ್ಯವೆಂದು ಶಿಫಾರಸು ಮಾಡುತ್ತಿರುವವರು ನಮ್ಮ ವಿಜ್ಞಾನಿಗಳೇ. ಇಂಥ ಸಂದರ್ಭದಲ್ಲಿ "ಅಭಿವೃದ್ಧಿ" ಎನ್ನುವುದನ್ನು ವಿಜ್ಞಾನ ಶಿಕ್ಷಣದಲ್ಲಿ ಪರಮ ಮಂತ್ರವಾಗಿ ಬೋಧಿಸಲಾಗುತ್ತದೆ. ಒಂದು ವೇಳೆ ಅದನ್ನು ಪ್ರಶ್ನಿಸುವ ಸಂಶೋಧನೆ ನಡೆದರೂ ಅದನ್ನು ಅಂಚಿಗೆ ತಳ್ಳಲಾಗುತ್ತದೆ. ಮತ್ತು ಹೀಗೆ ಮಾಡುವುದಕ್ಕೆ ನಮ್ಮ ಸರಕಾರಗಳ ಪ್ರಿಯ ಸಖರಾದ scientocrats ಗಳೆನ್ನುವ ದುಷ್ಟರ ಪಡೆಯೇ ಇದೆ. ಇವರು ಸರಕಾರಕ್ಕೆ ವಿದೇಶೀ/ ದೇಶೀ ಬಂಡವಾಳಶಾಹಿ ಕಂಪನಿಗಳಿಗೆ ಒಟ್ಟಿಗೆ ಸಲಹೆಗಾರರಾಗಿರುತ್ತಾರೆ!

ಆ) ವಿಜ್ಞಾನದ ಈ ಬಂಡವಾಳಶಾಹಿ ಸಖ್ಯ ಅಬಾಧಿತವಾಗಿರಲೆಂದು ಸಮಾಜವಿಜ್ಞಾನ ಹಾಗೂ ಸಾಹಿತ್ಯ ವಿಷಯಗಳನ್ನು ಇವತ್ತು ನಮ್ಮ ಶಿಕ್ಷಣ ವ್ಯವಸ್ಥೆಯೇ ದುರ್ಬಲಗೊಳಿಸುತ್ತಿದೆ. ಶಿಕ್ಷಣ ನೀತಿಯನ್ನು ನಿರ್ಮಿಸುವ ಯುಜಿಸಿಯಂಥ ಸಂಸ್ಥೆಗಳು ವಿಜ್ಞಾನ, ತಂತ್ರಜ್ಞಾನ ಹಾಗೂ ಇತ್ತೀಚೆಗೆ ವಾಣಿಜ್ಯಶಾಸ್ತ್ರ ಮತ್ತು ಮ್ಯಾನೇಜ್‌ಮೆಂಟ್ ವಿಷಯಗಳಿಗೆ ಮಾತ್ರ ಆದ್ಯತೆ ನೀಡಿ ಸಮಾಜವಿಜ್ಞಾನ, ಸಾಹಿತ್ಯಗಳನ್ನು ಅನುತ್ಪಾದಕವೆಂದು ಪರಿಗಣಿಸುತ್ತವೆ. ಇಂದಿಗೂ ಈ ವಿಷಯಗಳಲ್ಲಿ ಸಂಶೋಧನೆಗೆ ದೊರೆಯುವ ಧನ ಸಹಾಯ ಪುಡಿಗಾಸಿನಷ್ಟಿದೆ. ಹೀಗಾಗಿ ಈ ವಿಷಯಗಳಲ್ಲಿ ಬರಬರುತ್ತ ದಡ್ಡರದೇ ಸಾಮ್ರಾಜ್ಯವಾಗಿದೆ. ಅಭಿವೃದ್ಧಿ ಸೇರಿದಂತೆ ಸಮಾಜದಲ್ಲಿ ಪ್ರಭಾವಿಯಾಗಿರುವ ಸಂಕಥನಗಳ ಒಂದು critique (ಸಮಗ್ರ ವೈಚಾರಿಕ ವಿಮರ್ಶೆ) ಹುಟ್ಟಬೇಕಾದದ್ದು ಸಮಾಜ ವಿಜ್ಞಾನಗಳಲ್ಲಿಯೇ. ಆದರೆ ಇದು ವಿಶ್ವವಿದ್ಯಾನಿಲಯಗಳಲ್ಲಿ ಆಗುತ್ತಿಲ್ಲ. ಅಲ್ಲಿ ಅರ್ಧ ಶತಮಾನದಷ್ಟು ಹಳೆಯದಾದ ಇಲ್ಲವೇ ಪಶ್ಚಿಮದಿಂದ ಬಂದ ಜ್ಞಾನವನ್ನೇ (ಮಾಹಿತಿಯೆನ್ನುವುದು ಹೆಚ್ಚು ಸರಿ) retail ಮಾಡಲಾಗುತ್ತಿದೆ. ದುರಂತವೆಂದರೆ ಅಧುನಿಕೋತ್ತರ ಚಿಂತನೆ ಎಂದು ಕರೆಯಲಾಗುವ



ವಂದನಾ ಶಿವ

ವೈಚಾರಿಕತೆಯ ಒಂದು ಬಹು ಮುಖ್ಯ ಭಾಗವು ಅತ್ಯಂತ ಮೂಲಭೂತವಾದ ಪ್ರಶ್ನೆಗಳನ್ನು ಕಳೆದ ಮೂರು ದಶಕಗಳಲ್ಲಿ ಎತ್ತಿರುವ ಕಾಲದಲ್ಲಿ ನಮ್ಮ ಸಮಾಜವಿಜ್ಞಾನಗಳು ಅವುಗಳಿಂದ ದೂರವೇ ಉಳಿದಿವೆ. ಈ ಕ್ಷೇತ್ರಗಳಲ್ಲಿ ಉನ್ನತ ಸಂಶೋಧನೆ ಆಗುತ್ತಿರುವುದು ವಿಶ್ವವಿದ್ಯಾನಿಲಯಗಳ ಹೊರಗಿರುವ ದೆಹಲಿಯ CDSನಂಥ ಅಥವಾ ಕಲ್ಕತ್ತಾದಲ್ಲಿನ ಸಂಸ್ಥೆಯಂಥಲ್ಲಿ. ಇಷ್ಟೇ ಪ್ರಮುಖವಾಗಿ activists ಎಂದು ಕರೆಯಲಾಗುತ್ತಿರುವ ಸಾವಿರಾರು ಮಂದಿ ದುಡಿಯುತ್ತಿರುವ ಸಂಸ್ಥೆಗಳಲ್ಲಿ. ಆದರೆ ಅಲ್ಲಿಂದ ಬರುತ್ತಿರುವ ಚಿಂತನೆಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಆಸ್ಪದವಿಲ್ಲ.

ಇ) ಇಂಜಿನಿಯರಿಂಗ್, ತಂತ್ರಜ್ಞಾನ ಈ ಕ್ಷೇತ್ರದಲ್ಲಿ ಶಿಕ್ಷಣ ಪಡೆಯುವವರಿಗೆ ಸಾಹಿತ್ಯ, ಸಮಾಜವಿಜ್ಞಾನಿಗಳ ಸಂಪರ್ಕವೇ ಇರುವುದಿಲ್ಲ. 'ಅಭಿವೃದ್ಧಿ'ಯ ಪರಿಕಲ್ಪನೆಯನ್ನು ವಿಮರ್ಶಿಸುವ critical enquiry ಅವರ ಕಲಿಕೆಯ ಭಾಗವಾಗಿರುವುದಿಲ್ಲ.

ಈ) ಅಭಿವೃದ್ಧಿ ಕುರಿತು ಜಿಜ್ಞಾಸೆ ನಡೆಯುತ್ತಿರುವುದು ಸಾಹಿತ್ಯ ವಿಭಾಗಗಳಲ್ಲಿ. ಇಂಗ್ಲಿಷ್ ಸಾಹಿತ್ಯ ಅಧ್ಯಯನದಲ್ಲಿ ಹತ್ತು ಹದಿನೈದು ವರ್ಷಗಳಿಂದ cultural studies, literary theory ಇವುಗಳು ಸೇರಿಕೊಂಡಿದ್ದರಿಂದ ಅಲ್ಲಿ ಅನಿವಾರ್ಯವಾಗಿಯೆ ಯುರೋಪಿನ ಆಧುನಿಕತೆಯ ಪ್ರಸ್ಥಾನದ ಬಗ್ಗೆ 17ನೇ ಶತಮಾನದ ಕೊನೇಭಾಗದಿಂದ ಆರಂಭವಾದ ಎನ್‌ಲೈಟನ್‌ಮೆಂಟ್ ಪರಂಪರೆ, ಅದು ಒಂದೇ ಬಗೆಯ ಜ್ಞಾನ ವಿಜ್ಞಾನವನ್ನು ಬಲಿಷ್ಠಗೊಳಿಸಿದ್ದು ಇವೆಲ್ಲವುಗಳ ಚರ್ಚೆಯಾಗುತ್ತವೆ. ಅಲ್ಲದೇ ಅರುಂಧತಿ ರಾಯ್, ವಂದನಾ ಶಿವ, ಆಶೀಸ್ ನಂದಿ, ಫೂಕೋ ಇವರ ಬರಹದ ಚರ್ಚೆ ಅನಿವಾರ್ಯವಾಗಿಯೇ ಯುರೋಪಿನ ಕೇಂದ್ರಿತ 'ಅಭಿವೃದ್ಧಿ'ಯ ಪರಿಕಲ್ಪನೆಯ ನಿರಚನವೇ ಆಗಿದೆ. ಸಾಂಸ್ಕೃತಿಕ ಅಧ್ಯಯನದ ಪ್ರವೇಶದಿಂದಾಗಿ ಸಮಕಾಲೀನ ಪ್ರಶ್ನೆಗಳು ತರಗತಿಗಳನ್ನು ಪ್ರವೇಶಿಸಿವೆ. ಕನ್ನಡ ಸಾಹಿತ್ಯ ವಿಭಾಗಗಳು ಈ ದಿಶೆಯಲ್ಲಿ ಪ್ರಯತ್ನ ಮಾಡುತ್ತಿವೆಯೆಂದುಕೊಂಡಿದ್ದೇನೆ.... ಒಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಈ ಪ್ಯಾರಾವನ್ನು ಓದಿದ ಅನೇಕರು ಇದೇನಿದು ಇಂಗ್ಲಿಷ್‌ನಲ್ಲಿ ಆಧುನಿಕ ಕ್ಷೇತ್ರದ ಯುರೋಪಿನ ಸಿದ್ಧಾಂತಗಳ ಸಖ್ಯದಲ್ಲಿ "ಅಭಿವೃದ್ಧಿ"ಯ ವಿಮರ್ಶೆ ಸಾಧ್ಯವೇ? ಇಂಗ್ಲಿಷ್ ಪ್ರಾಧ್ಯಾಪಕ ಚೆನ್ನಿಯವರು ಹಿಂಬಾಗಿಲಿನಿಂದ ತಾವೇ ವಿಮರ್ಶಿಸಿದ ಯುರೋಪಿನ ಜ್ಞಾನವನ್ನು ಒಳ ತರುತ್ತಿದ್ದಾರೆಯೇ ಎಂದು ಕೇಳಬಹುದು. ನಾನು ಮಾತನಾಡುತ್ತಿರುವುದು ಯುರೋಪಿನ ಆಕ್ರಾಮಕ ಜ್ಞಾನಮಾರ್ಗಗಳನ್ನು, ಅವುಗಳು ಬೆಂಬಲಿಸಿದ ವಸಾಹತುಶಾಹಿ ಮತ್ತು ವಿಶ್ವದ ಬಹುಸಂಖ್ಯಾತ ಸಮುದಾಯಗಳನ್ನು ನಾಶಮಾಡುತ್ತಿರುವ ಒಂದು ಬಗೆಯ ವಿಜ್ಞಾನವನ್ನು ಬುಡದಿಂದಲೇ ಅಲ್ಲಾಡಿಸಿ, ಅವುಗಳ ಮನುಷ್ಯ ವಿರೋಧಿ ಗುಣವನ್ನು ತೀವ್ರವಾಗಿ, ನಿಖರವಾಗಿ ವಿರೋಧಿಸುತ್ತಿರು-ಕಳೆದ ನಾಲ್ಕು ದಶಕಗಳಲ್ಲಿ ಹುಟ್ಟಿರುವ-ಜ್ಞಾನದ ಬಗ್ಗೆ. ಮುಖ್ಯವೆಂದರೆ ಇವು ಗಾಂಧಿ, ಲೋಹಿಯಾ, ಟಾಗೋರ್, ಅಂಬೇಡ್ಕರ್ ಇವರ ಸಿದ್ಧಾಂತಗಳು ಮಾಡಿದ ವಿಮರ್ಶೆಯನ್ನು ಬೆಂಬಲಿಸುವಂಥವು. ಆದರೆ ಈ ಪ್ರಸ್ಥಾನಗಳು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಭಾವಿಯಾಗಿಲ್ಲ. ಹೀಗಾಗಿ ನಮ್ಮ ಒಟ್ಟು ಶಿಕ್ಷಣ ವ್ಯವಸ್ಥೆ ಅಭಿವೃದ್ಧಿಯ ಏಕಮುಖೀ ಕಲ್ಪನೆಯನ್ನೇ ತಮ್ಮ ವಿಜ್ಞಾನ, ಸಮಾಜವಿಜ್ಞಾನಗಳಿಂದ ಬೆಂಬಲಿಸುವ ಹರಿಕಥಾ ದಾಸರನ್ನೇ ಅಪಾರ ಸಂಖ್ಯೆಯಲ್ಲಿ ಉತ್ಪಾದಿಸುತ್ತಿದೆ.

ಕಾಗೋಡು ಸತ್ಯಾಗ್ರಹದ ಮಾರ್ಗದಲ್ಲಿ ಬೆಕ್ಕು!



ಹೋದ ವರ್ಷ ನಡೆದ ಘಟನೆ. ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಕಾಗೋಡು ಸತ್ಯಾಗ್ರಹಕ್ಕೆ ೬೦ ವರ್ಷ ತುಂಬಿದ ನೆನಪಿನ ಸಮಾರಂಭವನ್ನು ಸಾಗರದಲ್ಲಿ ಆಯೋಜಿಸಿತ್ತು. ಶಿವಮೊಗ್ಗದ ಡಿ.ಎಸ್.ನಾಗಭೂಷಣರ ಮನೆಯಿಂದ ಅವರು, ಶ್ರೀಮತಿ ಸವಿತಾ ನಾಗಭೂಷಣ, ಅತಿಥಿಗಳಾಗಿ ನಾನು, ಕೆ.ವಿ.ನಾರಾಯಣ, ಕಡಿದಾಳು ಶಾಮಣ್ಣ, ಮತ್ತು ಅವರ ಶ್ರೀಮತಿ ಶ್ರೀದೇವಿಯವರು ಎರಡು ಕಾರುಗಳಲ್ಲಿ ಹೊರಟೆವು. ತಮ್ಮ ಕಾರನ್ನು ಸವಿತಾ ಚಾಲು ಮಾಡುತ್ತಿದ್ದಂತೆ ಅವರ ಮನೆಯಲ್ಲಿದ್ದ ನಾಲ್ಕಾರು ಬೆಕ್ಕಿನ ಮರಿಗಳಲ್ಲೊಂದು ಚಂಗನೆ ಅವರ ಕಾರಿನಡಿಗೆ ಓಡಿ ಕಣ್ಣಿಗೆ ಕಾಣದಂತೆ ಕುಳಿತಿತು. ಕೂಗಿ ಕರೆದರೂ, ಗದರಿದರೂ ಜಪ್ಪಯ್ಯ ಅನ್ನಲಿಲ್ಲ! ಕಡ್ಡಿಯಿಂದ ಓಡಿಸಲು ಹೋದರೆ ಚಕ್ರದ ಮೇಲೇರಿ ಹೋಗಿ ಎಲ್ಲೋ ಒಳಗೆ ಮಾಯವಾಯಿತು! ಹೊತ್ತು ಮೀರುತ್ತಿದ್ದುದರಿಂದ ಮತ್ತು ಅದರ ಸದ್ದಿಲ್ಲದುದರಿಂದ ಸವಿತಾ ಕಾರು ನಡೆಸಿಯೇಬಿಟ್ಟರು. ಹಿಂದಿನ ಕಾರಲ್ಲಿದ್ದ ನಾನು, ಶಾಮಣ್ಣ ಮತ್ತು ನಾರಾಯಣರು ಬೆಕ್ಕಿನಮರಿ ಯಾವಾಗ ಪುಳಕ್ಕನೆ ಬೀಳುತ್ತದೋ ಎಂದು ಗಾಬರಿಯಿಂದ ಮುಂದಿನ ಕಾರಿನ ಹಿಂಬದಿಯನ್ನೇ ನೋಡುತ್ತಿದ್ದೆವು. ನಮ್ಮೆರಡು ಕಾರುಗಳೂ ಸಾಗರದತ್ತ ನಡೆದಿದ್ದವು.

ಶಾಮಣ್ಣರು ತಮ್ಮ ಕಾರು ನಡೆಸುತ್ತಾ 'ಮಾರಾಯ್ರಾ ನಮ್ದೊಂದ್ ನಾಯ್ಮರಿ ಹೀಂಗೆ ಮಾಡ್ತಿತ್ತು, ನಾನು ಮೂಡಿಗೆರೆಗೆ ಹೊಂಟೆ ಅಂದ್ರೆ ಕಾರ್ ಕೆಳಗೆ ಬ್ಲೇಡ್ ಹತ್ರ ಬಂದು ಕುಂತ್ ಬಿಡದು, ಜಪ್ಪಯ್ಯ ಅಂದ್ರು ಇಳಿತಿರ್ಲಿಲ್ಲ. ಏನಾದ್ರೂ ಹಾಳಾಗ್ಲಿ ಅಂತ ಗಾಡಿ ತೆಗ್ದೆ, ಮಗಂದು ಮೂಡ್ಗೆರೆತಂಕ ಬಂದೇಬುಡ್ತು, ಎರಡ್ಮೂರ್ ಸಲ ಹಿಂಗೆ ಮಾಡ್ತು, ದೊಡ್ಡಾದ್ ಮೇಲೆ ಗಾಡಿ ಒಳಗೆನೆ ಕೂರಿಸ್ಕಂಬರ್ತಿದ್ದೆ' ಎಂದು ತಮ್ಮ ಹಳೆಯ ಅನುಭವ ಹೇಳತೊಡಗಿದರು. ನಾವು ಈ ಬೆಕ್ಕಿನ ಮರಿಯೂ ಹಾಗೇ ಸಾಗರದಲ್ಲಿ ಹೊರ ಧುಮುಕಬಹುದು ಎಂದು ಸ್ವಲ್ಪ ಧೈರ್ಯ ಬಂತಾದರೂ ಆತಂಕ ಇದ್ದೇ ಇತ್ತು. ಸುಮಾರು ಏಳೆಂಟು ಮೈಲಿ ಹೋದರೂ ಕಾರು ಕೆಳಗಿನ ಬೆಕ್ಕಿನ ಮರಿ ಬೀಳಲೂ ಇಲ್ಲ ಕಣ್ಣಿಗೆ ಕಾಣಲೂ ಇಲ್ಲ.

ಶಾಮಣ್ಣ 'ಬಡ್ಡಿ ಮಗಂದು ಉಗರಲ್ಲಿ ಹಾಕಿ ಬಿಗ್ಯಾಗಿ ಕಚ್ಕಂಡಿರ್ತದೆ ಸುಲಭನಾಗಿ ಬೀಳೊ ಪೈಕಿ ಅಲ್ಲ' ಎಂದು ಹೇಳುತ್ತಾ ನಾರಾಯಣರಿಗೆ 'ನೋಡಿ ನಾಯಿಗಳು ಎಂಥಾ ಸಣ್ಣಮಕ್ಕಳಾದ್ರೂ ಸೈತ ಏನೂ ಮಾಡಕುಲ್ಲ, ಅದೇ ಬೆಕ್ಕುಗಳು ಪರಚ್ತವೆ, ಕಚ್ತವೆ ಇದ್ಯಾಕಿರಬೌದು? ಈ ಎರಡರಲ್ಲಿ ಮನುಷ್ಯರನ್ನು ಹೆಚ್ಗೆ ಹಚ್ಗೊಳ್ಳೊದು ಯಾವುದು?' ಎಂದು ಪ್ರಶ್ನೆ ಹಾಕಿದರು.

'ನಾಯಿ ಹೆಚ್ಚು ನಂಬಿಕಸ್ತ ಪ್ರಾಣಿ, ಈ ಬೆಕ್ಕುಗಳು ಇದಾವಲ್ಲ ಕೆಲವು ಸಲ ಮನೆ ಬಿಟ್ಟು ಹೊರಟುಬಿಡ್ತವೆ, ಆದ್ರೆ ನಾಯಿಗಳು ಹಾಗಲ್ಲ ಅವು ಒಂದ್ಸಲ ನಂಬಿದರೆ ಬಿಟ್ ಹೋಗೋದು ಅಪರೂಪ' ಎಂದು ನಾರಾಯಣರು ಹೇಳುತ್ತಿರಬೇಕಾದರೆ ಒಂದು ಪಕ್ಷಿ ಕೂಗು ಕೇಳಿಸಿತು. ತಕ್ಷಣ ಶಾಮಣ್ಣರು ನಾಯಿ-ಬೆಕ್ಕುಗಳಿಗೆ ಬದಲಾಗಿ ಪಕ್ಷಿ ಕುರಿತು ಬಾಯಾಡಿಸತೊಡಗಿದರು.

'ನೋಡಿ ಇದು ಗುಮ್ಮಾಡಲ ಹಕ್ಕಿ ಅಂತ. ಬೇರೆಲ್ಲಾ ಹಕ್ಕಿಗಿಂತ್ಲುವೆ ಒಳ್ಳೆ ಟೇಷ್ಟು ನನ್ಮಗಂದು......' ಎಂದು ಹೇಳುವಷ್ಟರಲ್ಲಿ ನಮಗಿಂತ ಸುಮಾರು ಇಪ್ಪತ್ತೈದು ಅಡಿ ಮುಂದೆ ಹೋಗುತ್ತಿದ್ದ ಸವಿತಾರ ಕಾರಿನ ಹೊಗೆಕೊಳವೆ ತಾವಿಂದ ಪುಳಕ್ಕನೆ ವಸ್ತುವೊಂದು ಬಿತ್ತು. ನೋಡಿದರೆ ಬೆಕ್ಕಿನಮರಿ!! ನಾವು ಮೂರೂ ಜನ ಒಟ್ಟಿಗೆ ಅರೆರೆರೆ! ಎಂದೆವು. ಶಾಮಣ್ಣರು ಗಕ್ಕನೆ ಬ್ರೇಕು ಹಾಕಿದ್ದರಿಂದ ಕಾರು ಕಿಚ್ ಕಿಚ್ ಕಿಚ್ ಶಬ್ದದೊಂದಿಗೆ ನಿಂತಿತು. ಬೆಕ್ಕಿನಮರಿ ಎಡಗಡೆಯ ಕಾಡಿಗೆ ಓಡಿ ಹೋಯಿತು.

ನಾನು ಇಳಿದು ಹೋಗಿ ಹುಡುಕಿದೆ, ನಾಲ್ಕೈದು ನಿಮಿಷದ ನಂತರ ಮರದ ಬುಡದಲ್ಲಿ ಮೈ ಪುಕ್ಕವನ್ನೆಲ್ಲಾ ನಿಮಿರಿಸಿಕೊಂಡು ಬೆದರಿದ ಬೆಕ್ಕಿನಮರಿ ಕುಂತಿತ್ತು. ಎತ್ತಿ ತಂದು ಕಾರಿನಲ್ಲಿ ಹಾಕಿಕೊಂಡೆವು.

ಇದಾವುದರ ಪರಿವೆಯೂ ಇಲ್ಲದ ಸವಿತಾರ ಕಾರು ಮುಂದೆ ಹೋಗಿತ್ತು. ನಮ್ಮ ಕಾರು ಹೊರಟ ನಂತರ ಆ ಬೆಕ್ಕಿನ ಅದೃಷ್ಟದ ಬಗ್ಗೆ ಮಾತು ಸಾಗಿತು. ಅದು ಕಾರಿನಿಂದ ಸ್ವಲ್ಪ ಬಲಕ್ಕೆ ಬಿದ್ದಿದ್ದರೆ ಅದರ ಹಿಂಬದಿ ಚಕ್ರಕ್ಕೇ ಸಿಕ್ಕಿಕೊಳ್ಳುತ್ತಿತ್ತು. ಬಿದ್ದು ಬಲಗಡೆ ಹೋಗಿದ್ದರೆ ಅಲ್ಲಿ ಬೇರೆ ವಾಹನ ಬಂದಿದ್ದರೂ ಅಪಾಯವಿತ್ತು. ಅಲ್ಲದೆ ನಮ್ಮ ಮತ್ತು ಅವರ ಕಾರಿನ ನಡುವೆ ಬೇರೆ ವಾಹನವಿದ್ದರೂ ಅದಕ್ಕೆ ಅಪಾಯವಿತ್ತು. ಇದನ್ನೆಲ್ಲಾ ದಾಟಿ ಉಳಿದುಕೊಂಡ ಬೆಕ್ಕಿನಮರಿಯ ಬಗ್ಗೆ ಎಲ್ಲರೂ ಹೆಮ್ಮೆ ಪಟ್ಟೆವು.


ಸಾಗರದಲ್ಲಿ ಇಳಿದ ತಕ್ಷಣ ಸವಿತಾರಿಗೆ ವಿಷಯ ತಿಳಿಸಿದೆವು. ಅವರೂ, ಶ್ರೀದೇವಿಯವರೂ ಸೇರಿ ಎಲ್ಲಿಯೋ ಒಂದು ಚಟಾಕು ಹಾಲು ತಂದು ಗಾಬರಿಯಾಗಿದ್ದ ಬೆಕ್ಕಿನ ಮರಿಗೆ ಕುಡಿಸಿದರು. ಸುಧಾರಿಸಿಕೊಂಡ ಅದು ಸಮಾರಂಭ ಮುಗಿಯುವವರೆಗೆ ಕಾರಿನಲ್ಲಿ ವಿಶ್ರಮಿಸಿಕೊಂಡಿತ್ತು. ನಂತರ ಶಾಮಣ್ಣರು ಸಾಗರದ ಸ್ನೇಹಿತರೊಬ್ಬರಿಗೆ ಆ ಅದೃಷ್ಟದ ಬೆಕ್ಕಿನ ಮರಿಯನ್ನು 'ದಾನ'ವಾಗಿ ನೀಡಿದರು.

-ಮಲ್ಲಿಕಾರ್ಜುನ ಹೊಸಪಾಳ್ಯ

ಕಾಡುಜನರ ಹಾಡು-ಪಾಡು: ಒಂದು ಆತ್ಮ ನಿವೇದನೆ

ನಮ್ಮ ರಾಜಕಾರಣಿಗಳ ಹಪಾಹಪಿಗೆ ಇನ್ನೊಂದು ಹೆಸರಿನಂತಿರುವ 'ಅಭಿವೃದ್ಧಿ'ಯ ದವಡೆಗೆ ಸಿಕ್ಕಿ ಅಳಿವಿನ ಅಂಚನ್ನು ಮುಟ್ಟಿರುವ ಅಪರೂಪದ ಅನೇಕ ಪ್ರಾಣಿ ಮತ್ತು ಸಸ್ಯ ಪ್ರಭೇಧಗಳ ಸಂರಕ್ಷಣೆಗಾಗಿ ನಮ್ಮ ಪಶ್ಚಿಮ ಘಟ್ಟಗಳ ಕೆಲವು ತಾಣಗಳನ್ನು 'ಪರಂಪರೆ'ಯ ಪಟ್ಟಿಗೆ ಸೇರಿಸುವ ವಿಶ್ವಸಂಸ್ಥೆಯ ಪ್ರಸ್ತಾವವನ್ನು ನಮ್ಮ ರಾಜ್ಯ ಸರ್ಕಾರ 'ಜನರ ಹಿತಾಸಕ್ತಿ'ಗಳ ಹೆಸರಿನಲ್ಲಿ ವಿರೋಧಿಸುತ್ತಿದೆ. ಈ ಬಗ್ಗೆ ಯಾವ ವಿರೋಧ ಪಕ್ಷದ ಸೊಲ್ಲೂ ಇಲ್ಲ! ಇನ್ನು ಕೊಡಗಿನ ಶಾಸಕರೂ, ನಮ್ಮ ವಿಧಾನಸಭಾಧ್ಯಕ್ಷರೂ ಆದ ಕೆ.ಜಿ. ಬೋಪಯ್ಯನವರು 'ಅರಣ್ಯವನ್ನು ಜನರಿಗೆ ಬಿಡಿ. ಅವರು ಕಾಪಾಡುತ್ತಾರೆ' ಎಂದು ಅಪ್ಪಣೆ ಕೊಟ್ಟಿದ್ದಾರೆ. ಇವರ ಪ್ರಕಾರ ಜನರೆಂದರೆ ರೆಸಾರ್ಟ್ ಉದ್ಯಮಿಗಳು, ಪ್ಲಾಂಟೇಷನ್ ಮಾಲೀಕರು ಮತ್ತು ಒಡ್ಡು-ನಾಲೆಗಳ ಕಾಮಗಾರಿ ಕಂಟ್ರಾಕ್ಟರುಗಳೇ ಇರಬಹುದು!

ನಮ್ಮ ಬೆಟ್ಟ-ಕಾಡು, ಅಲ್ಲಿನ ಸಂಪನ್ಮೂಲಗಳು, ಜನ ಮತ್ತು ಬದುಕುಗಳ ಬಗ್ಗೆ ವ್ಯವಸ್ಥೆಯ ಧೋರಣೆ ಎಷ್ಟು ನಿಷ್ಕರುಣ ಮತ್ತು ಸ್ವಾರ್ಥಮಯವಾಗಿದೆ ಎಂಬುದು ಝಾರ್ಖಂಡ್, ಒರಿಸ್ಸಾಗಳ ಇಂದಿನ ಆತಂಕಕಾರಿ ವಿದ್ಯಮಾನಗಳು ಸೂಚಿಸುತ್ತಿವೆ. ಇನ್ನು ನಮ್ಮಲ್ಲೇ, ಕೆಲವು ವರ್ಷಗಳ ಹಿಂದಷ್ಟೇ ಕಾಡುಗಳ್ಳ ವೀರಪ್ಪನ್‌ನ್ನು ವರ್ಷಗಟ್ಟಲೇ ಹಿಡಿಯಲಾಗದ ತನ್ನ ವೈಫಲ್ಯಕ್ಕಾಗಿ ಸರ್ಕಾರ ತನ್ನ ಪೋಲೀಸ್ ಪಡೆಯ ಮೂಲಕ ಕಾಡಿನ ಜನರನ್ನು ಹಿಂಸಿಸಿ ಸೇಡು ತೀರಿಸಿಕೊಳ್ಳುತ್ತಿದ್ದ ರೀತಿ ವೀರಪ್ಪನ್ ಹತ್ಯೆಯ ನಂತರವೂ ಅಲ್ಲಿನ ಜನರ ನೆನಪಿನಲ್ಲಿ ಮತ್ತು ವಿಚಾರಣಾ ಆಯೋಗಗಳ ವರದಿಗಳಲ್ಲಿ ಇನ್ನೂ ಹಸಿಯಾಗಿಯೇ ಇದೆ. ಈ ಹಿನ್ನೆಲೆಯಲ್ಲೇ ರಾಜ್ಯದ ಪೋಲೀಸ್ ಮಹಾ ನಿರ್ದೇಶಕರಾಗಿ ಶ್ರೀಮಾನ್ ಶಂಕರ ಬಿದರಿಯವರನ್ನು ನ್ಯಾಯಾಲಯ ಅನರ್ಹಗೊಳಿಸಿದಾಗ ಪರೋಕ್ಷವಾಗಿ ನ್ಯಾಯ ದೊರೆತ ನಿಟ್ಟುಸಿರು ಬಿಟ್ಟ ಹಲವರಲ್ಲಿ ಒಬ್ಬರಾದ ಸೋಲಿಗ ಜಡೇಯ ಗೌಡ ಪತ್ರಿಕೆಗೆ ತನ್ನ ನಿಟ್ಟುಸಿರನ್ನೇ ಬರಹವನ್ನಾಗಿ ಮಾಡಿ ಕಳಿಸಿದ್ದರು. ಅದನ್ನಿಲ್ಲಿ ಪ್ರಕಟಿಸುತ್ತಿದ್ದೇವೆ.-ಸಂ.



ನಮ್ಮ ಪೋಡು ಬಿಳಿಗಿರಿರಂಗನ ಬೆಟ್ಟದಿಂದ ೧೬ಕಿ.ಮೀ ದೂರದಲ್ಲಿರುವ ಕನ್ನೇರಿ ಕಾಲೋನಿ. ಇದು ಸುಮಾರು ೧೫೦ ಕುಟುಂಬಗಳ ಸಣ್ಣ ವಸತಿ. ೬೦೦ ಜನಸಂಖ್ಯೆ ಇದ್ದು ರಾಗಿ, ಜೋಳ, ಅವರೆ, ತೊಗರಿ, ಕುಂಬಳ, ಸೌತೆ ಎಡ್ಡ (ಹುರಿದು ಪುರಿ ರೀತಿ ಮಾಡಿ ಜೇನುತುಪ್ಪದೊಡನೆ ತಿನ್ನುವ ಖಾದ್ಯ) ಅಲ್ಪಸ್ವಲ್ಪ ಕಾಫಿ ಬೆಳೆಯುತ್ತೇವೆ. ಹೊಸ ಬೆಳೆಯ ಸಂದರ್ಭದಲ್ಲಿ ಊರವರೆಲ್ಲಾ ಸೇರಿ ಸಂಭ್ರಮದಿಂದ ಹಾಡಿ ಕುಣಿದು ರೊಟ್ಟಿ ಹಬ್ಬ ಆಚರಿಸುತ್ತೇವೆ. ಮಾರಿ ಹಬ್ಬವನ್ನೂ ಆಚರಿಸುತ್ತೇವೆ. ಈ ಕನ್ನೇರಿ ಕಾಲೋನಿಯಲ್ಲಿ ಪದವಿ ಮಾಡಿರುವವರು ಒಬ್ಬರೂ ಇಬ್ಬರೂ ಇರಬಹುದು. ಈಗ ನಮ್ಮ ಮಕ್ಕಳು ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ(ವಿ.ಜಿ.ಕೆ.ಕೆ.)ದ ಶಾಲೆಗೆ ಓದಲು ಹೋಗುತ್ತಾರೆ.

ಇಂಥ ನಮ್ಮೂರಿನಲ್ಲಿ ಒಂದು ದಿನ ಪೋಲೀಸ್ ಬೂಟು ಶಬ್ದ ಮಾಡಲಾರಂಭಿಸುತ್ತಧೆ. ಆನಂತರ ಆಧುನಿಕ ಶಸ್ತ್ರಾಸ್ತ್ರಗಳೆಲ್ಲವೂ ದಿನಾಲು ನೋಡಲು ಸಿಗುತ್ತದೆ. ಇದಕ್ಕೆಲ್ಲಾ ಕಾರಣ ವೀರಪ್ಪನ್! ಮತ್ತು ಅನನ್ನು ಹಿಡಿಯಲು ಬಂದ ವಿಶೇಷ ಪೋಲೀಸ್ ಪಡೆ(ಎಸ್.ಟಿ.ಎಫ್.). ಇದಷ್ಟೆ ಆಗಿದ್ದರೆ ನಮಗೂ ಅಭ್ಯಾಸವಾಗುತ್ತಿತ್ತು. ನಮಗೆ ವೀರಪ್ಪನ್‌ನಿಂದ ತೊಂದರೆ ಆಗಿದ್ದು ಕಮ್ಮಿ. ಆದರೆ ಮನಸ್ಸಿಗೆ ಆಳವಾದ ಗಾಯವಾಗಿದ್ದು ಎಸ್.ಟಿ.ಎಫ್. ಪೊಲೀಸರಿಂದ. ಅಮಾಯಕರನ್ನು ಸಂಶಯದಿಂದ ನೋಡಿ ಕಣ್ಣಿಗೆ ಬಟ್ಟೆ ಕಟ್ಟಿ ಕರೆದುಕೊಂಡು ಹೋಗಿ ಬೂಟು ಕಾಲಲ್ಲಿ ಒದ್ದು ಹಿಂಸೆ ನೀಡುವ, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗುವ ಸುದ್ದಿ ಹರಡಿದಾಗ. ಆದರೆ ಇದು ನನ್ನ ಪಾಲಿಗೆ ಬಹುಕಾಲ ಬರಿ ಸುದ್ದಿಯಾಗಿ ಉಳಿಯಲಿಲ್ಲ. ಒಂದು ದಿನ ಅವರು ನನ್ನನ್ನೂ ಎಳೆದುಕೊಂಡು ಹೋದರು. ಅದರ ಕಥೆ ಇಲ್ಲಿದೆ.

ನನ್ನ ಹೆಸರು ಜಡೇಯಗೌಡ ನಮ್ಮೂರಿನಲ್ಲಿ ಇನ್ನೊಬ್ಬ ಜಡೆಯನಿದ್ದ, ಅವನನ್ನು ಪುಸಲಾಯಿಸಿ ಪೊಲೀಸ್‌ನವರು ಬೇಹುಗಾರಿಕೆಗೆ ಬಳಸಿಕೊಳ್ಳುತ್ತಿದ್ದರು. ಪೋಲೀಸ್‌ರ ಏಟಿಗೆ ಹೆದರಿ ವೀರಪ್ಪನ್‌ಗೆ ಸಹಾಯ ಮಾಡುತ್ತಿದ್ದಾರೆಂದು ಈತ ನನ್ನ, ಕಮಲಾಕರ, ನರಿಸಿದ್ದೇಗೌಡ, ಕೋಣೂರೇಗೌಡ, ಜಡೇಸ್ವಾಮಿ -ಈ ಹೆಸರುಗಳನ್ನು ಪೋಲೀಸರಿಗೆ ನೀಡಿದ. ಇದರಲ್ಲಿ ಕೋಣುರೇಗೌಡ





ಗ್ರಾಮಪಂಚಾಯ್ತಿ ಸದಸ್ಯ. ಹೀಗೆ ಒಂದು ಪಟ್ಟಿ ಮಾಡಿಕೊಂಡ ಎಸ್.ಟಿ.ಎಫ್.ನವರು ವಿ.ಜಿ.ಕೆ.ಕೆ.ಯ ಸುದರ್ಶನ್‌ರ ಜೊತೆ ಮಾತಾಡಿ 'ಇವರನ್ನೆಲ್ಲಾ ಕರೆಯಿಸಿ ಬುದ್ಧಿವಾದ ಹೇಳಿ' ಎಂದು ಅವರ ಮೂಲಕ 'ಸಭೆ'ಗೆ ಕರೆ ನೀಡಿದರು. ಆದರೆ ಈ ಸಭೆಗೆ ನಾವು ಆರು ಜನ ಮರಳು ಕಡಿವು ಕೆರೆ ಬಳಿ ನಡೆದುಕೊಂಡು ಹೋಗುತ್ತಿರುವಾಗ ಅಲ್ಲಿಗೆ ಜೀಪಲ್ಲಿ ಬಂದ ಪೋಲೀಸರು 'ನಿನ್ನ ಹೆಸರು ಪಟ್ಟಿಯಲ್ಲಿದೆ' ಎಂದು ನನ್ನನ್ನು ಜೀಪ್ ಹತ್ತಿಸಿದರು. ಆ ಜೀಪಲ್ಲಿ ಈಗಾಗಲೇ ಕೋಣೂರೆಗೌಡ ಕೂತಿದ್ದ.

ಅಲ್ಲಿಂದ ನಮ್ಮಿಬ್ಬರನ್ನು P.W.D ಗೆಸ್ಟ್ ಹೌಸ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಅರ್ಧಗಂಟೆ ನಿಲ್ಲಿಸಿದರು. ಅಲ್ಲಿಂದ ಯಳಂದೂರಿಗೆ ಹೋಗುವ ದಾರಿಯಲ್ಲಿ ಪೊರಾಣಿ ಪೋಡ್ ಗೇಟ್‌ನಲ್ಲಿ ಕಾಡಲ್ಲಿ ಮತ್ತೆ ಅರ್ಧಗಂಟೆ ನಿಲ್ಲಿಸಿದರು. ಪುನಃ ಅಲ್ಲಿಂದ ಕೊಳ್ಳೇಗಾಲ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಅಲ್ಲಿ ಮತ್ತೆ ನಮ್ಮನ್ನು ನಿಲ್ಲಿಸಿದಾಗ ನಾವು ಭಯಭೀತರಾಗಿ ಒಂದು ಬಾರಿ 'ಮೀಟಿಂಗ್‌ಗೆ ಎಂದು ಹೇಳಿ ಇಲ್ಲಿ ಕೂಡಿಸಿದಿರಲ್ಲಾ' ಎಂದಾಗ 'ಏಯ್ ಸುಮ್ನೆ ಕೂತ್ಕೊಳೊ' ಎನ್ನುತ್ತಾ ನಮ್ಮನ್ನೆಲ್ಲ ಅರಣ್ಯದ ಬುರುಡೆ ಬಂಗ್ಲೆಗೆ ಕರೆದೊಯ್ದರು. ಮಧುವನಹಳ್ಳಿಯ ಬಳಿ ನಮ್ಮ ಕಣ್ಣಿಗೆ ಬಟ್ಟೆ ಕಟ್ಟಿದರು.

ಬುರುಡೆ ಬಳಿ ನಮ್ಮನ್ನು ಇಳಿಸಿ ಒಮ್ಮೆಗೇ ಪ್ರಶ್ನೆ ಮೇಲೆ ಪ್ರಶ್ನೆ ಕೇಳುತ್ತಾ ಲಾಠಿ ಬೀಸಲಾರಂಭಿಸಿದರು. ಕೆಳಕ್ಕೆ ಬಿದ್ದಾಗ ಬೂಟು ಕಾಲಿನಿಂದ ಜಗ್ಗಿ ಹಿಡಿದು ಬೆನ್ನಿಗೆ, ಅಂಡಿಗೆ ಒಂದೇ ಸಮನೆ ಬಾರಿಸತೊಡಗಿದರು. 'ವೀರಪ್ಪನ್ ನೋಡಿದ್ಯಾ?' ಎಂಬ ಪ್ರಶ್ನೆ ಪದೇ ಪದೇ ಕೇಳುತ್ತಿದ್ದರು. ನಾನು ನೋಡಿಲ್ಲ ಎಂದಾಗ ಬಾಯಿಗೆ ಭಾರವಾದ ವಸ್ತು ಬಿದ್ದಂತಾಯಿತು. ರಕ್ತ ಚೊಳ್ಳನೆ ಹರಿಯಲು ಪ್ರಾರಂಭಿಸಿತು. ನಮ್ಮ ಕಾಲನ್ನು ಉಲ್ಟಾ ಹಿಡಿದು ತಲೆಕೆಳಕಾದ ನಮಗೆ ಮತ್ತೆ ಒಂದೇ ಸಮನೆ ಹೊಡೆಯಲು ಪ್ರಾರಂಭಿಸಿದರು. ಒಟ್ಟು ನಾಲ್ಕು ದಿನ ಹೀಗೆ ದೌಜನ್ಯ ಸಾಗಿತು. ಇದರ ಮಧ್ಯೆ ನಮ್ಮೂರಿನ ಹೆಣ್ಣುಗಳ ಬಗ್ಗೆ ಅಸಹ್ಯದ ಮಾತು ಹೇಳುತ್ತಲೇ ಇದ್ದರು. ನಾಲ್ಕು ದಿನ ಈ ಹಿಂಸೆ ಮುಂದುವರೆಯಿತು.

ನಮಗೆ ದಿನಕ್ಕೆ ಒಂದು ಸಲ ಅನ್ನ ಸಾಂಬಾರು ಕೊಡುತ್ತಿದ್ದರು, ಕತ್ತಿಗೆ ಚೈನು ಕಾಲಿಗೂ ಚೈನು ಕಟ್ಟಿ ಹಿಂಸಿಸುತ್ತಿದ್ದರು. ಕಣ್ಣಿಗೆ ಕಟ್ಟಿದ ಹತ್ತಿ ಕಣ್ಣನ್ನೇ ತಿನ್ನುತ್ತಿತ್ತು. ನಾಲ್ಕನೇ ದಿನ ಚಾಮರಾಜನಗರ ರಾಮಸಮುದ್ರ ಸ್ಟೇಷನ್‌ಗೆ ಕರೆದುಕೊಂಡು ಬಂದು ಕಣ್ಣೀನ ಬಟ್ಟೆ ತೆಗೆದರು. ಜೈಲಿಗೆ ದೂಡಿದರು. ಒಟ್ಟು ಹನ್ನೊಂದು ದಿನ ಜೈಲಲ್ಲಿ ಕಳೆದೆವು. ಹನ್ನೊಂದು ದಿನದ ನಂತರ ನಮಗೆ ಜಾಮೀನು ಸಿಕ್ಕಿತು. ಆನಂತರ ಸತತ ಏಳು ವರ್ಷ ವಿಚಾರಣೆ ಎದುರಿಸಿದ ನಾನು ನಿರಪರಾಧಿಯೆಂದೆನಿಸಿಕೊಂಡು ನಿರಾಳವಾಗಿ ಉಸಿರಾಡತೊಡಗಿದೆ.

ವೀರಪ್ಪನನ್ನು ನಾನು ಒಮ್ಮೆಯೂ ಕಣ್ಣಾರೆ ನೋಡಲಿಲ್ಲ ಆದರೆ ಅವನ ಹೆಸರಲ್ಲಿ ನಿಷ್ಕಾರಣವಾಗಿ ಈ ವಿಪರೀತ ಹಿಂಸೆಗೆ ನಾವು ಈಡಾಗಬೇಕಾಯಿತು. ನಮ್ಮ ಗಿಡ ಮೂಲಿಕೆಗಳಿಂದ ನನ್ನ ಮೈ ಸುಧಾರಣ ಹೊಂದಿತಾದರೂ ಮನಸ್ಸಿನ ಗಾಯ ಮಾತ್ರ ಇನ್ನು ಹಾಗೆ ಉಳಿದಿದೆ....

-ಎಂ. ಜಡೇಯಗೌಡ

ಕಂಡದ್ದು ಕೇಳಿದ್ದು...

–ಮಲ್ಲಿಕಾ ಬಸವರಾಜು



ದಿನನಿತ್ಯದ ಬದುಕಿನಲ್ಲಿ ನಾನು ಕಂಡು, ಕೇಳಿದ, ನನ್ನ ಕಾಡುತ್ತಿರುವ ಘಟನೆಗಳಲ್ಲಿ ಒಂದೆರಡನ್ನು ನಿಮ್ಮ ಜೊತೆ ಹಂಚಿಕೊಳ್ಳಬಹುದು ಎನಿಸಿ ಬರೆದು ಕಳಿಸುತ್ತಿದ್ದೇನೆ. ಈ ಮೂರು ಘಟನೆಗಳಲ್ಲಿನ ಶಿಲ್ಪ ಸರೋಜ ಮತ್ತು ಮಾಧವ ಅವರು ಕೇಳುವ ಪ್ರಶ್ನೆಗಳಿಗೆ ಏನು ಉತ್ತರ ಕೊಡುವುದು?

ಘಟನೆ–೧

'ನಾನು ನಿಮ್ಮನ್ನು ಬೇಕಾದ್ರೆ ಬಿಡ್ತೀನಿ, ಮಗೂನ ಯಾರಿಗೂ ಕೊಡಲ್ಲ, ಕಟ್ಟೆಗೂ ಎಸೆಯಲ್ಲ, ಮನುಷ್ಯತ್ವ ಇಲ್ಲದ ನಿಮ್ಮ ಜೊತೆ ಬರಲ್ಲ '

ಈಗಾಗಲೇ ಎರಡು ಹೆಣ್ಣು ಮಕ್ಕಳಿರುವ ಸರೋಜ ಮೂರನೇ ಹೆರಿಗೆಗೆ ಆಸ್ಪತ್ರೆಗೆ ಬಂದಾಗ ಆತಂಕದಲ್ಲಿದಳು. ಎರಡೇ ಮಕ್ಕಳು ಸಾಕೆಂದರೆ, ಅತ್ತೆ ಗಂಡ ಒಪ್ಪಿರಲಿಲ್ಲ. ಮೂರನೆಯದು ಗಂಡಾಗಬಹುದೆಂಬ ಒಳ ಆಸೆ ಅವರದು. ಜೊತೆಯಲ್ಲಿದ್ದ ಅತ್ತೆ ಗಂಡ, ಗಂಡು ಮಗುವಾದರೆ ಮಕ್ಕಳಾಗದ ಹಾಗೆ ಆಪರೇಷನ್ ಮಾಡಿ ಎಂದರೆ, ಅಮ್ಮ ಎಂತಹದಾದರೂ ಸಾಕು, ಮಕ್ಕಳಾಗದ ಹಾಗೆ ಆಪರೇಷನ್ ಮಾಡಿ ಎಂದು ವೈದ್ಯರ ಬಳಿ ಗೋಗರೆಯುತ್ತಿದ್ದಳು.

ಹೆರಿಗೆಯಾದಾಗ ಮೂರನೆಯದು ಹೆಣ್ಣೇ. ಮುದ್ದಾಗಿತ್ತು. ಅತ್ತೆ ಮುಖ ಊದಿಸಿಕೊಂಡು "ಇವಳ ಯೋಗ್ತೇಗೆ, ಒಂದು ಗಂಡು ಹಡೀಲಿಲ್ಲಾ" ಎಂದು ಗೊಣಗುತ್ತಾ ಹೊರ ನಡೆದರೆ, ಗಂಡ ಸರೋಜಳನ್ನು ಮಾತನಾಡಿಸಲಿಲ್ಲ, ಮಗುವನ್ನು ನೋಡಲಿಲ್ಲ, ಕ್ಯಾಷ್ ಕೌಂಟರ್‌ನಲ್ಲಿ ಅಡ್ವಾನ್ಸ್ ಕಟ್ಟಿ ಖರ್ಚಿಗೆ ದುಡ್ಡು ತರುವೆನೆಂದು ಹೋದವನು ಮತ್ತೇ ಬರಲಿಲ್ಲ. ಡಾಕ್ಟರ್ ಡಿಸ್‌ಚಾರ್ಜ್‌ಗೆ ಹೇಳಿ ಎರಡು ದಿನವಾಗಿತ್ತು. ಆಸ್ಪತ್ರೆಯ ಬಿಲ್ಲು ಪೂರ್ತಿಗೊಳಿಸದ ಕಾರಣ ವಾರ್ಡಿನಲ್ಲೇ ಇದ್ಲು. ಇಡೀ ದಿನ ಅತ್ತು ಅತ್ತು ಅವಳ ಕಣ್ಣುಗಳು ಕೆಂಪಗಾಗಿದ್ದವು. ಅಡ್ವಾನ್ಸ್ ಕಟ್ಟಿ ಹೋಗಿದ್ದ ಗಂಡ ಬಂದೇ ಇರಲಿಲ್ಲ. ಅಮ್ಮ ಬಡವಿ, ಅವಳ ಬಳಿ ಇದ್ದದ್ದು ಊಟ ತಿಂಡಿಗೆ ಖರ್ಚಾಗಿತ್ತು. ಹಸಿ ಬಾಣಂತಿಯ ಅಳು ನೋಡದೆ ವೈದ್ಯರು ಬಿಲ್ ಮಾಫಿ ಮಾಡಿ ಮನೆಗೆ ಕಳಿಸಿದರು.

ಮೊನ್ನೆ ಹುಷಾರಿಲ್ಲವೆಂದು ಚೆಕಪ್‌ಗೆ ಬಂದವಳು ಟೋಕನ್ ತೆಗೆದುಕೊಳ್ಳುವಾಗ, ಪರಿಚಯದ ನಗೆ ಬೀರಿ ಪನ್ನೀರ್ ಗುಲಾಬಿಯಂತಹ ಮಗುವನ್ನು ಮುದ್ದಾಡಿದ ರಿಸೆಪ್ಷನಿಸ್ಟ್‌ಗೆ "ಈ ಮಗೂನ ಯಾರಿಗಾದ್ರೂ ಕೊಟ್ಟು ಇಲ್ಲ ಕಟ್ಟೆಗೆಸೆದು ಬಾ, ಇಲ್ಲ ಅಂದ್ರೆ ತವರುಮನೇಲಿ ಇರು ಅಂದ್ರು ಅತ್ತೆ, ಗಂಡ. ಅದಕ್ಕೆ ನಾನು ನಿಮ್ಮನ್ನು ಬೇಕಾದ್ರೆ ಬಿಡ್ತೀನಿ, ಮಗೂನ ಯಾರಿಗೂ ಕೊಡಲ್ಲ, ಕಟ್ಟೆಗೂ ಎಸೆಯಲ್ಲ, ಮನುಷ್ಯತ್ವ ಇಲ್ಲದ ನಿಮ್ಮ ಜೊತೆ ಬರಲ್ಲ ಅಂದೆ", ಎಂದ ಸರೋಜ ಮೂರು ಮಕ್ಕಳನ್ನು ಕಟ್ಟಿಕೊಂಡು ತಾಯಿ ಮನೆಯಲ್ಲೇ ಬೀಡಿ ಕಟ್ಟಿ ಬದುಕುತ್ತಿರುವುದಾಗಿ ಹೇಳ್ತಾ, 'ಹೆಣ್ಣಾದ್ರೇನು ? ಗಂಡಾದ್ರೇನು ? ಮಕ್ಕಳು ಮಕ್ಕಳೇ ಅಲ್ಲವ್ರಾ ?' ಎಂದು ನಗಾಡಿದ್ಲು.

ಘಟನೆ ೨

'ನಾನು ಇವನನ್ನು ಪ್ರೀತಿಸುವಾಗ, ಜಾತಿ ಮೀರಿ ಮದುವೆಯಾಗುವಾಗ ವ್ಯವಸ್ಥೆಯ ವಿರುದ್ಧ ಹೋರಾಡಬೇಕು, ಎಂದವನು ಈಗ ನಾಲ್ಕು ಜನ ಹೆಂಗಸರ ಹಾಗೆ ನೀನು ಬಾಯಿ ಮುಚ್ಚಿಕೊಂಡಿರು ಅಂತಾನಲ್ಲ. ಇವನಿಗೆ ಏನಾಗಿದೆ ಆಂಟಿ ?'

ಶಿಲ್ಪ, ಅರುಣ್ ಓದುತ್ತಿರುವಾಗಲೇ ಪರಸ್ಪರ ಮೆಚ್ಚಿ ಪ್ರೀತಿಸಿ ಹೌಸ್ ಸರ್ಜನ್ಸ್ ಆಗಿದ್ದಾಗ ಮದುವೆಯಾದರು. ಮದುವೆಯಾಗಿ ಎರಡು ವರ್ಷಗಳಾಗಿವೆ. ಜಾತಿ ಬೇರೆಯೆನ್ನುವ ಕಾರಣಕ್ಕೆ ಶಿಲ್ಪಳ ಮನೆಯವರು ಮದುವೆಗೆ ಒಪ್ಪಲಿಲ್ಲ. ಅರುಣ್ ಮನೆಯವರು ಗೊಣಗುತ್ತಲೇ ಒಪ್ಪಿಕೊಂಡ್ರು.

ಶಿಲ್ಪಳ ಅಪ್ಪ ಸೆಕ್ರಟರಿ, ಅಮ್ಮ ಟೀಚರ್. ಅಪ್ಪ ಅಮ್ಮರ ಇಬ್ಬರೇ ಹೆಣ್ಣು ಮಕ್ಕಳಲ್ಲಿ ಇವಳೇ ಕಿರಿಯವಳು, ಮುದ್ದು ಜಾಸ್ತಿ, ಬಾಯಿ ಜೋರು, ಅನ್ನಿಸಿದ್ದನ್ನು ಪಟ್ಟಂತ ಹೇಳುವ ಸ್ವಭಾವ.

ಅರುಣ್‌ನದ್ದು ಕೂಡು ಕುಟುಂಬ, ಅಪ್ಪ ಅಮ್ಮ, ಅಜ್ಜಿ, ಅಣ್ಣ ಅತ್ತಿಗೆ ತಂಗಿ ಇದ್ದಾರೆ. ಅಪ್ಪನದು ದಿನಸಿ ಅಂಗಡಿ ಇದೆ. ಅಣ್ಣ ಅಡ್ವೋಕೇಟ್. ತಂಗಿ ಈಗಷ್ಟೇ ಬಿ.ಇ. ಮುಗಿಸಿದ್ದಾಳೆ. ಗಂಡು ಹುಡುಕ್ತಾ ಇದ್ದಾರೆ. ಅರುಣ್ ಶಿಲ್ಪ ಇಬ್ಬರೂ ಬೇರೆ ಬೇರೆ ನರ್ಸಿಂಗ್ ಹೋಂನಲ್ಲಿ ಡ್ಯೂಟಿ ಡಾಕ್ಟರ್‌ಗಳಾಗಿ ಕೆಲಸ ಮಾಡ್ತಾ ಪಿ.ಜಿ. ಪ್ರವೇಶ ಪರೀಕ್ಷೆಗೆ ತಯಾರಾಗ್ತಾ ಇದ್ದಾರೆ.

ಮೊದಲೆಲ್ಲಾ ಲವಲವಿಕೆಯಿಂದ ಚೂಟಿಯಾಗಿ ಇದ್ದ ಶಿಲ್ಪ, ಇತ್ತೀಚೆಗೆ ಮಂಕಾಗಿದ್ದಾಳೆ, ಮೌನಿಯಾಗಿದ್ದಾಳೆ. ಕೇಳಿದ್ರೆ ಮೌನವಾಗೆ ಇರ್‍ತಿದ್ದವಳು ಮೊನ್ನೆಯಷ್ಟೇ ಬಾಯಿ ಬಿಟ್ಟಳು. "ಆಂಟಿ, ಅಪ್ಪ ಅಮ್ಮ ಅಕ್ಕ ಭಾವ ಬರ್‍ತಿಲ್ಲ. ಪೋನ್‌ಗೆ ಸಿಕ್ಕಿಲ್ಲ. ಊರಿಗೆ ಹೋಗಿ ಬರೋಣ ಅಂದ್ರೆ ಅರುಣ್ ಒಪ್ತಿಲ್ಲ. ಇಲ್ಲಿ ಮನೇಲಿ ಅತ್ತೆ ಅಜ್ಜಿ ಮಾವ ಒಕೆ. ಒಕೆ.

ಅತ್ತೆ, ನಾದಿನಿ, ವಾರಗಿತ್ತಿಯರದು ಇದ್ದೆ ಇದೆ ಕಿರಿ ಕಿರಿ. ಅರುಣ್ ಮೊದಲ ಹಾಗಿಲ್ಲ, ಮೊದಲ ಹಾಗೆ ಮಾತಾಡಲ್ಲ. ಯಾವಾಗಲೂ ಅವರ ಅಮ್ಮ, ತಂಗಿ ಪರವಾಗಿ ಮಾತಾಡ್ತಾರೆ. ನಾನು ಒಂಟಿ ಅನ್ನಿಸಿ ಬಿಟ್ಟಿದೆ.

ಮೊನ್ನೆ ನನ್ನ ನಾದಿನಿಗೆ ಒಂದು ಸಂಬಂಧ ಬಂದಿತ್ತು. ವರದಕ್ಷಿಣೆ ಪ್ರಸ್ತಾಪ ಬಂದಾಗ ಅಜ್ಜಿ, ಅತ್ತೆ ಸುಮ್ಮನಿದ್ದರು. ವರದಕ್ಷಿಣೆ ಕೊಡುವುದು ಬೇಡ ಎಂದು ನಾನು ಹೇಳಿದಾಗ ಮನೇಲಿ ದೊಡ್ಡ ರಂಪಾನೆ ಆಯ್ತು. ನಾಲ್ಕು ಜನ ಹೆಂಗಸರ ಹಾಗೆ ನೀನು ಬಾಯಿಮುಚ್ಚಿಕೊಂಡು ಸುಮ್ಮನಿರು, ಎಂದು ಅರುಣ್ ಸಹ ನನಗೆ ಜೋರು ಮಾಡಿದ ಅಲ್ಲಾ ಆಂಟಿ. ನಾನು ಇವನನ್ನು ಪ್ರೀತಿಸುವಾಗ, ಜಾತಿ ಮೀರಿ ಮದುವೆಯಾಗುವಾಗ ವ್ಯವಸ್ಥೆಯ ವಿರುದ್ಧ ಹೋರಾಡಬೇಕು, ಎಂದವನು ಈಗ ನಾಲ್ಕು ಜನ ಹೆಂಗಸರ ಹಾಗೆ ನೀನು ಬಾಯಿ ಮುಚ್ಚಿಕೊಂಡಿರು ಅಂತಾನಲ್ಲ. ಇವನಿಗೆ ಏನಾಗಿದೆ ಆಂಟಿ ? ಎಂದು ಅಳುತ್ತಾಳೆ.

ಘಟನೆ ೩


ಮನೆಗೆ ಬಂದವನು ಅವರ ಅಮ್ಮನನ್ನು ತಬ್ಬಿ ಕೇಳಿದ "ಯಾವ ತಲೆ ಕೆಟ್ಟ ನನ್ ಮಗಾನಮ್ಮ ಈ ಜಾತಿ ಪಾತಿ ಮಾಡಿದ್ದು". ?

ಮಠ ಒಂದಕ್ಕೆ ಸೇರಿದ ಖಾಸಗಿ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಓದುತ್ತಿರುವ ಆ ಹುಡುಗ ಮಾಧವ ಆಟ, ಪಾಠ ಎರಡರಲ್ಲೂ ಚೂಟಿ. ಹತ್ತು ಜನರ ನಡುವೆ ಎದ್ದು ಕಾಣುವ ಹಾಗಿದ್ದಾನೆ. ಅದೇ ಕಟ್ಟಡದಲ್ಲಿ ಶಾಲೆಯ ಪಕ್ಕವೇ ಒಂದು ಬ್ಯಾಂಕ್ ಇದೆ. ಆ ಬ್ಯಾಂಕ್ ಉದ್ಯೋಗಿಯೊಬ್ಬರ ಮಗ ಮತ್ತು ಮಾಧವ ಸಹಪಾಠಿಗಳು. ಕೆಳಜಾತಿಯ ಮಾಧವ, ತನ್ನ ಮಗನಿಗೆ ಆಟ ಪಾಠ ಮತ್ತು ಇತರೆ ಪಠ್ಯೇತರ ಚಟುವಟಿಕೆಗಳಲ್ಲಿ ಪ್ರಬಲ ಸ್ಪರ್ಧಿಯಾಗಿ ಎಲ್ಲದರಲ್ಲೂ ಮುಂದಿರುವುದು ಅವರಿಗೆ ನುಂಗಲಾರದ ತುತ್ತಾಗಿತ್ತು. ಎಲಾ ಇವನ, ನಮ್ಮ ಮಕ್ಕಳನ್ನೇ ಮೀರಿಸ್ತಾನಲ್ಲ ಅಂತ ಅಸಹನೆ ಅವರಿಗೆ. ಸಮಯ ಸಿಕ್ಕಾಗ ಮಾಧವನ ಕಾಲೆಳೆಯಲು ಕಾಯ್ತಾ ಇದ್ರು.

ಅದೊಂದು ಸೋಮವಾರ ದೈಹಿಕ ಶಿಕ್ಷಕರು ಮಾಧವನಿಗೆ ಚೆಕ್ ಒಂದನ್ನು ಕೊಟ್ಟು ಕ್ಯಾಷ್ ತರಲು ಪಕ್ಕದ ಬ್ಯಾಂಕ್‌ಗೆ ಕಳಿಸಿದರು. ಮಾಧವ ಕ್ಯಾಷ್ ಕೌಂಟರಿನ ಬಳಿ ತನ್ನ ಸರದಿಗೆ ಕಾಯ್ತಿದ್ದ. ಸೋಮವಾರ ತುಂಬಾ ರಷ್ ಇತ್ತು. ಅಲ್ಲೆ ಉದ್ಯೋಗದಲ್ಲಿದ್ದ ಅವನ ಸಹಪಾಠಿ ತಂದೆ, ಇವನ ಸಮೀಪ ಬಂದು ಬೇಕೆಂದೇ "ನೀನು ನಮ್ಮ ಶಿವಣ್ಣರವರ ಮಗನಾ" ಅಂದ್ರು . "ಅಲ್ಲ" ಅಂದ ಇವನು, ನಾನು ಇಂಥವರ ಮಗ ಎಂದು ತಂದೆಯ ಹೆಸರೇಳಿದ. "ಹಾಗಾದ್ರೆ ನಮ್ಮವರಲ್ಲ, ಮತ್ತೆ ಯಾವ ಜಾತೀನೋ ನೀವು?" ಎಂದು ಗಟ್ಟಿಯಾಗಿ ಕೇಳಿದ್ರು. ತಕ್ಷಣ ಆ ಹುಡುಗ "ಯಾಕೆ ಅಂಕಲ್ ನನಗೆ ಹೆಣ್ಣು ಹುಡುಕ್ತೀರೇನು"? ಎಂದು ತಮಾಷೆ ಮಾಡಿ ಮಾತು ತೇಲಿಸಿದ. ಆದರೆ ಅವನ ಅಂತರಂಗಕ್ಕೆ ನೋವಾಗಿತ್ತು. ಗೊತ್ತಿದ್ದೂ , ಗೊತ್ತಿದ್ದೂ ಎಲ್ಲರೆದಿರು ನನ್ನ ಜಾತಿ ಕೇಳಿದರಲ್ಲ ಎಂದು. ಮನೆಗೆ ಬಂದವನು ಅವರ ಅಮ್ಮನನ್ನು ತಬ್ಬಿ ಕೇಳಿದ "ಯಾವ ತಲೆ ಕೆಟ್ಟ ನನ್ ಮಗಾನಮ್ಮ ಈ ಜಾತಿ ಪಾತಿ ಮಾಡಿದ್ದು". ?

ಆ ಎಸ್.ವೈ.ಎಸ್. ದಿನಗಳು...

–ಎಂ.ಬಿ.ನಟರಾಜ್



ಮೈಸೂರಿನ ಮಾನಸಗಂಗೋತ್ರಿ ಮೊದಲಿನಿಂದಲು ಒಂದು ಆಕರ್ಷಣೀಯ ಜ್ಞಾನ ಕೇಂದ್ರ. ಈ 'ಜ್ಞಾನ' ಎಂಬುದನ್ನು ಸ್ವಲ್ಪ ವಿಸ್ತಾರವಾದ ಅರ್ಥದಲ್ಲಿ ನೋಡಬೇಕಷ್ಟೆ. ಆ ಕಾಲದಲ್ಲಿ ಇಂತಹ 'ಜ್ಞಾನ'-ಕಮ್ಮಟಗಳು ಹಲವಾರು. ಅಂತಹುವುಗಳಲ್ಲೊಂದು ನಾನು ಭಾಗಿಯಾಗಿದ್ದ ಎಸ್.ವೈ.ಎಸ್. ಅಂದರೆ *ಸಮಾಜವಾದಿ ಯುವಜನ ಸಭಾ*. ಅದು ಆಗ ನೆಹ್ರೂ ವಿರುದ್ಧ ರಾಜಕಾರಣ ಮಾಡಿ ದೇಶದ ಜನರ ಗಮನ ಸೆಳೆದಿದ್ದ ಲೋಹಿಯಾ ಅವರ *(ಸಂಯುಕ್ತ) ಸೋಷಲಿಸ್ಟ್ ಪಕ್ಷದ* ಯುವಜನ ಶಾಖೆ.

೧೯೬೭-೬೮ರ ವರ್ಷಗಳವು. ಆಗ ತಾನೇ ಜರ್ಮನಿಯಿಂದ ಉನ್ನತ ಕಾನೂನು ಶಿಕ್ಷಣ ಮುಗಿಸಿಕೊಂಡು ಬಂದರೆಂದು ಹೇಳಲಾಗುತ್ತಿದ್ದ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ ಇದರ ಸೂತ್ರಧಾರರು. ಅವರು ಒಮ್ಮೊಮ್ಮೆ ಸ್ಕೂಟರ್, ಬಹಳ ಸಾರಿ ವಿಲೀಸ್ ಕಂಪೆನಿಯ ಜೀಪನ್ನು ಅವರೇ ಡ್ರೈವ್ ಮಾಡಿಕೊಂಡು ಬರುತ್ತಿದ್ದರು. ಮೊದಮೊದಲು ನಮಗೆ-ಕೆಲವು ಗೆಳೆಯರಿಗೆ ನಂಜುಂಡಸ್ವಾಮಿ ಪರಿಚಯವಿರಲಿಲ್ಲ. ಅವರು ಯಾಕಾಗಿ ಬರುತ್ತಾರೆಂದೂ ನಮಗೆ ತಿಳಿದಿರಲಿಲ್ಲ. ಅವರು ಬಂದ ಕೂಡಲೆ ನಮ್ಮ ಸಹಪಾಠಿ ಕೆ.ರಾಮದಾಸ್, ರಾಜ್ಯಶಾಸ್ತ್ರ ವಿದ್ಯಾರ್ಥಿ ಪಿ.ಮಟ್ಟಯ್ಯ ಮತ್ತು ಒಂದಿಬ್ಬರು ವಿದ್ಯಾರ್ಥಿಗಳು ಮೋಹಿನಿಯ ಸೆಳೆತಕ್ಕೆ ಒಳಗಾದವರಂತೆ ಅವರೊಂದಿಗೆ ವ್ಯಾನಿನಲ್ಲಿ ಕುಳಿತು ಎಲ್ಲಿಗೋ ತೆರಳುತ್ತಿದ್ದರು. ನನ್ನ ಗೆಳೆಯ ರಾಮದೇವ ತುಂಗನೊಂದಿಗೆ 'ಇದೇನ್ರಿ ತುಂಗ? ದಿನನಿತ್ಯದ ರಹಸ್ಯ ಕಾರ್ಯಾಚರಣೆ?" ಎಂದು ತಮಾಷೆ ಮಾಡುತ್ತಿದ್ದೆ.


ಒಂದು ದಿನ ನಮ್ಮ ಅನುಮಾನವನ್ನು ಒಂದೇ ಬಾರಿಗೆ ಬಗೆಹರಿಸುವರಂತೆ ರಾಮದಾಸ್ "ಇವೊತ್ತು ಸಂಜೆ ನೀವಿಬ್ಬರೂ ರೆಡಿಯಾಗಿ. ಒಂದು ಜಾಗಕ್ಕೆ ಹೋಗೋಣ್ರೆ" ಎಂದರು. ನಾನು ನಗುತ್ತ "ಏನು ಸ್ಮಗ್ಲಿಂಗ್ ಜಾಗಕ್ಕ?" ಎಂದೆ. ಅವರು "ಹೌದ್ರೀ...ವಿಚಾರದ ಸ್ಮಗ್ಲಿಂಗ್" ಎಂದರು ವೀರಾವೇಶದಿಂದ. ಅದು ೧೯೬೭ರ ಸೆಪ್ಟೆಂಬರ್ ಎಂದು ನೆನಪು. ಮೈಸೂರಿನ ಪ್ರಸಿದ್ಧ ಸಮಾಜವಾದಿ ಮತ್ತು ವಕೀಲರಾಗಿದ್ದ ಟಿ.ಎನ್. ನಾಗರಾಜ್ ಅವರ ಮನೆಗೆ ಹೊಂದಿಕೊಂಡ ಒಂದು ಹಾಲ್‌ನಲ್ಲಿ ಅನೇಕ ವಿದ್ಯಾರ್ಥಿಗಳು ಸೇರಿದ್ದರು. ಹಾಲ್‌ನ ಮಧ್ಯಭಾಗದಲ್ಲಿ ಲೋಹಿಯಾ ಅವರ ಒಂದು ದೊಡ್ಡ ಚಿತ್ರ. ಮೇಲ್ಭಾಗದಲ್ಲಿ 'ಸಮಾಜವಾದಿ ಯುವಜನ ಸಭಾ' ಎಂಬ ಬ್ಯಾನರ್, ಆ ದಿನ ಯಾವ ಸಮಾರಂಭ ಅಥವಾ ಸಭೆ ಇರಲಿಲ್ಲ. ಅಲ್ಲೆ ಕುಳಿತಿದ್ದ ನಂಜುಂಡಸ್ವಾಮಿ ವಿದ್ಯಾರ್ಥಿಗಳನ್ನು ಪರಸ್ಪರ ಪರಿಚಯಿಸಿದರು.

ಇದಾದ ಕೆಲವು ದಿನಗಳ ನಂತರ ನಂಜುಂಡಸ್ವಾಮಿ "ಹೀಗೇ ಸುಮ್ಮನೆ ಯೋಚನೆ ಮಾಡುತ್ತ ಕೂತರೆ No Use. ನನ್ನದು ಕೆಲವು Plans ಇವೆ. ನೀವೆಲ್ಲ ಸೇರಬೇಕು" ಎಂದರು. ನಾನು ಅವರ ತ್ರೀ-ಪೀಸ್ ಸೂಟನ್ನು, ತೆಳುಗಡ್ಡ ಮತ್ತು ಬೆರಳು ಸಂಧಿಯ ಪಾಸಿಂಗ್ ಶೋ ಸಿಗರೇಟನ್ನೆ ಗುಗ್ಗುವಿನಂತೆ ನೋಡುತ್ತಿದ್ದೆ. ಹೀಗಿರುವಾಗ, ೧೯೬೮ರ ಒಂದು ದಿನ ನಂಜುಂಡಸ್ವಾಮಿ ಅವರೇ ಡ್ರೈವ್ ಮಾಡುತ್ತಿದ್ದ ಕಾರು ಮಧ್ಯಾಹ್ನ ಗಂಗೋತ್ರಿ ಕ್ಯಾಂಟೀನ್ ಮುಂದೆ ನಿಂತಿತು. ಕಾರಿನಿಂದ ರಾಮದಾಸ್, ಪುಟ್ಟಯ್ಯ, ಪ.ಮಲ್ಲೇಶ್ ಅವರೊಂದಿಗೆ ನಂಜುಂಡಸ್ವಾಮಿ ಇಳಿದು ಬಂದರು. ರಾಮದಾಸ್ "ಏನ್ರಿ, ನಿಮಗೆಲ್ಲ ಎಷ್ಟು ಹುಡುಕೋದು? ಸಂಜೆ ಎಸ್‌ವೈಎಸ್ ಹತ್ತಿರ ಬನ್ನಿ, ತಪ್ಪಿಸಬೇಡಿ" ಎಂದು ಹೇಳಿ, ತುರ್ತು ಕೆಲಸ ಇರುವವರಂತೆ ಹೊರಟರು.

ಏನಿರಬಹುದು ಅಂತಹ ತುರ್ತು ಕೆಲಸ? ನಾನು ರಾಮದೇವ ತುಂಗ ಲೆಕ್ಕ ಹಾಕಿದೆವು, ಹೊಳೆಯಲಿಲ್ಲ. ಸಂಜೆ, ಎಸ್.ವೈ.ಎಸ್.ಗೆ ಹೋದಾಗ ೧೫-೨೦ ಯುವಕರು ಸೇರಿದ್ದರು. ಯಾವ ಪೀಠಿಕೆ ಪ್ರಸ್ತಾವನೆಯೂ ಇಲ್ಲದೆ ಟಿಎನ್‌ಎನ್. ಅವರು "ನೋಡಿ, ನೀವಿಷ್ಟು ಹುಡುಗರು ಬಂದದ್ದು ಸಂತೋಷವಾಯಿತು. ನಾವೀಗ ಮಾಡಬೇಕಾದ ಕೆಲಸ ಸ್ವಲ್ಪ ಕಷ್ಟದ್ದೆ. ಹುಷಾರಾಗಿ ಮಾಡಬೇಕು. ಅಷ್ಟೆ ನೀವೆಲ್ಲ ಬರ್ತೀರ?" ಎಂದು ಕೇಳಿದರು. ಯಾರಿಗೇನೂ ಅರ್ಥವಾಗದೆ ಸುಮ್ಮನಿದ್ದರು. ಅವರೇ ಮತ್ತೆ ಹೇಳಿದರು: 'ಮೈಸೂರಿನಲ್ಲಿರುವ ಇಂಗ್ಲೀಷ್‌ನವರ ಪ್ರತಿಮೆಗಳು, ಅವರ ಹೆಸರಿನ ರಸ್ತೆ ಫಲಕಗಳನ್ನು ಕಿತ್ತು ಹಾಕುವುದು. ಇನ್ನೂ ಅವರ ಜಪ ಮಾಡ್ತಿರೋದು ದಾಸ್ಯದ ಸಂಕೇತ. ಈ ಕೆಲಸಕ್ಕೆ ರೆಡಿ ಇದೀರ?" ಇಂತಹ ಒಂದು ಕಾರ್ಯಕ್ರಮಕ್ಕಾಗಿ ಬಹಳ ದಿನಗಳಿಂದ ಕಾಯುತ್ತಿದ್ದವರಂತೆ ಆಗಲೇ ಕೆಲವರಿಗೆ ಆವೇಶ ಬಂದಂತಾಯಿತು. "ಯಾವಾಗ ಸಾರ್?" ಎಂದರು. ಮಾರನೆ ದಿನ ರಾತ್ರಿ ಮೈಸೂರು ಜಿಲ್ಲಾಧಿಕಾರಿ ಕಛೇರಿ ಮುಂದಿದ್ದ ಡೇವಿಡ್ ಗಾರ್ಡನ್ ಎಂಬಾತನ ಪ್ರತಿಮೆಯನ್ನು ತೆಗೆಯುವುದೆಂದು ತೀರ್ಮಾನಿಸಿದರು. (ಡೇವಿಡ್ ಗಾರ್ಡನ್ ೧೯ನೇ ಶತಮಾನದಲ್ಲಿ ಮೈಸೂರು ಜಿಲ್ಲಾ ಕಲೆಕ್ಟರ್ ಆಗಿದ್ದವನು)

ಆ ದಿನ ರಾತ್ರಿ ಸುಮಾರು ೯ ಗಂಟೆ ವೇಳೆಗೆ ಮಹಾರಾಜ ಕಾಲೇಜು ಹಾಸ್ಟೆಲ್‌ನ ಎನ್.ಡಿ. ಪ್ರಭಾಕರನ ದೊಡ್ಡ ರೂಮಿನಲ್ಲಿ ಎಲ್ಲ ಸೇರಿದೆವು. ಹತ್ತು ಗಂಟೆಗೆ ಟಿಎನ್‌ಎನ್ ಕಳಿಸಿದ್ದ ಟ್ರ್ಯಾಕ್ಟರು ಬಂದಿತು. ತ್ಯಾಜವಳ್ಳಿ ಮಂಜುನಾಥ, ಪಡವಗೋಡು ವೆಂಕಟೇಶ, ರಮೇಶ, ಶಬೀರ್, ರಾಮದೇವ ತುಂಗ ಮತ್ತು ಅದೇ ಹಾಸ್ಟೆಲ್‌ನ ಹಲವು ಹುಡುಗರು-ಕೆಲವರು ಟ್ರ್ಯಾಕ್ಟರಿನಲ್ಲಿ, ಕೆಲವರು ನಡೆದೇ- ಜಿಲ್ಲಾಧಿಕಾರಿ ಕಛೇರಿ ಮುಂದೆ ಬಂದರು. 'ಗದ್ದಲ ಮಾಡಬಾರದು, ಯಾವುದೇ ಘೋಷಣೆ ಹಾಕಬಾರದು' ಎಂದು ನಂಜುಂಡಸ್ವಾಮಿ, ಮಲ್ಲೇಶ್ ತಾಕೀತು ಮಾಡಿದ್ದರು. ಆದರೆ ಟ್ರ್ಯಾಕ್ಟರಿನದೇ ದೊಡ್ಡ ಗಲಾಟೆ. ಅದು ಅಬ್ಬರಿಸುತ್ತಿತ್ತು. ತಂದಿದ್ದ ಬಲವಾದ ಹಗ್ಗವನ್ನು, ನಾ ಮುಂದು ತಾ ಮುಂದು ಎನ್ನುವಂತೆ, ಮಂಜು-ರಮೇಶ್ ೨-೩ ಜನ ಆ ಪ್ರತಿಮೆಯ ಕೊರಳಿಗೆ ಬಿಗಿದರು. ಅದರ ತುದಿಯನ್ನು ಟ್ರ್ಯಾಕ್ಟರಿನ ಹಿಂಭಾಗಕ್ಕೆ ಕಟ್ಟಿದರು. ದಡಾರನೆ ಟ್ರ್ಯಾಕ್ಟರನ್ನು ಓಡಿಸಿದ ಕೂಡಲೇ ಜಿಲ್ಲಾ ಕಲೆಕ್ಟರ್ ಸ್ವಲ್ಪ ನಡುಗಿದನೆ ಹೊರತು ತನ್ನ ಸ್ಥಾನ ಬಿಟ್ಟು ಕದಲಲಿಲ್ಲ. ಮತ್ತೆ ಮಾಡಿದ ಪ್ರಯತ್ನವನ್ನೂ ಅವನು ವಿಫಲಗೊಳಿಸಿದ. ನಂಜುಂಡಸ್ವಾಮಿ 'ಇಂಗ್ಲೀಷ್‌ನವರನ್ನು ಓಡಿಸೋದು ಬಹಳ ಕಷ್ಟ; ಬೇರೆ ಪ್ಲ್ಯಾನ್ ಮಾಡ್ಬೇಕು' ಎಂದರು. ಈಗ ಪ್ರತಿಮೆಯ ಸುತ್ತ ೩-೪ ಸುತ್ತು ಹಗ್ಗ ಬಿಗಿದು ಟ್ರ್ಯಾಕ್ಟರ್‌ಗೆ ಕಟ್ಟಿದ ಕೂಡಲೆ ಡ್ರೈವರ್ 'ಈ ಸಾರಿ ಅವರ ಕಥೆ ನೋಡಿ' ಎನ್ನುತ್ತ ಆಕ್ಸಿಲರೇಟರನ್ನು ಒತ್ತಿದ ಕೂಡಲೆ ಟ್ರ್ಯಾಕ್ಟರ್ ರೈಲ್ವೆ ಎಂಜನಿನಂತೆ ಅಬ್ಬರಿಸತೊಡಗಿತು. ಗಾಡಿ ಮುಂದೆ ಓಡದಂತೆ 'ಕಲೆಕ್ಟರ್' ಹರ್ಕ್ಯುಲಿಸ್‌ನಂತೆ ಹಗ್ಗವನ್ನು ಬಲವಾಗಿ ಹಿಡಿದಿಟ್ಟುಕೊಂಡ. ಡ್ರೈವರ್ ಮಾತ್ರ ಹಠ ಬಿಡಲಿಲ್ಲ, ಭಾರಿ ಎಳೆತ, ವಿಪರೀತ ಶಬ್ದಗಳೊಡನೆ ಇದ್ದಕ್ಕಿದ್ದಂತೆ ಸ್ವಾತಂತ್ರ್ಯ ಸಿಕ್ಕಂತೆ ಟ್ರ್ಯಾಕ್ಟರ್ ಮುಂದೆ ಓಡಿತು. ಎಲ್ಲರಿಗೂ ಕಲೆಕ್ಟರ್ ಉರುಳಿಬಿದ್ದ ಎಂದು ಖುಷಿಯಾಯಿತು. ಆದರೆ ಅವನು ಮಾತ್ರ ಅಲ್ಲೇ ಹಾಗೆಯೇ ನಿಂತಿದ್ದ. ಬದಲಾವಣೆ ಏನೆಂದರೆ, ತುಂಡಾಗಿದ್ದ ಹಗ್ಗದ ಉರುಲು ಅವನ ಕೊರಳಿನಲ್ಲಿ ನೇತಾಡುತ್ತಿತ್ತು. ಅಷ್ಟು ಹೊತ್ತಿಗೆ ಎಲ್ಲಿದ್ದರೋ ಪೋಲೀಸರು ೩-೪ ಮಂದಿ ಶೀಟಿ ಊದುತ್ತ ಓಡಿ ಬಂದರು. ಕ್ಷಣಮಾತ್ರದಲ್ಲಿ ನಾವೆಲ್ಲ ದಿಕ್ಕಾಪಾಲು!

ಈ ಘಟನೆ ಮಾರನೇ ದಿನ ಕೆಲವು ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಆಗ ವಿಧಾನಸಭೆ ಅಧಿವೇಶನ ನಡೆಯುತ್ತಿತ್ತು. ಅಲ್ಲಿಯೂ ಇದು ಪ್ರಸ್ತಾಪವಾಯಿತು. ಆಗ ಗೃಹಮಂತ್ರಿ ಲಕ್ಕಪ್ಪನವರೆಂಬುದು ನೆನಪು. ಈ ವಿಗ್ರಹ ಭಂಜಕರು ಯಾರು? ಇವರ ಹಿನ್ನೆಲೆ ಏನು? ಇದು ಯಾವ ಸಂಘ-ಸಂಸ್ಥೆಯ ಕೈವಾಡ? ಎಂಬುದನ್ನು ಪತ್ತೆ ಮಾಡುತ್ತೇವೆ ಎಂದು ಅವರು ಹೇಳಿದರು ಅಷ್ಟೆ. ಇರುವ ಪ್ರತಿಮೆಯ ಬಗ್ಗೆ ಗಮನವೂ ಇಲ್ಲ,





ತೆಗೆಯುವುದರ ಬಗ್ಗೆ ಉತ್ಸಾಹವೂ ಇಲ್ಲ, ಇನ್ನೇನು ಮತ್ತೆ ಮಾಡುವುದು? ತಳಮಟ್ಟದವರೆಗೂ ಬೇರು ಬಿಟ್ಟಿದ್ದ ಗಾರ್ಡನನ್ನು ಎಬ್ಬಿಸಲು ಆಗಲೇ ಇಲ್ಲ.

***

ಗಂಗೋತ್ರಿಯಲ್ಲಿ ತಮಿಳು ನಾಡಿನ ಅನೇಕ ವಿದ್ಯಾರ್ಥಿಗಳಿದ್ದರು. ಅವರದು ಬೇರೆ ಭಾಷೆಯನ್ನು ಕಲಿಯದ, ತಮಿಳನ್ನು ನಮಗೇ ಕಲಿಸುವ ಹಠ. ಬೇರೆ ಬೇರೆ ರಾಜ್ಯಗಳವರ ನಮಗೆ ಅರ್ಥವಾಗದ ಹಿಂದಿ. ಈ ಮಧ್ಯೆ ಗಂಗೋತ್ರಿ ಆವರಣದಲ್ಲಿ ತಲೆ ಎತ್ತುತ್ತಿದ್ದ ಹರಕು ಇಂಗ್ಲೀಷ್. ಇದಲ್ಲದೇ ಕನ್ನಡದವರಿಗೂ ಕನ್ನಡದ ಬಗ್ಗೆ ಕೀಳರಿಮೆ. ಹತ್ತಿರದಲ್ಲಿದ್ದ ರೀಜನಲ್ ಕಾಲೇಜು, ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳು ಕನ್ನಡಕ್ಕು ತಮಗು ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದವು. ಇಂತಹ ಉಸಿರು ಕಟ್ಟಿಸುವ ವಾತಾವರಣದಲ್ಲಿ ಎಸ್.ವೈ.ಎಸ್.ನ 'ಇಂಗ್ಲಿಷ್ ಹಠಾವೋ' ನೀತಿಗನುಗುಣವಾಗಿ 'ಇಂಗ್ಲಿಷ್ ಇಳಿಸಿ ಕನ್ನಡ ಬಳಸಿ ಚಳುವಳಿ ಹುಟ್ಟಿಕೊಂಡಿತು.

ಬಹುಶಃ ೧೯೬೮ರ ಡಿಸೆಂಬರ್ ತಿಂಗಳಿನ ಒಂದು ಸಂಜೆ, ಗಾಂಧಿ ಸರ್ಕಲ್‌ನಿಂದ ಹೊರಟ "ಇಂಗ್ಲೀಷ್ ಇಳಿಸಿ ಕನ್ನಡ ಬಳಸಿ" ಮೆರವಣಿಗೆ ಕೆಲವು ರಸ್ತೆಗಳಲ್ಲಿ ಸಂಚರಿಸಿ ಪುರಭವನದ ಬಳಿ ಸೇರುವಾಗ ಸಂಜೆ ೬ ಗಂಟೆಯಾಗಿತ್ತು. ಎಸ್.ವಿ. ಪರಮೇಶ್ವರಭಟ್ಟ, ಕೆ.ವೆಂಕಟರಾಮಪ್ಪ, ಯು.ಆರ್. ಅನಂತಮೂರ್ತಿ ಮುಂತಾದವರು ಮೆರವಣಿಗೆಯ ಮುಂಭಾಗದಲ್ಲಿದ್ದರು. ನಾವು ಆ ಜಾಗಕ್ಕೆ ಸೇರುವ ಮುಂಚೆಯೇ ಅಲ್ಲಲ್ಲೆ ಚದುರಿದಂತಿದ್ದ ಈ ಚಳವಳಿಯ ವಿರೋಧಿಗಳು ಕಾಣಿಸಿದರು. ನಾವು ಅಲ್ಲಿಗೆ ತಲುಪಿದ ಕೂಡಲೆ ಅವರೆಲ್ಲ ಒಟ್ಟಾಗಿ ವಿರೋಧಿ ಘೋಷಣೆಗಳನ್ನು ಹಾಕುತ್ತ, ಮುಂದಿದ್ದ ಹಿರಿಯರನ್ನೆಲ್ಲ ತಳ್ಳುತ್ತ, ಎಲ್ಲರನ್ನು ಅಲ್ಲಿಂದ ಓಡಿಸಲು ನುಗ್ಗಿದರು. ಯಾರ ಮಾತನ್ನು ಯಾರೂ ಕೇಳದ ಪರಿಸ್ಥಿತಿಯುಂಟಾಯಿತು. ಇಂತಹ ದೊಡ್ಡ ಗೊಂದಲದಲ್ಲಿ ಅನಂತಮೂರ್ತಿ ರಭಸವಾಗಿ ನುಗ್ಗುತ್ತ ಅಲ್ಲಿದ್ದ ಕಟ್ಟೆಯನ್ನು ವೇದಿಕೆಯನ್ನಾಗಿ ಮಾಡಿಕೊಂಡು ಕೂಗಾಡುತ್ತಿದ್ದವರನ್ನೆಲ್ಲ ಹತ್ತಿರಕ್ಕೆ ಕರೆದರು. "ನಾವು ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ ಅನಂತರ ನೀವು ನಿಮ್ಮ ವಿಷಯವನ್ನು ಹೇಳಿ" ಎಂದರು. ಆ ದಿನ ಅವರು ಮಾತನಾಡಿದುದು, ಸುಮಾರು ಒಂದು ಗಂಟೆಯ ಕಾಲ. ಕನ್ನಡ ವಿರೋಧಿಗಳಿಗೆ ವಿಚಾರಗಳನ್ನು ತಿಳಿಸುವುದು ಹಾಗಿರಲಿ, ಅವರ ಮನಸ್ಸನ್ನು ಗೆಲ್ಲುವಂತಾಯಿತು. ಅನಿರೀಕ್ಷಿತ ತಿರುವಿನಿಂದ ಸಭೆ ಶಾಂತವಾಗಿ ಮುಕ್ತಾಯವಾಯಿತು.

ಒಂದು ದಿನ, ಮೈಸೂರಿನಲ್ಲಿ ಪ್ರಸಿದ್ಧವಾಗಿದ್ದ, ಮಾಡರ್ನ್ ಹಿಂದೂ ಹೊಟೆಲ್ ಎಂದು ನೆನಪು– ಅಲ್ಲಿಗೆ ನಂಜುಂಡಸ್ವಾಮಿ ನಮ್ಮನ್ನೆಲ್ಲ ಕರೆದುಕೊಂಡು ಹೋದರು. ಎಲ್ಲರಿಗೂ ಯಾವುದೋ ಒಂದು ತಿಂಡಿ ತರಿಸಿದರು. ಕಾಫಿಯೂ ಬಂತು, ಜೊತೆಗೆ ಬಿಲ್ ಬಂತು. ನಂಜುಂಡಸ್ವಾಮಿ ತಗಾದೆ ಪ್ರಾರಂಭಿಸಿದರು. "ಸ್ವಾಮಿ, ನಿಮ್ಮ ತಿಂಡಿ–ಕಾಫಿ ದರ ನಾವು ಒಪ್ಪೋದಿಲ್ಲ. ಯಾವ ದರಕ್ಕೆ ಯಾವ ಕ್ವಾಲಿಟಿ–ಕ್ವಾಂಟಿಟಿ ಅನ್ನೋದಕ್ಕೆ ಏನಿದೆ ಆಧಾರ? ನೀವು ಕೊಟ್ಟಷ್ಟು ತಿಂಡಿಗೆ ನಾವು ಕೊಟ್ಟಷ್ಟು ದುಡ್ಡು ತಗೋಬೇಕು...ತಿಳೀತಾ?" ಎಂದರು. ಮಾತಿಗೆ ಮಾತು ಬೆಳೆಯಿತು. ಸಾಹುಕಾರ ಪೊಲೀಸರನ್ನು ಕರೆಸಿದ. ಒಬ್ಬ ಸಬ್‌ಇನ್ಸ್‌ಪೆಕ್ಟರ್, ಒಂದಿಬ್ಬರು ಪ್ಯಾದೆಗಳು ಬಂದರು. ಪರ–ವಿರೋಧಿಗಳಿಬ್ಬರೂ ತಮ್ಮ ವಾದಗಳನ್ನು ಇನ್ಸ್‌ಪೆಕ್ಟರ್ ಮುಂದೆ ಮಂಡಿಸಿದರು. ಅವರಲ್ಲಿ ಒಬ್ಬ ಪ್ಯಾದೆಗೆ ನಂಜುಂಡಸ್ವಾಮಿ ಪರಿಚಯವಿದ್ದಿರಬೇಕು, ಆತ ಇನ್ಸ್‌ಪೆಕ್ಟರ್ ಕಿವಿಯಲ್ಲಿ ಏನೋ ಹೇಳಿದ. ಕೂಡಲೇ ಇನ್ಸ್‌ಪೆಕ್ಟರ್ "ಸ್ವಾಮಿ ಸಾಹುಕಾರ್‍ರೆ, ಅವರು ಹೇಳೋದು ನಿಜವೆ, ಅವರೇನು ದುಡ್ಡು ಕೊಡಲ್ಲ ಅಂತ ಹೇಳ್ತಿಲ್ಲ. ಇಂಥದ್ರಲ್ಲಿ ನಾವು ಮಧ್ಯಪ್ರವೇಶ ಮಾಡೋ ಹಾಗಿಲ್ಲ. ನೀವು ನೀವೆ ಬಗೆಹರಿಸ್ಕೊಳ್ಳಿ" ಎಂದು ಹೇಳಿ ಅವರು ಹೊರಟೇಬಿಟ್ಟರು. ಸಾಹುಕಾರ ಕೈಮುಗಿಯುತ್ತ "ಸ್ವಾಮಿ, ನೀವು ಏನೂ ದುಡ್ಡು ಕೊಡೋದೆ ಬೇಡ, ಇನ್ನು ಮುಂದೆ ನಮ್ಮ ಹೊಟೇಲಿಗೆ ದಯವಿಟ್ಟು ಬರಬೇಡಿ" ಎಂದ. ನಂಜುಂಡಸ್ವಾಮಿ "ನೀವು ಹಾಗೆ ಹೇಳೋಹಾಗಿಲ್ಲ, ಇದು ಸಾರ್ವಜನಿಕ ಹೊಟೇಲ್. ಬರಬೇಡಿ ಅಂತ ನೀವು ಹೇಳಿದ್ರೆ ಜಿಲ್ಲಾಧಿಕಾರಿಗಳಿಗೆ ದಂಡ ಕೊಡಬೇಕಾಗುತ್ತೆ" ಎಂದರು. ಆತ ಸುಮ್ಮನಾದ. ಎಲ್ಲರೂ ಹಿಂತಿರುವಾಗ "ಪ್ರಭಾಕರ ಅಥವಾ ಮಂಜುನಾಥ" "ಎಸ್.ವೈ.ಎಸ್.ಗೆ...ಜಿಂದಾಬಾದ್" ಎಂದು ಕೂಗು ಹಾಕಿದರು.



ಮತ್ತೊಂದು ಸ್ವಾರಸ್ಯದ ವಿಷಯವೆಂದರೆ, ಹುಡುಗರಲ್ಲಿ ಈ ರೀತಿ ವಿರೋಧ ವ್ಯಕ್ತಪಡಿಸುವ ಪ್ರವೃತ್ತಿ ಹೆಚ್ಚಾದಂತೆ, ನಂಜುಂಡಸ್ವಾಮಿ ಅವರಿಗೇ ಅದು ಕೆಲವೊಮ್ಮೆ ಕೈಕೊಡುತ್ತಿತ್ತು. ಇರ್ವಿನ್ ರಸ್ತೆ, ಹಾರ್ಡಿಂಜ್ ಸರ್ಕಲ್ ಹೆಸರು ಕೀಳಬೇಕು ಎಂದು ಅವರು ಹೇಳಿದಾಗ "ಸುಮ್ನಿರಿ ಸಾರ್, ಡೇವಿಡ್ ಗಾರ್ಡನ್‌ನ್ನೇ ತೊಲಗಿಸ್ಲಿಕ್ಕೆ ಆಗ್ಲಿಲ್ಲ. ಇದೆಲ್ಲ ಮಾಡೋಕೆ ಸಾಕಷ್ಟು ಸಿದ್ಧತೆ ಬೇಕು ಸಾರ್, ಮೊದಲು ನಾವಿಲ್ಲಿಗೆ ಮೈಸೂರಿಗೆ ಬಂದ ಕೆಲಸ (ವಿದ್ಯಾಭ್ಯಾಸ) ಪೂರೈಸ್ತಿವಿ" ಎಂದರು. ಚಿಕ್ಕಮಗಳೂರಿನ ಎಸ್‌ವೈಎಸ್ ಸಮಾವೇಶದಲ್ಲಿ ಒಬ್ಬ ಯುವಕ ಮಲೆನಾಡು ಹಳ್ಳಿಗಳ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಹೇಳುತ್ತಿದ್ದ. ನಂಜುಂಡಸ್ವಾಮಿ "ಏನು ಬಹಳ ಮಾತಾಡ್ತೀರಿ? ಇಲ್ಲಿ ನೀವೆಷ್ಟು ಹಳ್ಳಿ ನೋಡಿದಿರಿ?" ಎಂದು ಕೇಳಿದರು. ಆ ಯುವಕ "ಮೈಸೂರು ಕಡೆ ನೀವೆಷ್ಟು ಹಳ್ಳಿ ನೋಡಿದಿರಿ? ಅರಗನಹಳ್ಳಿ ಅಂತ ಇದೆ. ನೀವು ನೋಡಿದ್ದೀರ" ಎಂದು ತಿರುಗಿಬಿದ್ದ. ಶಿವಮೊಗ್ಗದ ಒಂದು ಎಸ್.ವೈ.ಎಸ್ ಸಭೆಯಲ್ಲಿ "ನಂಜುಂಡಸ್ವಾಮಿ ವಿದ್ಯಾರ್ಥಿ ಚಳವಳಿ ಸ್ಥಗಿತವಾಗಿದೆ. ಮೌಢ್ಯ, ಜಾತಿ ಸಮಸ್ಯೆ, ನಿರುದ್ಯೋಗ ಹೆಚ್ಚಾಗಿದೆ. ನೀವೆಲ್ಲ ಸುಮ್ಮನಿದೀರಿ. ನಾನು ಕರೆ ಕೊಡ್ತಿದೀನಿ, ನೀವೆಲ್ಲ ಚಳವಳಿ ಪ್ರಾರಂಭಿಸಿ" ಎಂದರು. ಓರ್ವ ವಿದ್ಯಾರ್ಥಿನಿ ಎಂದು ನಿಂತು 'ಕರೆ ಕೊಡೋಕೆ ನೀವ್ಯಾರು? ಈ ತರಹ ಕರೆ ಕೊಡೋರು ಬಹಳ ಮಂದಿ ಇದ್ದಾರೆ. 'ನೀವೇನು ಜೆ.ಪಿ.ನಾ? ಲೋಹಿಯಾನಾ?' ಎಂದರು ಆದರೆ ಇಂತಹ ವಿರೋಧಗಳಿಗೇನು ಅವರು 'ಶಾಕ್' ಆಗುತ್ತಿರಲಿಲ್ಲ. ನಿಧಾನವಾಗಿ ಅವರು ಅವುಗಳನ್ನು ಬಂದ ದಾರಿಗೇ ಹಿಂದಿರುಗಿಸುತ್ತಿದ್ದರು.

***

ದಿನದಿಂದ ದಿನಕ್ಕೆ ಅನೇಕ ಯುವಕರಿಗೆ ಎಸ್.ವೈ.ಎಸ್ ಒಂದು ಅಗತ್ಯವೆನಿಸುವ ಕೇಂದ್ರವಾಯಿತು. ಏನಿಲ್ಲವೆಂದರೂ ಅನೇಕ ಸ್ನೇಹಿತರು ಭೇಟಿಯಾಗಿ ಹರಟೆ ಹೊಡೆಯಲಿಕ್ಕಾದರೂ ಸೇರುತ್ತಿದ್ದರು. ಹಳ್ಳಿಯ ಕಡೆಗಳಿಂದ ಬಂದಿದ್ದ ಅನೇಕರು ಬುದ್ಧಿವಂತರು; ಆದರೆ ಅವರಲ್ಲಿ ಸಂಕೋಚ, ಹಿಂಜರಿತದ ಸ್ವಭಾವವಿದ್ದುದು ಕ್ರಮೇಣ ಪರೆ ಕಳಚಿದಂತಾದರು. ಎಸ್‌ವೈಎಸ್ ಬೀರಿದ ಮತ್ತೊಂದು ಪ್ರಭಾವವೆಂದರೆ, ಯುವಕರಲ್ಲಿ ನೈತಿಕ ಬಲವನ್ನು ತುಂಬಿದುದು. ಸ್ವಾರ್ಥಕ್ಕಾಗಲಿ, ತತ್ಕಾಲದ ಲಾಭಕ್ಕಾಗಲಿ ಹಾತೊರೆಯದ ಮನಸ್ಥಿತಿಯನ್ನು ಬೆಳೆಸಿತು. ತಾವು ವ್ಯಾಸಂಗ ಮಾಡುತ್ತಿದ್ದ ವಿಷಯಕ್ಕಿಂತ ಭಿನ್ನವಾದ ಅನೇಕ ವಿಷಯಗಳ ಬಗ್ಗೆ ಮನಸ್ಸು ತೆರೆಯುವಂತೆ ಮಾಡಿತ್ತು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ದೃಢತೆಯೂ ಸ್ಥೈರ್ಯವೂ ಕಂಡುಬಂದವು. ಇದೇ ಕಾರಣದಿಂದ ಗಂಗೋತ್ರಿಯಲ್ಲಿದ್ದ ಕೆಲವು ಸಂಕುಚಿತ ದೃಷ್ಟಿಯ ಪ್ರೊಫೆಸರ್‌ಗಳನ್ನು ಎದುರುಹಾಕಿಕೊಂಡರು. ಹಾಸ್ಟೆಲ್‌ಗಳಲ್ಲಿ ಭ್ರಷ್ಟಾಚಾರವೆಸಗುತ್ತಿದ್ದ ವಾರ್ಡನ್‌ಗಳು, ಪ್ರಿಫೆಕ್ಟರ್‌ಗಳು ಮೂಲೆ ಸೇರಿದರು. ಕನ್ನಡದ ಬಗ್ಗೆ ಮೂಗು ಮುರಿಯುತ್ತಿದ್ದ ಕುಲಪತಿ ಶ್ರೀಮಾಲಿ ಬದಲಾದರು. ಕಲಾ ವಿಭಾಗದಲ್ಲಿ ಕೆಲವು ಪ್ರಾಧ್ಯಾಪಕರು ಕನ್ನಡದಲ್ಲಿ ಪಾಠ ಮಾಡಲು ಪ್ರಯತ್ನಿಸತೊಡಗಿದರು.

ಎಸ್.ವೈ.ಎಸ್. ರಾಜ್ಯಾದಂತ ವ್ಯಾಪಿಸಲಿಲ್ಲ, ಪ್ರಬಲ ಶಕ್ತಿಯಾಗಿ ಬೆಳೆಯಲಿಲ್ಲ–ಬಿಹಾರ್‌ನಲ್ಲಿ ಬೆಳೆದಂತೆ, ಸಮಾಜವಾದಿ ದೃಷ್ಟಿಯುಳ್ಳ ಯುವಕರನ್ನು ಸ್ಥಳೀಯವಾಗಿ, ಸಾಂದರ್ಭಿಕವಾಗಿ ಒಟ್ಟುಗೂಡಿಸುವ ಕಾರ್ಯವನ್ನು ಮಾಡುತ್ತಿತ್ತು. ನಮ್ಮ ನಡುವೆ ಇರುವ ಜಾತಿ–ಮತ, ದಾರಿದ್ರ್ಯ, ಭ್ರಷ್ಟತೆ, ಸರ್ವಾಧಿಕಾರಿ ಧೋರಣೆಗಳಿಂದ ಮುಕ್ತವಾದ ಮನಸ್ಥಿತಿಗೆ ಸಜ್ಜುಗೊಳಿಸಲು ಎಸ್.ವೈ.ಎಸ್. ಒಂದು ಜೀವಂತ ವೇದಿಕೆಯಾಗಿತ್ತು. ಇದನ್ನು ಮರೆಯಲು ಸಾಧ್ಯವಿಲ್ಲ.

ಸಾಹಿತ್ಯ ಸಂಸ್ಕೃತಿ ಇತ್ಯಾದಿ

ಇಂದಿನ ವಿಮರ್ಶೆಯ ಬಿಕ್ಕಟ್ಟುಗಳು

–ಡಾ. ರಾಮಲಿಂಗಪ್ಪ ಟಿ. ಬೇಗೂರು



ನಮ್ಮಲ್ಲಿ ಸಾಹಿತ್ಯವನ್ನು ವಿಮರ್ಶೆ ಮಾಡುವ ಕ್ರಿಯೆಯು ಒಂದು ಸಂಪ್ರದಾಯವಾಗಿ ಈಗಾಗಲೇ ಚಾಲ್ತಿಯಲ್ಲಿದೆ. ಪುಸ್ತಕ ವಿಮರ್ಶೆ, ಅಧ್ಯಯನ, ಸಂಶೋಧನೆ, ಸಂಗ್ರಹ–ಸಂಪಾದನೆ, ಮುನ್ನುಡಿ–ಬೆನ್ನುಡಿ, ಸಾಹಿತ್ಯ ಚರಿತ್ರೆ ರಚನೆ, ಒಡನಾಟ ಕಥನಗಳು, ಜೀವನ ಚರಿತ್ರೆಗಳು, ಸೂಕ್ತಿಸಂಗ್ರಹಗಳು, ಅಭಿನಂದನಾ ಗ್ರಂಥಗಳು, ಸಂಸ್ಮರಣ ಗ್ರಂಥಗಳು, ಪತ್ರಿಕಾ ಅಂಕಣಗಳು, ತೌಲನಿಕ ಅಧ್ಯಯನಗಳು, ಮಹಿಳಾ ಅಧ್ಯಯನಗಳು, ಸಾಂಸ್ಕೃತಿಕ ಅಧ್ಯಯನಗಳು ಇತ್ಯಾದಿ ಅನೇಕ ಬಗೆಗಳಲ್ಲಿ, ರೀತಿ ರಿವಾಜುಗಳಲ್ಲಿ ವಿಮರ್ಶೆಯು ಸೃಷ್ಟಿಯಾಗುತ್ತಿದೆ.

ಈ ಎಲ್ಲ ಬಗೆಗಳಲ್ಲಿ ಸೃಷ್ಟಿಯಾಗುತ್ತಿರುವ ವಿಮರ್ಶೆಯು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಸಾಹಿತ್ಯದ ಕಲ್ಪನೆಯಾದರೂ ಎಂಥದ್ದು? ಯಾವ ಸಾಹಿತ್ಯವು ಇಂದು ಹೆಚ್ಚು ವಿಮರ್ಶೆಗೆ ಗುರಿಯಾಗುತ್ತಿದೆ? ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ಯೋಚಿಸಿದರೆ ನಮ್ಮ ಪ್ರತಿಷ್ಠಿತ ಸಾಹಿತ್ಯ ಮಾತ್ರವೆ ವಿಮರ್ಶೆಗೆ ಗುರಿಯಾಗುತ್ತಿರುವುದು ಎದ್ದು ಕಾಣುತ್ತದೆ. ಶಾಸನಗಳಿಂದ ಪಂಪ ರನ್ನರಿಂದ ಹಿಡಿದು ಇಂದಿನ ಬೇಂದ್ರೆ ಕುವೆಂಪುವರೆಗಿನ ಪ್ರತಿಷ್ಠಿತ ಸಾಹಿತ್ಯ ಮಾತ್ರವೆ ವಿಮರ್ಶೆಗೆ ಗುರಿಯಾಗುತ್ತಿದೆ. ಆದರೆ ನಮ್ಮ ಚಿತ್ರಸಾಹಿತ್ಯ, ಸುಗಮ ಸಾಹಿತ್ಯ, ಶಿಶುಸಾಹಿತ್ಯ, ಜನಪ್ರಿಯ ಸಾಹಿತ್ಯಗಳು ಅಸ್ಪೃಶ್ಯವೆಂಬಂತೆ ಆಚೆ ಇಡಲ್ಪಟ್ಟಿವೆ. ಈಗೀಗ ಜನಪದ ಸಾಹಿತ್ಯವನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆಯು ಒಳಗೊಳ್ಳುತ್ತಿದೆ. ಒಳಗೊಂಡರೂ ಅದೆಲ್ಲ ಶಿಷ್ಟ ಸಾಹಿತ್ಯದೊಂದಿಗಿನ ತುಲನೆಯಲ್ಲಿ ತರತಮ ಮೌಲ್ಯಮಾಪನಕ್ಕೆ ಗುರಿಯಾಗುತ್ತಿದೆ! ಯಾಕೆ ಹೀಗೆ?

ನಮ್ಮ ವಿಮರ್ಶೆಯ ಪ್ರಾಗ್ರೂಪಗಳನ್ನು–ಬೇರುಗಳನ್ನು ಒಮ್ಮೆ ಅವಲೋಕನ ಮಾಡಿದರೆ ಇಂದಿನ ವಿಮರ್ಶೆಯ ಪರಿಕಲ್ಪನೆಗಳಿಗು ಹಿಂದಣ ಕಲ್ಪನೆಗಳಿಗು ಅಪಾರ ಅಂತರವಿರುವುದು ತಿಳಿಯುತ್ತದೆ. ವಿಮರ್ಶೆ ಎಂದರೆ ಕೇವಲ ಸಾಹಿತ್ಯದ ಗುಣದೋಷಗಳನ್ನು ನಿರ್ಣಯಿಸುವ ಅಥವಾ ಅದರ ಒಳ ಅರ್ಥಗಳನ್ನು ವಿವರಿಸುವ ಅಥವಾ ಸಾಹಿತ್ಯದ ಸ್ಥಾನ ನಿರ್ಣಯ ಮಾಡುವ ಸಂಶೋಧಕ–ನ್ಯಾಯಾಧೀಶ ಪಾತ್ರದ್ದು ಮಾತ್ರ ಅಲ್ಲ. ಸಾಹಿತ್ಯ ವಿಮರ್ಶೆಯು ಅಂತಿಮವಾಗಿ ಸಮಾಜದ ವಿಮರ್ಶೆಯೆ ಆಗಿದೆ. ಸಾಹಿತ್ಯವು ಹೇಗೆ ತನ್ನದೆ ಆದ ಬೇರೆ ಬೇರೆ ಪ್ರಕಾರಗಳ ಮೂಲಕ ಸಮಾಜವನ್ನು ಅನುಸಂಧಾನಕ್ಕೆ ಗುರಿಮಾಡುತ್ತದೊ ಹಾಗೆಯೆ ವಿಮರ್ಶೆಯು ಕೂಡ ಸಮಾಜವನ್ನೆ ಅನುಸಂಧಾನಕ್ಕೆ ಗುರಿ ಮಾಡುತ್ತದೆ. ಕಾವ್ಯ, ಕತೆ, ಕಾದಂಬರಿ ಹೀಗೆ ಈ ಮೊದಲಾದುವು ಹೇಗೆ ಒಂದೊಂದು ಸಾಹಿತ್ಯ ಪ್ರಕಾರಗಳೋ ಹಾಗೆ ವಿಮರ್ಶೆ ಕೂಡ ಒಂದು ಸಾಹಿತ್ಯ ಪ್ರಕಾರ. ಹಾಗೆ ನೋಡಿದರೆ ಇದು ಒಂದು ಸಾಹಿತ್ಯ ಪ್ರಕಾರ ಮಾತ್ರ ಅಲ್ಲ; ಇದೊಂದು ಬರವಣಿಗೆಯ ವಲಯ. ಇದು ಗದ್ಯರೂಪಿಯಾಗಿ ಮಾತ್ರ ಅಥವಾ ಪ್ರಬಂಧ ರೂಪಿಯಾಗಿ ಮಾತ್ರ ಪ್ರಕಟವಾಗುವ ಒಂದು ಪ್ರಕಾರ ಅಲ್ಲ. ಹಲವು ಪ್ರಕಾರಗಳಲ್ಲಿ ಪ್ರಕಟವಾಗಬಹುದಾದ ಒಂದು ದೊಡ್ಡ ಶಿಸ್ತಾಗಿ ಇದು ಇಂದು ಬೆಳೆದಿದೆ. ನಮ್ಮ ಹಳೆಯ ಸಾಹಿತ್ಯವನ್ನು ಮತ್ತು ಸಾಹಿತ್ಯದ ಅನುಸಂಧಾನದ ಚರಿತ್ರೆಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ.

ನಮ್ಮ ಪರಂಪರೆಗಳಲ್ಲಿ ಇರುವ ಮಲ್ಲಿಕಾರ್ಜುನನ *ಸೂಕ್ತಿಸುಧಾರ್ಣವ*, ಮಲ್ಲಕವಿ ಮತ್ತು ಅಭಿನವ ವಾದಿವಿದ್ಯಾನಂದರ *ಕಾವ್ಯಸಾರಗಳು*, ಹಲಗೆಯಾರ್ಯ, ಗೂಳೂರು ಸಿದ್ಧವೀರಣ್ಣ, ಗುಮ್ಮಳಾಪುರದ ಸಿದ್ಧಲಿಂಗಯತಿ, ಶಿವಗಣಪ್ರಸಾದಿ ಮಹದೇವಯ್ಯಾದಿಗಳ *ಶೂನ್ಯಸಂಪಾದನೆಗಳು*, ಕಲ್ಲುಮಠದ ಪ್ರಭುದೇವನ *ಲಿಂಗಲೀಲಾವಿಲಾಸ ಚಾರಿತ್ರ್ಯ* ಮೊದಲಾದ ಸಂಪಾದನಾ ಗ್ರಂಥಗಳನ್ನು ನೋಡಿದರೆ; ಹರಿಹರ, ಚಾಮರಸ, ಎಳಂದೂರ ಹರಿಹರೇಶ್ವರ, ಸಿದ್ಧನಂಜೇಶ, ರಾಘವಾಂಕಾದಿಗಳ ಶರಣಚರಿತ್ರೆಯ ಕಾವ್ಯಗಳನ್ನು ನೋಡಿದರೆ, ಪಿ.ಸಿ.ಬ್ರೌನನ ಪ್ರಭುಲಿಂಗಲೀಲೆ ಅನುವಾದ, ಬಸವಕವಿಯ ಬಸವಪುರಾಣ ಅನುವಾದ ಇತ್ಯಾದಿಗಳನ್ನು ನೋಡಿದರೆ; ಹಿರಣ್ಯಗರ್ಭನ *ವಿಶ್ವಕೃತಿ ಪರೀಕ್ಷಣಂ*, ದೇವಚಂದ್ರನ *ರಾಜಾವಳಿ ಕಥಾಸಾರಗಳನ್ನು* ನೋಡಿದರೆ ನಮ್ಮಲ್ಲಿ ಸಾಹಿತ್ಯದ ಅನುಸಂಧಾನವು ಹೇಗೆಲ್ಲ ನಡೆದಿದೆ ಎಂಬುದು ತಿಳಿಯುತ್ತದೆ. ಅಲ್ಲದೆ ನಮ್ಮ ಯಕ್ಷಗಾನಗಳು, ಗಮಕಗಳು, ತಾಳಮದ್ದಲೆಗಳು, ಕೇಳಿಕೆಗಳು, ತತ್ವಕ್ಕೆ ಹಾಕುವುದು, ಬಯಲಾಟಗಳು, ಹರಿಕತೆಗಳು ಇತ್ಯಾದಿ ಪ್ರದರ್ಶನ ಕಲೆಗಳು ಮತ್ತು ಆಚಾರಗಳೊಂದಿಗಿನ ಸಾಹಿತ್ಯದ ಸಂಬಂಧಗಳನ್ನು ನೋಡಿದರೆ ನಮ್ಮ ಸಾಹಿತ್ಯದ ಅನುಸಂಧಾನ ಹೇಗೆಲ್ಲ ನಡೆದಿದೆ ಎಂಬುದು ತಿಳಿಯುತ್ತದೆ. ಈ ಸಾಹಿತ್ಯದ ಅನುಸಂಧಾನದ ಪರಂಪರೆಗಳಲ್ಲಿ ಅನೇಕ ಬಗೆಯಲ್ಲಿ ಸಾಹಿತ್ಯವನ್ನು ಬಾಳಿಗೆ ಎತ್ತಿಕೊಳ್ಳುವ ವಿಮರ್ಶಾ ವಿನ್ಯಾಸಗಳಿವೆ. ಆದರೆ ಈ ರೀತಿಯ ಪಾರಂಪರಿಕ ವಿಮರ್ಶಾ ವಿನ್ಯಾಸಗಳಿಂದ ನಾವಿಂದು ಬಹಳ ದೂರ ಬಂದಿದ್ದೇವೆ. ಯಾಕೆ ಹೀಗಾಯಿತು? ವಿಮರ್ಶೆಯು ಸಾಮಾಜಿಕ ಸ್ತರದಿಂದ ಶೈಕ್ಷಣಿಕ ಶಿಸ್ತಾಗಿ ಮಾತ್ರವೆ ಹೊರಳಿಕೊಂಡ, ಯೂನಿವರ್ಸಿಟಿ–ಕಾಲೇಜು ವಿಚಾರಗೋಷ್ಠಿಗಳ ವಿದ್ವಾಂಸ ಮಹಾಶಯರ ಬೌದ್ಧಿಕ ಚಟುವಟಿಕೆಯಾಗಿ ಹೊರಳಿಕೊಂಡ ಪರಿಣಾಮವೆ ಇದಾಗಿದೆ. ಬಹುಪರಂಪರೆಗಳ ಏಕರೂಪೀಕರಣ ಮತ್ತು ಶೈಕ್ಷಣಿಕ ಶಿಸ್ತೀಕರಣಗಳ ಪರಿಣಾಮವೆ ಇದಾಗಿದೆ.

ಜಾತಿ, ಲಿಂಗ, ಪ್ರಾದೇಶಿಕತೆ, ಸ್ವಜನ ಪಕ್ಷಪಾತದ ರಾಜಕಾರಣಗಳು; ಪಾಂಡಿತ್ಯ ಪ್ರದರ್ಶನ, ಕಡ ತಂದ ಅನ್ಯ ಸಿದ್ಧಾಂತಗಳ ಅನ್ವಯೀಕರಣಗಳು ಹೀಗೆ ಹತ್ತು ಹಲವು ಬಿಕ್ಕಟ್ಟುಗಳಿಂದ ನಮ್ಮ ವಿಮರ್ಶೆಯು ಇಂದು ಜರ್ಝರಿತವಾಗಿ ಹೋಗಿದೆ. ವಿಮರ್ಶೆಯ ಕ್ಷೇತ್ರಕ್ಕೆ ಹೊಸದಾಗಿ ಬರುವ ಹಲವರಿಗೆ ಇಂದಿನ ಸಿದ್ಧಾಂತಗಳು–ಪರಿಭಾಷೆಗಳನ್ನು ತಿಳಿದುಕೊಳ್ಳುವುದರಲ್ಲೆ ಆಯುಷ್ಯ ಸೋರಿಹೋಗಬಹುದು ಎನ್ನಿಸುತ್ತಿದೆ. *ಮಾರ್ಕ್ಸ್‌ವಾದಿ ವಿಮರ್ಶೆ, ಉದಾರವಾದಿ ವಿಮರ್ಶೆ, ವಿವರಣಾತ್ಮಕ ವಿಮರ್ಶೆ, ರಾಚನಿಕ ಸಿದ್ಧಾಂತ, ನಿರಚನವಾದಿ ವಿಮರ್ಶೆ, ಪೌರ್ವಾತ್ಯವಾದ, ನವಚಾರಿತ್ರಿಕ ವಾದ, ಓದುಗ ಸ್ಪಂದನ ಸಿದ್ಧಾಂತ, ಸ್ತ್ರೀವಾದ* ಹೀಗೆ ಅನೇಕ ವಾದಗಳನ್ನು ತಿಳಿಯುವುದಕ್ಕೇ ಮಿದುಳಿನ ಬೆವರು ಇಳಿದುಹೋಗುತ್ತಿದೆ. ಒಂದು ಕಡೆಯಿಂದ ಸಂಸ್ಕೃತದಿಂದ ಕಡ ತಂದ ಮೀಮಾಂಸಾ ಸಿದ್ಧಾಂತಗಳು ಇನ್ನೊಂದು ಕಡೆ ಇಂಗ್ಲಿಶಿನಿಂದ ದಾಳಿ ಮಾಡುತ್ತಿರುವ ಪರಿಭಾಷೆ, ಸಿದ್ಧಾಂತಗಳು ಇವೆಲ್ಲವುಗಳಿಂದ ಇಂದಿನ ವಿಮರ್ಶೆಯ ವಿದ್ಯಾರ್ಥಿ ಬಸವಳಿಯುವಂತೆ ಆಗಿದೆ

ಇಂದು ನಮ್ಮ ವಿಮರ್ಶೆಯನ್ನು ಅನೇಕ ಸಮಸ್ಯೆಗಳು ಕಾಡುತ್ತಿವೆ. ನಮ್ಮ ಕವಿ, ಅನ್ಯ ಕವಿ; ನಮ್ಮ ಪರಂಪರೆ, ಅನ್ಯ ಪರಂಪರೆ ಎಂಬ ಭಾವಗಳಿಂದ ವಸ್ತುನಿಷ್ಠತೆಯು ತೀರಾ ಕಡಿಮೆಯಾಗಿ ಇಲ್ಲಿ ವ್ಯಕ್ತಿನಿಷ್ಠತೆಯು ಇಂದು ತಾಂಡವವಾಡುತ್ತಿದೆ. ಪ್ರಾದೇಶಿಕ ಮೀಸಲಾತಿ, ಲಿಂಗಾಧಾರಿತ ಮೀಸಲಾತಿ, ಜಾತಿ ಆಧಾರಿತ ಮೀಸಲಾತಿ ಇತ್ಯಾದಿಗಳು ವಿಮರ್ಶೆಯಲ್ಲಿ ಕೂಗುಗಳಾಗಿ ಕೇಳಿಬರುತ್ತಿವೆ. ನಿರ್ದಿಷ್ಟವಾದ ಸಂದರ್ಭಗಳು ಮತ್ತು ಸಂಬಂಧಗಳು ಇಂದು ವಿಮರ್ಶೆಯನ್ನು ಹೆಚ್ಚು ಸೃಷ್ಟಿಸುತ್ತಿರುವುದರಿಂದ ಸಾಂದರ್ಭಿಕತೆಯ ರಾಜಕಾರಣಗಳು ಮತ್ತು ಸಂಬಂಧಿಕತೆಯ ರಾಜಕಾರಣಗಳು; ಪರಿವಾರ ಪ್ರಜ್ಞೆಗಳು ವಿಮರ್ಶೆಯನ್ನು ಬಾಧಿಸುತ್ತಿವೆ. ಮುದ್ರಣ ಮಾಧ್ಯಮವು ಇಂದು ಪ್ರಬಲವಾಗಿ ಬೆಳೆದಿರುವುದರಿಂದ ಸಾಹಿತ್ಯದ ಅನುಸಂಧಾನಗಳಿಗು ಮುದ್ರಣ ಮಾಧ್ಯಮಕ್ಕು ಅನ್ಯೋನ್ಯವಾದ ಸಂಬಂಧಗಳು (ಅಕ್ರಮ ಸಂಬಂಧಗಳು?) ಬೆಳೆದಿವೆ. ಹಾಗಾಗಿ ವಿಮರ್ಶೆಯನ್ನು ಒಳಗೊಂಡಂತೆ ಇಡೀ ಸಾಹಿತ್ಯವನ್ನೆ *ಪ್ರಿಂಟ್ ಕ್ಯಾಪಿಟಲಿಸಮ್ಮು* ಅಂದರೆ ಮುದ್ರಣ ಬಂಡವಾಳಶಾಹಿಯು ನಿಯಂತ್ರಿಸುತ್ತಿದೆ. ಈ ಎಲ್ಲವುಗಳನ್ನೂ ನಾವಿಂದು ಗಂಭೀರವಾಗಿ ಚಿಂತಿಸಬೇಕಿದೆ.

ಇನ್ನು ವಿಮರ್ಶೆಯ ಭಾಷೆ ಮತ್ತು ಪರಿಭಾಷೆಗೆ ಬಂದ್ರೆ ಅದರ ಬಗ್ಗೆ ಹೇಳ್ಲೇಬೇಕಾಗಿಲ್ಲ. ಅದೊಂದು ಬಲು ದೊಡ್ಡ ಭಯೋತ್ಪಾದಕ ಕ್ಷೇತ್ರ. ಒಂದು ಕಡೆ ಸಾಹಿತ್ಯ ವಿಮರ್ಶೆಗೆ ಹೊಸ ದಾರಿಗಳನ್ನು ಮಾಡಿಕೊಳ್ಳುವುದನ್ನು ನಮ್ಮ ಪದವಿ ಸ್ನಾತಕ ಪದವಿಗಳಲ್ಲಿ ನಾವು ಕಲಿಸದೆ ಹಳೆಯ ದಾರಿಗಳನ್ನು

ಕಾವ್ಯಮೀಮಾಂಸೆ, ವಿಮರ್ಶೆ ಅಂತ (ಪಾಶ್ಚಾತ್ಯ ಭಾರತೀಯ ಕನ್ನಡ ಹೀಗೆ ಮೂರೂ ನೆಲೆಯಲ್ಲಿ) ವಿದ್ಯಾರ್ಥಿಗಳ ಪ್ರಾಣ ತೆಗೆಯುತ್ತಿದ್ದೇವೆ. ಇನ್ನೊಂದು ಕಡೆ ವಿಮರ್ಶಕರು ತಮ್ಮ ಆಚಾರದಲ್ಲಿ (ಬಳಕೆಯಲ್ಲಿ) ತಮ್ಮ ತಮ್ಮ ನಾಡು-ಊರು-ಮನೆ ನುಡಿಗಳನ್ನು ಬಳಸದೆ ಮಾನಕ ಭಾಷೆ-ಪರಿಭಾಷೆಯನ್ನು ಬಳಸುತ್ತ ಪರಿಭಾಷೆಯ ಕಗ್ಗಾಡಿನ ಜೊತೆಗೆ ಇನ್ನಷ್ಟು ಕಗ್ಗಾಡನ್ನು ಬೆಳೆಸುತ್ತಿದ್ದಾರೆ. ನಮ್ಮ ಸಾಹಿತ್ಯಗಳಲ್ಲಿ (ಕವಿತೆ, ಕಾದಂಬರಿ, ನಾಟಕಗಳಲ್ಲಿ) ಪ್ರಾದೇಶಿಕ ಭಾಷೆ ಸಾಕಷ್ಟು ನುಗ್ಗಿ ಬಂದಿದೆ. ಆದರೆ ನಮ್ಮ ವಿಮರ್ಶೆ ಮಾತ್ರ ಮಾನಕ ಭಾಷೆಗೇ ಇನ್ನೂ ಜೋತುಬಿದ್ದಿದೆ. ಇದು ತಪ್ಪಬೇಕು. ಸರಳವಾಗಿ ನಮ್ಮ ಆಡುಕನ್ನಡಗಳಲ್ಲೆ ನಮಗೆ ಅನ್ನಿಸಿದ್ದನ್ನು ವಿಮರ್ಶೆಯಲ್ಲಿ ಬರೆಯುವಂತಾಗಬೇಕು. ಆಗ ಹೊಸಬರಿಗು ತಮ್ಮ ಭಾಷೆಯನ್ನು ಕೊಂದುಕೊಂಡು ಹೊಸ ಭಾಷೆ ಪರಿಭಾಷೆಯನ್ನು ಕಲಿತು ವಿಮರ್ಶೆಗೆ ಪ್ರವೇಶಿಸಬೇಕಾದ ಕಷ್ಟ ಇರುವುದಿಲ್ಲ. ಅಂತು ವಿಮರ್ಶೆಗೆ ಎಲ್ಲ ದಿಕ್ಕುಗಳಲ್ಲಿ ಬಿಕ್ಕಟ್ಟುಗಳು ಇವೆ. ಟಕಾರ್ ಅಂತ ಇವೆಲ್ಲ ಒಂದೇ ಏಟಿಗೆ ಪರಿಹಾರ ಆಗಿಬಿಡಬಹುದಾದ ಬಿಕ್ಕಟ್ಟುಗಳಲ್ಲ. ಇವಕ್ಕೆ ಒಂದು ಆಂದೋಲನವೆ ನಡೆಯಬೇಕು.

ಪುಸ್ತಕಾವಲೋಕನ

ಪು: ಉರಿದ ಪಂಜು (ಕೆ. ರಾಮದಾಸ್ ನೆನಪಿನ ಸಂಪುಟ) ಸಂ: ಡಿ.ಎಸ್. ನಾಗಭೂಷಣ, ಪ್ರೊ. ಎಚ್.ಎಲ್. ಕೇಶವ ಮೂರ್ತಿಪ್ರ: ಅಭಿರುಚಿ ಪ್ರಕಾಶನ, ಮೈಸೂರು-೯ ಪು:೫೭೪ ಬೆಲೆ:ರೂ. ೩೭೫/-



'ಉರಿದ ಪಂಜು" – ಇದು ಮೈಸೂರಿನ ಹೋರಾಟಗಾರ, ಸಮಾಜವಾದಿ ಪ್ರೊ. ಕೆ.ರಾಮದಾಸ್ ಅವರನ್ನು ಕುರಿತ, ಹಾಗು ಅವರದೇ ಕೆಲವು ಲೇಖನಗಳು ಮತ್ತು ಸಂದರ್ಶನ ಗಳನ್ನೊಳಗೊಂಡ ಸಂಪುಟ. ಇದರಲ್ಲಿ ೫೪೬ ಪುಟಗಳ ಬರಹ ಹಾಗೂ ೮ ಪುಟಗಳಲ್ಲಿ ಅಪೂರ್ವ ಛಾಯಾಚಿತ್ರಗಳಿವೆ.

ಇಂತಹ ಸ್ಮರಣ ಸಂಪುಟಗಳು, ಅಭಿನಂದನಾ ಗ್ರಂಥಗಳು, ಜೀವನ ಚರಿತ್ರೆಗಳು ಮತ್ತು ಆತ್ಮಚರಿತ್ರೆಗಳು ಒಂದು ನಾಡಿನ ಇತಿಹಾಸಕ್ಕೆ ಉತ್ತಮ ಸಾಮಗ್ರಿ ಒದಗಿಸುತ್ತವೆ. ಆದರೆ ಈ ರೀತಿಯ ಗ್ರಂಥಗಳಿಗೆ ತನ್ನದೇ ಆದ ಮಿತಿಯೂ ಇದೆ. ಅಗಲಿ ಹೋದವರ ಬಗ್ಗೆ, ಹಿರಿಯರ ಬಗ್ಗೆ ಕೆಟ್ಟದ್ದನ್ನು ಬರೆಯಬಾರದು ಎಂಬ ಸಂಪ್ರದಾಯಗಳಿಂದ, ವಿವೇಕಯುತವಾದ ವಿಶ್ಲೇಷಣೆಗಳಿಗೆ ಅವಕಾಶವೇ ಇರುವುದಿಲ್ಲ. ಇವುಗಳಿಗೆ ದಂತಕಥೆ, ಹರಿಕಥೆಗಳ ಗುಣ ಬಂದ ಬಿಡುತ್ತದೆ. ಈ "ಮಿತಿ" – ಸಂಪಾದಕರಿಗೆ ಚೆನ್ನಾಗಿಯೇ ತಿಳಿದಿದೆ. ಇದನ್ನು ನಮ್ಮ ಬರಹಗಾರರು ಗಮನಿಸುವ ಅಗತ್ಯವಿದೆ. ಆದರೆ ಈ ಮಿತಿಗಳ ನಡುವೆಯೇ ಈ ಕೃತಿಯಲ್ಲಿ ಪ್ರೊ. ಕೆ.ರಾಮದಾಸ್ ನಂಬಿದ ಮೌಲ್ಯಗಳ ಹಾಗು ಕ್ರಮಿಸಿದ ಹಾದಿ ಮತ್ತು ಸಾರ್ವಜನಿಕ ನಡವಳಿಕೆಗಳ ವಿಮರ್ಶೆ ಹಾಗು ಮೌಲ್ಯಮಾಪನ ಆಗಬೇಕೆಂಬ ಇರಾದೆಯೂ ಈ ಪುಸ್ತಕದಲ್ಲಿ ಇದೆ. ಸ್ವಲ್ಪಮಟ್ಟಿಗೆ ಇದು ಸಾಧ್ಯವೂ ಆಗಿದೆ.

ಈ ಪುಸ್ತಕದ ಜೊತೆಗೆ, ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಗೋಪಾಲಗೌಡರ ಸಂಪುಟ, ಅಭಿರುಚಿ ಪ್ರಕಾಶನದ "ಪ್ರೊ. ಎಂ.ಡಿ.ಎನ್", ಕಡಿದಾಳ್ ಶಾಮಣ್ಣನವರ ಆತ್ಮಕಥೆ ಹಾಗು ಅವರದ್ದೇ ಆದ "ಆ ದಶಕ", ತೇಜಸ್ವಿಯವರ "ಅಣ್ಣನ ನೆನಪು", ರಾಜೇಶ್ವರಿಯವರ "ನನ್ನ ತೇಜಸ್ವಿ" ಕೃತಿಗಳನ್ನು ಓದಬೇಕು. ಇವುಗಳನ್ನು ಒಟ್ಟಿಗೆ ಪರಿಶೀಲಿಸಿದಾಗ, ಸ್ವಾತಂತ್ರೋತ್ತರ ಕರ್ನಾಟಕದ ಸಾರ್ವಜನಿಕ ಬದುಕಿನ, ನಡವಳಿಕೆಗಳ ಆತ್ಮವಿಮರ್ಶೆ ಹಾಗು ಮೌಲ್ಯಮಾಪನ ನಡೆದಿರುವುದನ್ನು ಗಮನಿಸಬಹುದು. ಇವು ನಮ್ಮ ಮುಂದಿನ ಪಯಣಕ್ಕೆ ಬೆಳಕು ತೋರಬಲ್ಲಷ್ಟು ಉಪಯುಕ್ತವೂ ಆಗಿದೆ.

ಪ್ರೊ. ಕೆ.ರಾಮದಾಸ್‌ರನ್ನೂ ರೂಪಿಸಿದ ಮತ್ತು ಕಟ್ಟಿದ ಸಮಾಜವಾದಿ ಚಳುವಳಿಯ ವಿವರಗಳು ಈ ಕೃತಿಯ ಎಲ್ಲ ಕಡೆಯೂ ಬಂದಿದೆ. ಸುಮಾರು ೪೦ ವರ್ಷಗಳಿಗೂ ಮೀರಿದ ಸಮಯದ ಪ್ರತಿಭಟನೆ, ಹೋರಾಟ, ಚೀರಾಟ, ತಹ-ತಹ, ಆಶೆ-ನಿರಾಶೆ ಎಲ್ಲ ಈ ಕೃತಿಯಲ್ಲಿ ಅಡಕವಾಗಿದೆ.

ಈ ಸಂಪುಟದಲ್ಲಿ, ಚಿತ್ರಸಂಪುಟ ಹೊರತುಪಡಿಸಿ, ೯ ಶೀರ್ಷಿಕೆಗಳಲ್ಲಿ ಬರಹಗಳು ಹರಡಿವೆ. ರಾಮದಾಸರ ಬಾಲ್ಯ ಕುರಿತ ಲೇಖನ ಹಾಗೂ ಛಾಯಾಚಿತ್ರಗಳನ್ನು ಅವರ ಗೆಳೆಯ ವಿಲಿಯಂ ಅವರ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆ.ಈ ಸಂಪುಟದ 'ಪ್ರಚಲಿತ' ವಿಭಾಗದಲ್ಲಿ ಈ ನಾಡಿನ ಜ್ವಲಂತ ಸಮಸ್ಯೆಗಳಾದ ಹಾಗು ಇಂದಲ್ಲ ನಾಳೆ ನಾವು ಪರಿಹಾರ ಕಂಡುಕೊಳ್ಳಲೇಬೇಕಾದ ಸೆಕ್ಯುಲರಿಸಂ, ಕೋಮುವಾದ ಹಾಗು ನಾಳಿನ ಸಮಾಜವಾದದ ಬಗ್ಗೆ ನಾಲ್ಕು ವಿಶೇಷ ಲೇಖನಗಳು ಇದೆ. ಇವು ಅಭ್ಯಾಸಯೋಗ್ಯವಾದ ಬರಹಗಳಗಿವೆ.

ಪ್ರೊ. ಕೆ.ರಾಮದಾಸ್ ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. ಕನ್ನಡ ಸಾಹಿತ್ಯದ ಗಂಭೀರ ವಿಧ್ಯಾರ್ಥಿ. ಅವರ ವಿಧ್ಯಾರ್ಥಿ ದೆಸೆಯಲ್ಲಿ 'ನವ್ಯ' ಸಾಹಿತ್ಯ ಕುಡಿಯೊಡೆದು ಹಬ್ಬುತ್ತಿದ್ದ ಕಾಲ. ಪ್ರಖ್ಯಾತ ಲೇಖಕರುಗಳಾದ ತೇಜಸ್ವಿ, ಲಂಕೇಶ್ ಇವರ ಒಡನಾಡಿಗಳು. ಆದರೂ ರಾಮದಾಸ್ ಬರೆದದ್ದು ಬಹಳ ಕಡಿಮೆ. ಅವರ ಈ ಬರಹಗಳು ಈ ಕೃತಿಯ 'ನೇರ ಮಾತು' ವಿಭಾಗದಲ್ಲಿ ಇವೆ. ಈ ಬರಹಗಳು ಇವರ ಪ್ರಖರ, ನಿಖರ ಹಾಗು ಸ್ಪಷ್ಟ ಚಿಂತನೆ ಹಾಗು ಹಾಸ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ. "ಮುಖಾ-ಮುಖಿ" ವಿಭಾಗದಲ್ಲಿ ಪ್ರೊ. ಕೆ.ರಾಮದಾಸ್ ಅವರು ನೀಡಿದ ೪ ಸಂದರ್ಶನಗಳನ್ನು ಒಳಗೊಂಡಿದೆ. ರಾಮದಾಸರ 'ವಾಚಕರವಾಣಿ' ಪತ್ರಗಳು ಹಾಗೂ ಅವರ ಬರಹಗಳಂತೆಯೇ ಈ ಸಂದರ್ಶನಗಳೂ ಕೂಡ ನೇರ ಹಾಗು ದಿಟ್ಟವಾದ ಬರಹಗಳು.

ಇನ್ನುಳಿದ ಸೂಮಾರು ೩೦೦ ಪುಟಗಳಲ್ಲಿ ಅವರ ಗೆಳೆಯರು, ಒಡನಾಡಿಗಳು, ವಿದ್ಯಾರ್ಥಿಗಳು, ಮನೆಯವರು ಮತ್ತು ಅವರಿಂದ ಸ್ಫೂರ್ತಿ ಹೊಂದಿದ ಕಿರಿಯರು ಬರೆದ ಲೇಖನಗಳು ಇವೆ. ಈ ಗುಂಪಿನಲ್ಲಿ ಡಾ. ಯು.ಆರ್. ಅನಂತಮೂರ್ತಿ ಮತ್ತು ಪ್ರೊ. ಎಚ್.ಎಲ್. ಕೇಶವಮೂರ್ತಿಯವರ ಬರಹಗಳು ಗಮನಿಸಬೇಕಾದಂತಹವು. ತಮ್ಮ ಕಾದಂಬರಿ 'ಅವಸ್ಥೆ' ಪ್ರಕಟಗೊಂಡಾಗ, ಅದು ಗೋಪಾಲಗೌಡರನ್ನು ಕೆಟ್ಟದಾಗಿ ಚಿತ್ರಿಸುತ್ತದೆ ಎಂದು ರಾಮದಾಸ್ ಅನೇಕ ಸಂದರ್ಭದಲ್ಲಿ ಪ್ರತಿಭಟಿಸಿದ್ದನ್ನೂ, ಅನಂತರದ ದಿವಸಗಳಲ್ಲಿ ಆ ಬಗ್ಗೆ ವಿಷಾದಿಸಿದ್ದನ್ನೂ ಅನಂತಮೂರ್ತಿ ದಾಖಲಿಸುತ್ತಾರೆ. ಹಾಗೆಯೇ ಗೋಕಾಕ್ ವರದಿ ಸಂದರ್ಭದಲ್ಲಿನ ವಿವರಗಳನ್ನು ಪ್ರೊ. ಎಚ್.ಎಲ್.ಕೆ ನೀಡುತ್ತಾರೆ. 'ಪ್ರಗತಿರಂಗ' ಮಹತ್ವಾಕಾಂಕ್ಷಯ ಸಂಘಟನೆ. ಅದಕ್ಕೆ ವಿಸ್ತೃತವಾದ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗಿತ್ತು. ಅದರ ಹುಟ್ಟು, ಬೆಳವಣಿಯನ್ನು ಬಿ.ಚಂದ್ರೇಗೌಡರ ಲೇಖನ ಪರಿಚಯಿಸುತ್ತದೆ. ಈ ಸಂಘಟನೆ ಆ ಕಾಲಕ್ಕೆ ಎಲ್ಲ ರಾಜಕೀಯ ಪಕ್ಷಗಳನ್ನು ಬೆಚ್ಚುವಂತೆ ಮಾಡಿದ್ದಂತೂ ನಿಜ.

ತರಗತಿಯಲ್ಲಿ ಮೇಷ್ಟ್ರಾಗಿ ರಾಮದಾಸ್ ಹಲವು ಹೋರಾಟಗಾರರನ್ನು ತಯಾರು ಮಾಡಿದ್ದಾರೆ. ಪ್ರತಿಯೊಂದಯ ಚಳುವಳಿ, ಪ್ರತಿಭಟನೆಯ ಹಿಂದೆ ಒಬ್ಬ ಶಿಕ್ಷಕ ಇರುತ್ತಾನೆ. ಇಂತಹ ಶಿಕ್ಷಕ ರಾಮದಾಸ್‌ರಿಂದ ತರಗತಿಯ ಒಳಗೆ ಮತ್ತು ಹೊರಗೆ ಪಾಠ ಹೇಳಿಸಿಕೊಂಡ ಶಿಷ್ಯರು ಬರೆದ ಇಲ್ಲಿನ ಲೇಖನಗಳು ಮಹತ್ವದ್ದಾಗಿವೆ. ಇವು ಅಂತಹ ಶಿಕ್ಷಕರ ಅಗತ್ಯವನ್ನು ಒತ್ತಿ ಹೇಳುತ್ತವೆ. ಇಂತಹ ಶಿಕ್ಷಕರು ಕಣ್ಮರೆಯಾಗುತ್ತಿರುವುದೇ ನಮ್ಮ ಯುವಜನಾಂಗ ದಿಕ್ಕೆಟ್ಟಂತಾಗಿರಲು ಕಾರಣ ಎನ್ನಬಹುದಾಗಿದೆ.

ಪ್ರೊ. ಕೆ.ರಾಮದಾಸ್‌ರ ಪತ್ನಿ ಆರ್. ನಿರ್ಮಲಾ, ಮಗಳು ಸ್ನೇಹಾ, ಅಳಿಯ ಓಂಕಾರ್‌ರ ಬರಹಗಳಲ್ಲಿ ಹೋರಾಟಗಾರನೊಬ್ಬನ ವಾತ್ಸಲ್ಯಮಯ, ಆದರ್ಶಮಯ ಚಿತ್ರಣ ಇದೆ.

ಸಮಾಜವಾದಿ ಸಾಹಿತ್ಯಕ್ಕೆ ಈ ಕೃತಿ ಒಂದು ಹೊಸ ಮತ್ತು ಅರ್ಥಪೂರ್ಣವಾದ ಸೇರ್ಪಡೆಯಾಗಿದೆ. ಇದು ಇಂದಿನ ಯುವಜನರನ್ನು

– ಕೆ.ವೆಂಕಟರಾಜು

ಈ ಸಂಚಿಕೆಯ ಮುಖಪುಟ ವಿನ್ಯಾಸ : ರವಿ ಪ್ರಸಾದ್ ಎಚ್.ಆರ್.
ಒಳಪುಟಗಳ ರೇಖಾಚಿತ್ರಗಳು : ಡಾ. ಸಿ.ರವೀಂದ್ರನಾಥ್
ಒಳಪುಟಗಳ ವಿನ್ಯಾಸ: ಡಿ.ಎಸ್. ನಾಗಭೂಷಣ
ಮುದ್ರಕರು: ಚಿತ್ರಕೂಟ ಪ್ರಿಂಟರ್ಸ್, ದುರ್ಗಿಗುಡಿ,
ಶಿವಮೊಗ್ಗ-೫೭೭೨೦೧ ದೂರವಾಣಿ:೦೮೧೮೨-೨೬೦೮೯೪

ಹಾರ್ದಿಕ ಶುಭಾಷಯಗಳೊಂದಿಗೆ

ಶ್ರೀ ಹನುಮಂತಪ್ಪ ಆರ್. ಬಿ.

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು

ಅಮೃತ ಯುವಕ ಸಂಘ (ರಿ), ಅಮೃತ ನಗರ, ದಾವಣಗೆರೆ ತಾ.

ಹಾರ್ದಿಕ ಶುಭಾಷಯಗಳೊಂದಿಗೆ

ಶ್ರೀ ಎಸ್. ನಾಗರಾಜ್

ರೋವರ್ ಸ್ಕೌಟ್ ಲೀಡರ್ (ಹಿಮಾಲಯನ್ ವುಡ್ ಬ್ಯಾಡ್ಜ್)

ಭಾರತ್ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆ, ದಾವಣಗೆರೆ ಜಿಲ್ಲೆ.

ಹಾರ್ದಿಕ ಶುಭಾಷಯಗಳೊಂದಿಗೆ

ದಾವಣಗೆರೆ, ಹರಿಹರ, ಜಗಳೂರು, ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ ತಾಲ್ಲೂಕುಗಳ

ಬಾಲಭವನ ಕಾರ್ಯಕರ್ತರು ಹಾಗೂ ಸಂಪನ್ಮೂಲ ವ್ಯಕ್ತಿಗಳು

ಬಾಲಭವನ ಜಿಲ್ಲಾ ಹಾಗೂ ತಾಲ್ಲೂಕು ಸಮಿತಿ, ದಾವಣಗೆರೆ

ಹಾರ್ದಿಕ ಶುಭಾಷಯಗಳೊಂದಿಗೆ

ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗ

ನಿಸರ್ಗ ವಿದ್ಯಾನಿಕೇತನ

(ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ)

ಸಿಡೇದಹಳ್ಳಿ, ಹೇಸರಘಟ್ಟ ರಸ್ತೆ, ಬೆಂಗಳೂರು.

ಹಾರ್ದಿಕ ಶುಭಾಷಯಗಳೊಂದಿಗೆ

ಶ್ರೀಮತಿ ಪ್ರತಿಭಾ ಪಿ ದೊಗ್ಗಳ್ಳಿ

ಅಧ್ಯಕ್ಷರು ಹಾಗೂ ಸದಸ್ಯರು

ಎಂ.ಸಿ.ಸಿ ಯೂತ್ ಕ್ಲಬ್(ರಿ), ದಾವಣಗೆರೆ

ಹಾರ್ದಿಕ ಶುಭಾಷಯಗಳೊಂದಿಗೆ

ಅಧ್ಯಕ್ಷರು ಹಾಗೂ ಸದಸ್ಯರು

ನೇಚರ್ (ರಿ) ಸಂಸ್ಥೆ

ಡಾಂಗೆ ಪಾರ್ಕ್ ಹತ್ತಿರ, ನಟುವಳ್ಳಿ ಮುಖ್ಯ ರಸ್ತೆ, ದಾವಣಗೆರೆ

ಹಾರ್ದಿಕ ಶುಭಾಷಯಗಳೊಂದಿಗೆ

ಶ್ರೀಮತಿ ರಾಧ. ಪಿ.ಎಸ್

ಅಧ್ಯಕ್ಷರು ಹಾಗೂ ಸದಸ್ಯರು

ಸಂಕರ್ಷಣಾ (ರಿ) ಸಂಸ್ಥೆ, ಹರಿಹರ.


ಹಾರ್ದಿಕ ಶುಭಾಷಯಗಳೊಂದಿಗೆ

ಶ್ರೀ ಎಂ. ಗುರುಸಿದ್ದಸ್ವಾಮಿ

ಜಿಲ್ಲಾ ಸಂಯೋಜಕರು ಹಾಗೂ ಸರ್ವ ಸದಸ್ಯರು



ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಜಿಲ್ಲಾ ಘಟಕ, ದಾವಣಗೆರೆ





ಕರ್ನಾಟಕ ಸರ್ಕಾರ
ಕರ್ನಾಟಕ ನಾಗರಿಕ ಸೇವೆ ಖಾತರಿ ಅಧಿನಿಯಮ-2011
ಸಕಾಲ
ಇಂದು... ನಾಳೆ... ಇನ್ನಿಲ್ಲ- ಹೇಳಿದ ದಿನ ತಪ್ಪೊಲ್ಲ
ಶ್ರೀ ಜಗದೀಶ್ ಶೆಟ್ಟರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಸರ್ಕಾರದ ನೂರಾರು ಸೇವೆಗಳನ್ನು ನಿಗದಿತ ಸಮಯದೊಳಗೆ ಲಕ್ಷಾಂತರ ನಾಗರಿಕರು ಪಡೆಯುತ್ತಿದ್ದಾರೆ.
ಬನ್ನಿ, ನಿಮ್ಮ ಹಕ್ಕು ಚಲಾಯಿಸಿ.
ವಿಳಂಬವಾದಲ್ಲಿ ಪ್ರತಿದಿನಕ್ಕೆ ರೂ.20/- ರಂತೆ ನೌಕರರ ವೇತನದಿಂದ ನಾಗರಿಕರಿಗೆ ಪಾವತಿಸುವುದು.
ಮಾಹಿತಿ / ದೂರುಗಳಿಗಾಗಿ ಸಂಪರ್ಕಿಸಿ
080-44554455
ಕಡ್ಡಾಯವಾಗಿ ಅರ್ಜಿಗಳ ಸ್ವೀಕೃತಿ ಪತ್ರ ಪಡೆಯಿರಿ
ಅರ್ಜಿಯ ಸ್ಥಿತಿಗತಿಗಳನ್ನು ಅರಿಯಲು ಸ್ವೀಕೃತಿ ಪತ್ರದ ಸಂಖ್ಯೆಯನ್ನು
09212357123ಗೆ SMS ಕಳುಹಿಸಿ
ವೆಬ್‌ಸೈಟ್ : www.sakala.kar.nic.in ಇ-ಮೇಲ್ : sakala@kar.nic.in
ಕರ್ನಾಟಕ ವಾರ್ತೆ





ಪುಸ್ತಕ ಪ್ರಕಾಶನ
91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು -
570 009
ಫೋನ್: 0821-2545 774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:
ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವೀಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ-577 132
ಫೋನ್: 08263-228353,240202,
ಮೊಬೈಲ್: 94482 03730
e-mail: raghu202@bsnl.in




ಪುಸ್ತಕ ಬೆಲೆ ಪಟ್ಟಿ – *2012**

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:
ಕಿರಗೂರಿನ ಗಯ್ಯಾಳಿಗಳು ೮೪.೦೦
ಕರ್ವಾಲೊ ೧೦೫.೦೦
ಚಿದಂಬರ ರಹಸ್ಯ ...೧೬೨.೦೦
ಸಹಜ ಕೃಷಿ ೬೦.೦೦
ಪರಿಸರದ ಕತೆ ೧೦೫.೦೦
ಮಿಸ್ಸಿಂಗ್ ಲಿಂಕ್ ೮೭.೦೦
ಅಲೆಮಾರಿಯ ಅಂಡಮಾನ್ ಹಾಗೂ
ಮಹಾನದಿ ನೈಲ್ ೯೩.೦೦
ಜುಗಾರಿ ಕ್ರಾಸ್ ...೧೬೨.೦೦
ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು ೬೩.೦೦
ಫ್ಲೈಯಿಂಗ್ ಸಾಸರ್ಸ್ (೧) ೭೫.೦೦
ಫ್ಲೈಯಿಂಗ್ ಸಾಸರ್ಸ್ (೨) ೮೧.೦೦
ಕಾಡಿನ ಕತೆಗಳು (೧) ೭೨.೦೦
ಕಾಡಿನ ಕತೆಗಳು (೨) ೬೩.೦೦
ಕಾಡಿನ ಕತೆಗಳು (೩) ೬೩.೦೦
ಕಾಡಿನ ಕತೆಗಳು (೪) ೬೩.೦೦
ರುದ್ರಪ್ರಯಾಗದ ಭಯಾನಕ ನರಭಕ್ಷಕ ೮೪.೦೦
ಕನ್ನಡನಾಡಿನ ಹಕ್ಕಿಗಳು(೧)–ಮಿಂಚುಳ್ಳಿ ೮೧.೦೦
ಕನ್ನಡನಾಡಿನ ಹಕ್ಕಿಗಳು(೨)–
ಹೆಜ್ಜೆ ಮೂಡದ ಹಾದಿ ೯೦.೦೦
ಹಕ್ಕಿ – ಪುಕ್ಕ ...೩೬೯.೦೦
ಅಣ್ಣನ ನೆನಪುಗಳು ...೧೭೫.೦೦
ಹುಲಿಯೂರಿನ ಸರಹದ್ದು ೯೩.೦೦
ಅಬಚೂರಿನ ಪೋಸ್ಟಾಫೀಸು ೮೭.೦೦
ಮಿಲನಿಯಮ್(೧) – ಹುಡುಕಾಟ ೮೧.೦೦
ಮಿಲನಿಯಮ್(೨) – ಜೀವನ ಸಂಗ್ರಾಮ ೭೨.೦೦
ಮಿಲನಿಯಮ್(೩) – ಪೆಸಿಫಿಕ್ ದ್ವೀಪಗಳು ೭೮.೦೦
ಮಿಲನಿಯಮ್(೪) – ಚಂದ್ರನ ಚೂರು ೮೧.೦೦
ಮಿಲನಿಯಮ್(೫) – ನೆರೆಹೊರೆಯ ಗೆಳೆಯರು ೬೬.೦೦
ಮಿಲನಿಯಮ್(೬) – ಮಹಾಯುದ್ಧ(೧) ೭೨.೦೦
ಮಿಲನಿಯಮ್(೭) – ಮಹಾಯುದ್ಧ(೨) ೭೨.೦೦
ಮಿಲನಿಯಮ್(೮) – ಮಹಾಯುದ್ಧ(೩) ೮೧.೦೦
ಮಿಲನಿಯಮ್(೯) – ದೇಶ ವಿದೇಶ(೧) ೬೬.೦೦
ಮಿಲನಿಯಮ್(೧೦) – ದೇಶ ವಿದೇಶ(೨) ೬೬.೦೦
ಮಿಲನಿಯಮ್(೧೧) – ದೇಶ ವಿದೇಶ(೩) ೬೬.೦೦
ಮಿಲನಿಯಮ್(೧೨) – ದೇಶ ವಿದೇಶ(೪) ೮೧.೦೦
ಮಿಲನಿಯಮ್(೧೩) – ವಿಸ್ಮಯ ವಿಶ್ವ(೧) ೭೨.೦೦
ಮಿಲನಿಯಮ್(೧೪) – ಮಹಾ ಪಲಾಯನ ೮೧.೦೦
ಮಿಲನಿಯಮ್(೧೫) – ವಿಸ್ಮಯ ವಿಶ್ವ(೨) ೭೨.೦೦
ಮಿಲನಿಯಮ್(೧೬) – ಅಡ್ವೆಂಚರ್ ೭೨.೦೦
ಮಾಯಾಲೋಕ-೧ ...೨೧೬.೦೦
The Stories of my environment ...144.00
ಪಾಕ ಕ್ರಾಂತಿ ಮತ್ತು ಇತರ ಕತೆಗಳು 72.00
ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ 60.00

ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು
ಇತರ ಕವನಗಳು....೬೦.೦೦
ವಿಮರ್ಶೆಯ ವಿಮರ್ಶೆ ೧೬೨.೦೦
ಮಾಯೆಯ ಮುಖಗಳು(ಚಿತ್ರ ಲೇಖನ)
.... ೬೦೦.೦೦
ಹೊಸ ವಿಚಾರಗಳು ....ಬರಲಿದೆ
ಶ್ರೀಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ
ಕೆಂಜಿಗೆ: ವಿಸ್ಮಯ–೧, ೨, ೩ (ಪ್ರತಿಯೊಂದು
....೭೫.೦೦)
ಪ್ಯಾಪಿಲಾನ್(೧),(೨) ಪ್ರತಿಯೊಂದು ೧೪೭.೦೦
ಶ್ರೀಕೆ.ಪಿ.ಪೂರ್ಣಚಂದ್ರ ತೇಜಸ್ವಿ–
ಡಾ. ವಿ.ವಿ.ಬೆಳವಾಡಿ:
ನೆಡೆಯುವ ಕಡ್ಡಿ! ಹಾರುವ ಎಲೆ! ೬೩.೦೦
ಶ್ರೀ ಪ್ರದೀಪ ಕೆಂಜಿಗೆ: ಬರ್ಮುಡಾ
ಟ್ರ್ಯಾಂಗಲ್ ೭೨.೦೦
ಅದ್ಭುತ ಯಾನ ೧೦೮.೦೦
ಹೆಬ್ಬಾವಿನೊಡನೆ ಹೋರಾಟ
ಶ್ರೀ ಎಮ್.ಶಿವಕುಮಾರ್:
ಸೈಕಲ್ ವಾಲ ೪೦.೦೦
ಕಂಪ್ಯೂಟರ್ ಕಲಿಯಿರಿ ...೧೪೭.೦೦
ಗಡಿಯಾರ ವಿಕಾಸದ ಹಾದಿಯಲ್ಲಿ ...೬೬.೦೦
ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ್ಣ ಗೌಡರು:
ಅಚ್ಚಗನ್ನಡ ನುಡಿಕೋಶ ...೩೬೦.೦೦
ಶ್ರೀ ನರೇಂದ್ರ ರೈ ದೇರ್ಲ:ಸಾವಯವ ಕೃಷಿ
.....೫೧.೦೦
ಶ್ರೀ ಕೃಪಾಕರ – ಸೇನಾನಿ: ಸೆರೆಯಲ್ಲಿ
ಕಳೆದ ಹದಿನಾಲ್ಕು ದಿನಗಳು ೯೩.೦೦
ಶ್ರೀ ಕೃಷ್ಣ ಆಲನಹಳ್ಳಿ: ಗೋಡೆ.....೬೬.೦೦
ಡಾ. ಎಸ್.ಎಂ.ವೃಷಭೇಂದ್ರ ಸ್ವಾಮಿ:
ತರಗತಿಗಳಲ್ಲಿ ಕುವೆಂಪು ...೧೯೮.೦೦
ಶ್ರೀ ದೇವನೂರು ಮಹಾದೇವ:
ಕುಸುಮಬಾಲೆ ೬೦.೦೦
ದ್ಯಾವನೂರು ಹಾಗೂ ಒಡಲಾಳ....೯೬.೦೦
ಶ್ರೀಮತಿ ತಾರಿಣಿ ಚಿದಾನಂದ: ಮಗಳು
ಕಂಡ ಕುವೆಂಪು ...೩೦೦.೦೦
ಶ್ರೀಮತಿ ಪದ್ಮಾಶ್ರೀರಾಮ: ಗಿಡಗಂಟೆಯಾ
ಕೊರಳು ೬೯.೦೦
ಡಾ. ಕೆ.ಚಿದಾನಂದ ಗೌಡ:
ಬದುಕು.. ಬೆಳಕು... ಚುಟುಕು....! ಭಾಗ೧
....೮೯.೦೦
ಬದುಕು.. ಬೆಳಕು... ಚುಟುಕು....! ಭಾಗ೨
....೯೦.೦೦
ಶ್ರೀಮತಿ ರಾಜೇಶ್ವರಿ ತೇಜಸ್ವಿ: ನನ್ನ
ತೇಜಸ್ವಿ ...೩೬೯.೦೦

---

*ಹೊಸ ಆವೃತ್ತಿ(Edition) ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.